ದುಡಿಯುವ ಜನರ ಪ್ರಾಣ ಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ

ಸಂಪುಟ 15 | ಸಂಚಿಕೆ 52 | ಡಿಸೆಂಬರ್ 20–26, 2021 | ಪುಟ 16 | ರೂ. 10

https://janashakthi.wordpress.com e-mail : js_weekly@yahoo.com



ಕಾಂ. ಎನ್.ರಾಮಕೃಷ್ಣನ್ ಲಾಲ್ ಸಲಾಂ



ಭ್ರಷ್ಟ-ಕಾರ್ಪೊರೇಟ್ ಲೂಟಿ ಮುಕ್ತ ಸೌಹಾರ್ದ - ಸಮೃದ್ಧ ಕರ್ನಾಟಕಕ್ಕಾಗಿ

ವಿಶೇಷ ಲೇಖನಗಳು



ಓಮಿಕ್ರೋನ್ ಬಗ್ಗೆ ಈಗ ನಮಗೆಷ್ಟು ತಿಳಿದಿದೆ?



ಪ್ರಜಾಪ್ರಭುತ್ವದ ಹೆಸರಿನಲ್ಲಿ ಬಣ್ಣ-ಬಣ್ಣದ ಮಾತುಗಳಾಟ



ಕರ್ನಾಟಕದಲ್ಲಿ ದೆಹಲಿ ಮಾದರಿ ರೈತ ಹೋರಾಟಕ್ಕೆ ಸಜ್ಜು

ರೈತರ ಐಕ್ಯ ಆಂದೋಲನಕ್ಕೆ ಐತಿಹಾಸಿಕ ವಿಜಯ -ಸಿಪಿಐ(ಎಂ) ಪೊಲಿಟ್‌ಬ್ಯುರೊ ಅಭಿನಂದನೆ

ಸಂಯುಕ್ತ ಕಿಸಾನ್ ಮೋರ್ಚಾ (SKM), ವಿವಿಧ ರೈತ ಮತ್ತು ಕೃಷಿ ಕಾರ್ಮಿಕರ ಸಂಘಟನೆಗಳು ಮತ್ತು ರೈತರು ಐತಿಹಾಸಿಕ ವಿಜಯವನ್ನು ಪಡೆದಿದ್ದಾರೆ ಎಂದು ಅವರನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ಅಭಿನಂದಿಸಿದೆ. ರೈತರ ಈ ಹೋರಾಟದಿಂದಾಗಿ ಮೋದಿ ಸರಕಾರ ಕಾರ್ಪೊರೇಟ್ ನಿಯಂತ್ರಣಕ್ಕೆ ಮತ್ತು ಕೃಷಿ ವಲಯವನ್ನು ಸ್ವಾಧೀನಪಡಿಸಿಕೊಳ್ಳಲು ಅವಕಾಶ ಕಲ್ಪಿಸುವ ಮೂರು ಕರಾಳ ಕಾನೂನುಗಳನ್ನು ರದ್ದುಗೊಳಿಸಲೇ ಬೇಕಾಗಿ ಬಂದಿದೆ. ಈ ರೈತರ ಹೋರಾಟಕ್ಕೆ ಬೆಂಬಲ ನೀಡಿದ ಕಾರ್ಮಿಕ ಸಂಘಟನೆಗಳು ಮತ್ತು ಇತರ ಪ್ರಜಾಪ್ರಭುತ್ವ ವಿಭಾಗಗಳು ದೃಢವಾದ ಸೌಹಾರ್ದ ನೀಡಿದ್ದಾರೆಂದು ಅವರನ್ನು ಪೊಲಿಟ್‌ಬ್ಯುರೊ ಶ್ಲಾಘಿಸಿದೆ.

ಪ್ರಸ್ತುತ ಸರ್ಕಾರದ ಅಡಿಯಲ್ಲಿ ಜನರ ಜೀವನೋಪಾಯ ಮತ್ತು ಹಕ್ಕುಗಳ ಮೇಲಿನ ಒಟ್ಟಾರೆ ಪ್ರಹಾರವನ್ನು ಪ್ರತಿರೋಧಿಸುವಲ್ಲಿ ಐಕ್ಯತೆ ಮತ್ತು ಚೈತನ್ಯಶೀಲತೆ ಏನನ್ನು ಸಾಧಿಸಬಹುದು ಎಂಬುದಕ್ಕೆ ಈ ಚಳುವಳಿ ಒಂದು ಉಜ್ವಲ ಉದಾಹರಣೆಯಾಗಿದೆ. ಐಕ್ಯ ಹೋರಾಟಗಳು ಜಾತಿ-ಸಮುದಾಯಗಳ ವ್ಯತ್ಯಾಸಗಳನ್ನೂ ಮೀರಿ ನಿಂತು ಪ್ರಜಾಪ್ರಭುತ್ವವನ್ನು ಉಳಿಸುವಲ್ಲಿ ಮತ್ತು ಹಳ್ಳಿಗಳನ್ನು ಹಿಮ್ಮೆಟ್ಟಿಸುವಲ್ಲಿ ಜಯಶಾಲಿಯಾಗುತ್ತವೆ ಎಂಬುದನ್ನು ಈ ಗೆಲುವು ತೋರಿಸುತ್ತದೆ ಎಂದು ಸಿಪಿಐ(ಎಂ) ಹೇಳಿದೆ.

ಡಿಸೆಂಬರ್ 11ರಿಂದ ದೆಹಲಿಯ ಗೇಟ್‌ಗಳಲ್ಲಿ ನಿರ್ಬಂಧಗಳನ್ನು ಸದ್ಯಕ್ಕೆ ತೆಗೆಯುವ ಕ್ರಿಯೆ ಆರಂಭವಾಗಿದ್ದು ದೇಶದಾದ್ಯಂತ ಈ ಸಂದರ್ಭದಲ್ಲಿ ನಡೆಯುತ್ತಿರುವ ವಿಜಯೋತ್ಸವಗಳಲ್ಲಿ ಪಾಲ್ಗೊಳ್ಳಬೇಕು ಎಂದು ಪಕ್ಷದ ಎಲ್ಲ ಘಟಕಗಳು ಮತ್ತು ಇತರ ಪ್ರಗತಿಪರ ವಿಭಾಗಗಳಿಗೆ ಪೊಲಿಟ್‌ಬ್ಯುರೊ ಮನವಿ ಮಾಡಿದೆ. ಕೃಷಿ ಬಿಕ್ಕಟ್ಟನ್ನು ಪರಿಹರಿಸಲು ದೇಶಾದ್ಯಂತ ಎಲ್ಲಾ ಬೆಳೆಗಳಿಗೆ ಮತ್ತು ಎಲ್ಲಾ ರೈತರಿಗೆ ಖಾತರಿಪಡಿಸುವ ಕನಿಷ್ಟ ಬೆಂಬಲ ಬೆಲೆಯನ್ನು ಖಾತ್ರಿ ಪಡಿಸಬೇಕೆಂಬ ನ್ಯಾಯಸಮ್ಮತವಾದ ಆಗ್ರಹವನ್ನು ಈಡೇರಿಸಿಕೊಳ್ಳುವ ಮತ್ತು ಕೃಷಿ ಬಿಕ್ಕಟ್ಟನ್ನು ಎದುರಿಸಲು ಇತರ ಬಾಕಿ ಉಳಿದಿರುವ ಪ್ರಶ್ನೆಗಳನ್ನು ಪರಿಹರಿಸುವ ಎಸ್.ಕೆ.ಎಂ.ನ ಪ್ರಯತ್ನಗಳಿಗೆ ಸೌಹಾರ್ದವನ್ನು ಸಿಪಿಐ(ಎಂ) ವ್ಯಕ್ತಪಡಿಸಿದೆ.

ಈ ಸುದೀರ್ಘ ಹೋರಾಟದಲ್ಲಿ ತಮ್ಮ ಪ್ರಾಣವನ್ನು ಅರ್ಪಿಸಿದ 700 ಕ್ಕೂ ಹೆಚ್ಚು ಜನರಿಗೆ ನಮನಗಳನ್ನು ಸಲ್ಲಿಸಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ. ಹುತಾತ್ಮರ ಕುಟುಂಬಗಳಿಗೆ ಸರ್ಕಾರ ಪರಿಹಾರ ನೀಡಬೇಕು ಎಂದು ಕರೆ ನೀಡಿದೆ ಮತ್ತು ಯಾವುದೇ ವಿಳಂಬ ಮಾಡದೆ ಹೋರಾಟಕ್ಕೆ ಸಂಬಂಧಿಸಿದ ಎಲ್ಲ ಪ್ರಕರಣಗಳನ್ನು ಹಿಂಪಡೆಯಬೇಕು ಎಂದು ಅದು ಆಗ್ರಹಿಸಿದೆ.

ಜಮ್ಮು-ಕಾಶ್ಮೀರ ಹೈಕೋರ್ಟ್ ಮುಖ್ಯ ನ್ಯಾಯಾಧೀಶರನ್ನು ವಜಾಗೊಳಿಸಬೇಕು-ರಾಷ್ಟ್ರಪತಿಗಳಿಗೆ ಯೆಚುರಿ ಪತ್ರ

ಜಮ್ಮು ಮತ್ತು ಕಾಶ್ಮೀರ ಮತ್ತು ಲಡಾಖ್ ಹೈಕೋರ್ಟಿನ ಮುಖ್ಯ ನ್ಯಾಯಾಧೀಶ ನ್ಯಾಯಮೂರ್ತಿ ಪಂಕಜ್ ಮಿತ್ತಲ್ ಅವರು ತನ್ನ ಉನ್ನತ ಸಂವಿಧಾನಿಕ ಹುದ್ದೆಗೆ ಭಂಗ ತಂದಿದ್ದಾರೆ, ತಾನು ಸ್ವೀಕರಿಸಿದ ಪ್ರಮಾಣ ವಚನವನ್ನು ಉಲ್ಲಂಘಿಸಿದ್ದಾರೆ, ಆದ್ದರಿಂದ ಅವರನ್ನು ಅವರ ಹುದ್ದೆಯಿಂದ ವಜಾ ಮಾಡಬೇಕು ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ ರಾಷ್ಟ್ರಪತಿಗಳನ್ನು ಆಗ್ರಹಿಸಿದ್ದಾರೆ.

ಈ ಕುರಿತಂತೆ ಅವರು ಡಿಸೆಂಬರ್ 16 ರಂದು ಅವರ ವಿರುದ್ಧದ ಗಂಭೀರ ದೂರನ್ನು ರಾಷ್ಟ್ರಪತಿಗಳ ಗಮನಕ್ಕೆ ತರಲು ಅವರಿಗೆ ಪತ್ರ ಬರೆದಿದ್ದಾರೆ.

ನ್ಯಾಯಮೂರ್ತಿ ಮಿತ್ತಲ್ ಡಿಸೆಂಬರ್ 5 ರಂದು ಜಮ್ಮುವಿನಲ್ಲಿ ಆರ್‌ಎಸ್‌ಎಸ್‌ಗೆ ಸಂಯೋಜಿತವಾದ ಸಂಘಟನೆಯೊಂದು ಆಯೋಜಿಸಿದ್ದ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದರು, ಅಲ್ಲಿ ಅವರು ಭಾರತದ ಸಂವಿಧಾನದ ವಿರುದ್ಧ ಮಾತನಾಡಿದರು.

ಶ್ರೀ ಮಿತ್ತಲ್ ಅವರು ಅಖಿಲ ಭಾರತೀಯ ಅಧಿವಕ್ತ ಪರಿಷದ್ ಆಯೋಜಿಸಿದ್ದ ವಿಚಾರ ಸಂಕಿರಣವನ್ನು ಉದ್ದೇಶಿಸಿ ಮಾತನಾಡುತ್ತ "ಸಂವಿಧಾನದ ಪೀಠಿಕೆಯಲ್ಲಿ ಜಾತ್ಯತೀತ ಮತ್ತು ಸಮಾಜವಾದಿ ಪದಗಳನ್ನು ಸೇರಿಸಿರುವುದು ಭಾರತದ ಆಧ್ಯಾತ್ಮಿಕ ಚಿತ್ರಣವನ್ನು ಕಿರಿದಾಗಿಸಿದೆ" ಎಂದು ಹೇಳಿರುವುದಾಗಿ ಮಾಧ್ಯಮಗಳಲ್ಲಿ ವ್ಯಾಪಕವಾಗಿ ವರದಿಯಾಗಿದೆ. ಅಲ್ಲದೆ "ಕೆಲವೊಮ್ಮೆ, ನಮ್ಮ ಹಟಮಾರಿತನದಿಂದಾಗಿ ನಾವು ತಿದ್ದುಪಡಿಗಳನ್ನು ತರುತ್ತೇವೆ" ಎಂದೂ ಅವರು ಹೇಳಿರುವುದಾಗಿ ವರದಿಯಾಗಿದೆ.

ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರೊಬ್ಬರು ದೇಶದ ಸಂವಿಧಾನದ ವಿರುದ್ಧ ಹೇಳಿಕೆಗಳನ್ನು ನೀಡುವುದು, ಅದೂ ಒಂದು ನಿರ್ದಿಷ್ಟ ಸಿದ್ಧಾಂತವನ್ನು ಬೋಧಿಸುವ ವೇದಿಕೆಯಿಂದ ನೀಡಿರುವುದು ಅಕ್ಷಮ್ಯ ಅಪರಾಧವಾಗಿದೆ, ಇದು ಅವರು ಸಾಂವಿಧಾನಿಕ ಕಾರ್ಯಗಳನ್ನು ನಿರ್ವಹಿಸುವುದಾಗಿ ಮಾಡಿದ ಪ್ರಮಾಣ ವಚನವನ್ನು ಉಲ್ಲಂಘಿಸುತ್ತದೆ.

ಶ್ರೀ ಮಿತ್ತಲ್ ಅವರ ನಡವಳಿಕೆಯು ಮುಖ್ಯ ನ್ಯಾಯಾಧೀಶರ ಸಾಂವಿಧಾನಿಕ ಹುದ್ದೆಗೆ ತಕ್ಕುದಾದುದಲ್ಲವಾದ್ದರಿಂದ ಅವರನ್ನು ತಕ್ಷಣವೇ ಆ ಹುದ್ದೆಯಿಂದ ತೆಗೆದು ಹಾಕಬೇಕಾಗುತ್ತದೆ. ಸಂವಿಧಾನದ ಪಾಲಕರಾಗಿ, ಪ್ರಭುತ್ವದ ಮುಖ್ಯಸ್ಥರಾಗಿ ಮತ್ತು ಮಿತ್ತಲ್ ಅವರನ್ನು ನೇಮಕ ಮಾಡಿದವರಾಗಿ, ಸಂವಿಧಾನದ ಪಾವಿತ್ರ್ಯತೆ ಮತ್ತು ನ್ಯಾಯಾಂಗದ ಸ್ವಾತಂತ್ರ್ಯವನ್ನು ಎತ್ತಿ ಹಿಡಿಯಲು, ಅವರನ್ನು ಅಧಿಕಾರದಿಂದ ತೆಗೆದುಹಾಕುವ ಪ್ರಕ್ರಿಯೆಯನ್ನು ತಕ್ಷಣವೇ ಪ್ರಾರಂಭಿಸಬೇಕು ಎಂದು ಯೆಚುರಿ ರಾಷ್ಟ್ರಪತಿಗಳನ್ನು ಕೋರಿದ್ದಾರೆ.

ಹರಿಯಾಣದ ಮುಖ್ಯಮಂತ್ರಿ ನಿರ್ಧಾರವನ್ನು ಹಿಂಪಡೆಯಬೇಕು-ಸಿಪಿಐ(ಎಂ)

ಹರಿಯಾಣದ ಮುಖ್ಯಮಂತ್ರಿ ಮನೋಹರ್ ಲಾಲ್ ಖಟ್ಟರ್ ಡಿಸೆಂಬರ್ 10ರಂದು ನೀಡಿದ ಹೇಳಿಕೆ ಅತ್ಯಂತ ಆಕ್ಷೇಪಾರ್ಹ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಬಲವಾಗಿ ಖಂಡಿಸಿದೆ.

ಸಾರ್ವಜನಿಕ ಸ್ಥಳಗಳಲ್ಲಿ ನಮಾಜ್ ಮಾಡುವ ಪದ್ಧತಿಯನ್ನು ಸಹಿಸಲು ಸಾಧ್ಯವಿಲ್ಲ ಎಂದು ಅವರು ಹೇಳಿದ್ದಾರೆ. ಎಲ್ಲಾ ಧರ್ಮಗಳಿಗೆ ಸೇರಿದ ಜನರ ಪ್ರಾರ್ಥನಾ ಸಭೆಗಳು ನಿಯಮಿತವಾಗಿ ತೆರೆದ ಸ್ಥಳದಲ್ಲಿ ನಡೆಯುತ್ತವೆಯಾದ್ದರಿಂದ ಇಂತಹ ಹೇಳಿಕೆಯು ಸ್ವೀಕಾರಾರ್ಹವಲ್ಲ. ಗುರ್‌ಗಾಂವ್‌ನ ಮುಸ್ಲಿಂ ಸಮುದಾಯದ ಸದಸ್ಯರಿಗೆ ತೆರೆದ ಸ್ಥಳಗಳಲ್ಲಿ ಶುಕ್ರವಾರ ಪ್ರಾರ್ಥನೆ ಸಲ್ಲಿಸಲು ಅವರ ಸ್ವಂತ ಆಡಳಿತ ಅನುಮತಿಯನ್ನು ನೀಡಿತ್ತು. ಏಕೆಂದರೆ ಅವರು ಇದನ್ನು ಮಾಡಬಹುದಾದ ಮಸೀದಿಗಳಿಂದ ವಂಚಿತರಾಗಿದ್ದಾರೆ. ಈಗ ತಮ್ಮ ಆಡಳಿತವೇ ನೀಡಿದ್ದ ಅನುಮತಿಯನ್ನು ಮುಖ್ಯಮಂತ್ರಿಗಳು ಹಿಂಪಡೆದಿದ್ದಾರೆ.

ಪೋಲೀಸರು ಸುಮ್ಮನೇ ನೀತುಕೊಂಡು ನ್ಯಾಯದ ಸೋಲಲು ಅವಕಾಶ ಮಾಡಿಕೊಟ್ಟಿದ್ದಾರೆ. ದುಷ್ಕರ್ಮಿಗಳಿಗೆ ಶಿಕ್ಷೆ ಮತ್ತು ಪ್ರಾರ್ಥನೆಗಳನ್ನು ಶಾಂತಿಯುತವಾಗಿ ಕೈಗೊಳ್ಳಲು ಅನುವು ಮಾಡಿಕೊಡುವ ಬದಲು, ಮುಖ್ಯಮಂತ್ರಿಗಳು ಭಾರತೀಯ ನಾಗರಿಕರ ಒಂದು ವಿಭಾಗಕ್ಕೆ ಸಂವಿಧಾನದ ಮೂಲಭೂತ ಹಕ್ಕನ್ನು ನಿರಾಕರಿಸುತ್ತಿದ್ದಾರೆ.

ಈ ನಿರ್ಧಾರವನ್ನು ಹಿಂತೆಗೆದುಕೊಂಡು ಶುಕ್ರವಾರದ ಪ್ರಾರ್ಥನೆಗಳು ಶಾಂತಿಯುತವಾಗಿ ನಡೆಯುವುದನ್ನು ಖಚಿತಪಡಿಸಿಕೊಳ್ಳಲು ಹರಿಯಾಣ ಸರ್ಕಾರ ವ್ಯವಸ್ಥೆ ಮಾಡಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಒತ್ತಾಯಿಸಿದೆ.

10 ಲಕ್ಷ ಬ್ಯಾಂಕ್ ನೌಕರರ, ಅಧಿಕಾರಿಗಳ ಧೀರೋದ್ದಾತ ಮುಷ್ಕರ-ಸಿಐಟಿಯು ಅಭಿನಂದನೆ

ಡಿಸೆಂಬರ್ 16 ಮತ್ತು 17 ರಂದು ಸುಮಾರು 10 ಲಕ್ಷ ಬ್ಯಾಂಕ್ ನೌಕರರು ಮತ್ತು ಅಧಿಕಾರಿಗಳು ತಮ್ಮ ಐಕ್ಯವೇದಿಕೆ ಯುಎಫ್‌ಬಿಯು ಕರೆಗೆ ಓಗೊಟ್ಟು ಬ್ಯಾಂಕ್ ಖಾಸಗೀಕರಣದ ವಿರುದ್ಧ ಯಶಸ್ವಿ ಮುಷ್ಕರ ನಡೆಸಿದ್ದಾರೆ. ಇದಕ್ಕೆ ಕಾರ್ಮಿಕರು ಮತ್ತು ಅವರನ್ನು ಪ್ರತಿನಿಧಿಸುವ ಕಾರ್ಮಿಕ ಸಂಘಟನೆಗಳು ಮಾತ್ರವಲ್ಲ, ಜನಸಾಮಾನ್ಯರೂ ಬೆಂಬಲ ನೀಡಿದ್ದಾರೆ. ದೇಶಾದ್ಯಂತ್ಯ ಬ್ಯಾಂಕ್ ನೌಕರರು ನಡೆಸಿದ ಮತಪ್ರದರ್ಶನಗಳಲ್ಲಿ ಕಾರ್ಮಿಕರು ಮತ್ತು ನೌಕರರ ಇತರ ವಿಭಾಗಗಳವರೂ ಜತೆಗೂಡಿದರು. ರಿಝರ್ವ್ ಬ್ಯಾಂಕ್, ನಬಾರ್ಡ್, ವಿಮಾನೌಕರರು, ಬಿಎಸ್‌ಎನ್‌ಎಲ್ ನೌಕರರು. ಕೇಂದ್ರ ಸರಕಾರೀ ನೌಕರರು ತಂತಮ್ಮ ಕಚೇರಿಗಳಲ್ಲಿ ಸೌಹಾರ್ದ ಮತ ಪ್ರದರ್ಶನ ನಡೆಸಿದರು.

ಕೇಂದ್ರೀಯ ಕಾರ್ಮಿಕ ಸಂಘಟನೆಗಳ ಜಂಟಿ ವೇದಿಕೆಯ ವತಿಯಿಂದ ಕೂಡ ಈ ಮುಷ್ಕರಕ್ಕೆ ಸಂಪೂರ್ಣ ಬೆಂಬಲ ವ್ಯಕ್ತಪಟ್ಟಿದೆ. ಅಂತರ್ರಾಷ್ಟ್ರೀಯವಾಗಿ ಕೂಡ ಈ ಮುಷ್ಕರಕ್ಕೆ ಬೆಂಬಲ ವ್ಯಕ್ತವಾಗಿದೆ. ವಿಶ್ವ ಕಾರ್ಮಿಕ ಸಂಘಗಳ ಒಕ್ಕೂಟ ಡಬ್ಲ್ಯುಎಫ್‌ಟಿಯು ಈ ಹೋರಾಟಕ್ಕೆ ಬೆಂಬಲ ನೀಡಿ ಹೇಳಿಕೆ ಕೊಟ್ಟಿದೆ.

ಬ್ಯಾಂಕ್ ನೌಕರರ ಈ ಧೀರೋದ್ದಾತ ಹೋರಾಟಕ್ಕೆ ಸರಕಾರ ಸ್ಪಂದಿಸಬೇಕು, ತಕ್ಷಣವೇ ಬ್ಯಾಂಕ್ ಖಾಸಗೀಕರಣದ ಧಾವಂತವನ್ನು ನಿಲ್ಲಿಸಬೇಕು, ಅದಕ್ಕೆ ಬದಲಾಗಿ ಸಾರ್ವಜನಿಕ ವಲಯದ ಬ್ಯಾಂಕುಗಳ ಬಲವರ್ಧನೆಯ ಮೇಲೆ ಗಮನ ಕೇಂದ್ರೀಕರಿಸಬೇಕು ಎಂದು ಸಿಐಟಿಯು ಆಗ್ರಹಿಸಿದೆ.







ಭ್ರಷ್ಟ-ಕಾರ್ಪೋರೇಟ್ ಲೂಟಿ ಮುಕ್ತ, ಸೌಹಾರ್ದ-ಸಮೃದ್ಧ ಕರ್ನಾಟಕಕ್ಕಾಗಿ ಸಿಪಿಐ(ಎಂ) 23ನೇ ರಾಜ್ಯ ಸಮ್ಮೇಳನ

ಕೊಪ್ಪಳ: ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)– ಸಿಪಿಐ(ಎಂ), ಕರ್ನಾಟಕ ರಾಜ್ಯ 23ನೇ ಸಮ್ಮೇಳನ 2022ರ ಜನವರಿ 2, 3, 4ರಂದು ಗಂಗಾವತಿಯಲ್ಲಿ ನಡೆಯಲಿದೆ. ರಾಜ್ಯದ ಜನತೆಯನ್ನು ಸಂರಕ್ಷಣೆ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಜೊತೆಗೂಡಿ ರಾಜ್ಯದಲ್ಲಿ ಚಳುವಳಿಯನ್ನು ಬಲಗೊಳಿಸಲು ಮತ್ತು ಭ್ರಷ್ಟ ಹಾಗೂ ಲೂಟಿಕೋರ ಕಾರ್ಪೋರೇಟ್ ಮುಕ್ತ, ಸೌಹಾರ್ದ ಹಾಗೂ ಸಮೃದ್ಧ ಕರ್ನಾಟಕದ ಕಾರ್ಯಕ್ರಮವನ್ನು ರೂಪಿಸಲು ಸಮ್ಮೇಳನವು ಕ್ರಮವಹಿಸಲಿದೆ ಎಂದು ಸಿಪಿಐ(ಎಂ) ಪಕ್ಷದ ರಾಜ್ಯ ಕಾರ್ಯದರ್ಶಿ ಯು. ಬಸವರಾಜ ತಿಳಿಸಿದರು.

ಕರ್ನಾಟಕದಲ್ಲಿ ಜನತೆಯ ಆದೇಶದ ಮೂಲಕ ಅಧಿಕಾರ ಪಡೆಯದ ಬಿಜೆಪಿಯು, ತನ್ನ ಹಣ ಬಲ, ಕೇಂದ್ರ ಅಥವಾ ಒಕ್ಕೂಟ ಸರಕಾರ ಹಾಗೂ ರಾಜ್ಯಪಾಲರ ಕಚೇರಿಯನ್ನು ದುರುಪಯೋಗ ಪಡಿಸಿಕೊಂಡು ಕಾಂಗ್ರೆಸ್-ಜೆಡಿಎಸ್ ಪಕ್ಷಗಳ ಅಸಂತೃಪ್ತ ಶಾಸಕರನ್ನು ನೀಚ ಅಪರೇಷನ್ ಕಮಲದ ಮೂಲಕ ಖರೀದಿಸಿ, ದೌರ್ಜನ್ಯದ ಮೂಲಕ ಆಡಳಿತ ನಡೆಸುತ್ತಿದ್ದು, ಈ ಅವಧಿಯಲ್ಲಿ ತನ್ನ ಒಕ್ಕೂಟ ಹಾಗೂ ಕೇಂದ್ರ ಸರಕಾರದ ನೆರವು ಪಡೆದು ರಾಜ್ಯದ ಜನತೆಯನ್ನು ರಕ್ಷಿಸುವ ಬದಲು ಜನತೆಗೆ ಯಾವುದೇ ಪರಿಣಾಮಕಾರಿ ನೆರವು ನೀಡದೇ ಅವರನ್ನು ದುಸ್ಥಿತಿಗೆ ತಳ್ಳಿದೆ ಎಂದು ಹೇಳಿದರು.

ಬೆಂಕಿಬಿದ್ದ ಮನೆಯಲ್ಲಿ ಗಳ ಕದ್ದರು ಎಂಬಂತೆ ಕೋವಿಡ್ ಸಂಕಷ್ಟದಲ್ಲಿರುವ ಜನತೆಗೆ ನೆರವು ನೀಡುವ ಬದಲು, ಆಸ್ಪತ್ರೆ ಬೆಡ್‌ಗಳು, ಆಮ್ಲಜನಕ, ಲಸಿಕೆ, ಔಷದಿ, ಲಭ್ಯವಿಲ್ಲವೆಂದು ಸುಳ್ಳು ಹೇಳಿ ಕೃತಕ ಅಭಾವ ಸೃಷ್ಟಿಸಿ ಕಾಳ ಸಂತೆ ವ್ಯಾಪಾರ ನಡೆಸಿ ಲೂಟಿಗೈಯ್ಯಲು ಆಡಳಿತ ಪಕ್ಷ ಬಿಜೆಪಿ, ಆರ್‌ಎಸ್‌ಎಸ್ ಲೂಟಿಕೋರರು ಮತ್ತು ಶಾಸಕರು ಮುಂದಾದುದನ್ನು ರಾಜ್ಯದ ಜನತೆ ನೋಡಿದೆ. ಅದೇ ರೀತಿ, ಜನತೆಯ ಸಂಕಷ್ಟದ ಸಂದರ್ಭವನ್ನು ದುರುಪಯೋಗ ಮಾಡಿ, ರಾಜ್ಯವನ್ನು ಕಾರ್ಪೋರೇಟ್ ಕಂಪನಿಗಳ ಲೂಟಿಗೆ ತೆರೆಯುವ ಕಾಯ್ದೆಗಳನ್ನು ಜಾರಿಗೊಳಿಸಿದೆ ಎಂದು ಯು. ಬಸವರಾಜ ತಿಳಿಸಿದರು.

ರಾಜ್ಯ ಮುಖಂಡ ನಿತ್ಯಾನಂದಸ್ವಾಮಿ ಮಾತನಾಡಿ, ಈ ನಾಲ್ಕು ವರ್ಷಗಳಲ್ಲಿ ರಾಜ್ಯವು ಎರಡು ವರ್ಷ ಕಾಲ ಅತಿವೃಷ್ಟಿ, ಪ್ರವಾಹಗಳಿಗೆ ತುತ್ತಾದರೆ, ಮತ್ತೆರಡು ವರ್ಷ ಕೋವಿಡ್ ಸಾಂಕ್ರಾಮಿಕ ಹಾಗೂ ಲಾಕ್‌ಡೌನ್ ಸಮಸ್ಯೆಗಳಿಂದ ನಲುಗಿ ಹೋಗಿದೆ.

ಇಂತಹ ಆತಂಕದ ಸಂದರ್ಭದಲ್ಲೂ ತಮ್ಮ ಜೀವನವನ್ನು ಬದುಕನ್ನು ಉಳಿಸಿಕೊಳ್ಳಲು ಜನತೆ ಹೋರಾಟದಲ್ಲಿ ತೊಡಗದಂತೆ, ಅದನ್ನು ಮುರಿಯಲು ಮತಾಂಧ ಶಕ್ತಿಗಳು ಸೌಹಾರ್ದತೆಗೆ ಭಂಗ ಉಂಟು ಮಾಡುತ್ತಿದ್ದರೆ, ಅಂತಹ ಶಕ್ತಿಗಳನ್ನು ನಿಗ್ರಹಿಸುವ ಬದಲು ರಾಜ್ಯ ಸರ್ಕಾರ ಕುಮ್ಮಕ್ಕು ನೀಡುತ್ತಿದೆ. ಸರಕಾರವೇ ಜಾನುವಾರು ಹತ್ಯೆ ನಿಷೇದ ತಿದ್ದುಪಡಿ ಕಾಯ್ದೆ ಮೂಲಕ ಮತ್ತು ಲವ್ ಜೆಹಾದ್, ಮತಾಂತರ ನಿಷೇಧ ಕಾಯ್ದೆಗಳನ್ನು ಜಾರಿಗೊಳಿಸುವ ಬೆದರಿಕೆಯ ಹೆಸರಿನಲ್ಲಿ ಅಲ್ಪಸಂಖ್ಯಾತರು, ದಲಿತರು, ಮಹಿಳೆಯರ ಮೇಲಿನ ಧಾಳಿಗಳಿಗೆ, ಲೂಟಿಗೆ ಕುಮ್ಮಕ್ಕು ನೀಡುತ್ತಿದೆ. ರಾಜ್ಯದಲ್ಲಿನ ಜಾತಿ ತಾರತಮ್ಯ ಹಾಗೂ ಅಸ್ಪೃಶ್ಯಾಚರಣೆ ತೊಲಗಿಸುವ ಕ್ರಮ ವಹಿಸುವ ಬದಲು ಮತ್ತಷ್ಟು ಜಾತಿ ವಿಭಜನೆ ತರಲು ಪ್ರೋತ್ಸಾಹ, ನೆರವು ನೀಡುತ್ತಿದೆ ಎಂದು ಹೇಳಿದರು.

ರಾಜ್ಯವು ಭ್ರಷ್ಟಾಚಾರದಿಂದಲೂ ತೀವ್ರವಾಗಿ ನಲುಗಿ ಹೋಗಿದೆ. ಗುತ್ತಿಗೆದಾರರಿಂದ ಶೇಕಡ 40 ಕಮಿಷನ್ ವಸೂಲಾತಿ, ಬಿಟ್ ಕಾಯಿನ್ ಹಗರಣದಲ್ಲಿ ಸಾರ್ವಜನಿಕ ಸಂಪನ್ಮೂಲದ ಲೂಟಿ, ಪ್ರತಿಯೊಂದು ಇಲಾಖೆಯಲ್ಲೂ ಭ್ರಷ್ಟಾಚಾರ, ಜನತೆಯ ಸೌಲಭ್ಯ ನೀಡುವಾಗಲೂ ಭ್ರಷ್ಟಾಚಾರ ತಾಂಡವವಾಡುತ್ತಿದೆ.



ಈ ಎಲ್ಲ ಕಾರಣದಿಂದ ರಾಜ್ಯದ ದುಡಿಯುವ ಜನತೆ ಅತ್ಯಂತ ಕೆಟ್ಟ ಬಡತನಕ್ಕೆ ಸಂಕಷ್ಟಕ್ಕೆ ತಳ್ಳಲ್ಪಟ್ಟರೇ ಶ್ರೀಮಂತರು ಇದನ್ನು ದುರುಪಯೋಗ ಪಡಿಸಿಕೊಂಡು ಭಾರೀ ಶ್ರೀಮಂತರಾಗುತ್ತಿದ್ದಾರೆ. ಬಡವರು, ದಲಿತರು, ಮಹಿಳೆಯರು ಮತ್ತು ಅಲ್ಪಸಂಖ್ಯಾತರ ಮೇಲಿನ ದಾಳಿಗಳು ಹೆಚ್ಚುತ್ತಿವೆ.

ವಿರೋಧ ಪಕ್ಷಗಳಾದ ಕಾಂಗ್ರೆಸ್, ಜೆಡಿಎಸ್ ತಮ್ಮ ಶಕ್ತಿಯನ್ನು ಬಳಸಿ ಇಂತಹ ದುರಾಡಳಿತದಿಂದ ಜನತೆಯನ್ನು ಪರಿಣಾಮಕಾರಿಯಾಗಿ ರಕ್ಷಿಸಲು ಮುಂದಾಗದೇ ಇರುವಾಗ ಸಿಪಿಐ(ಎಂ) ಇತರೇ ಎಡ ಮತ್ತು ಜಾತ್ಯಾತೀತ ಪ್ರಜಾಸತ್ತಾತ್ಮಕ ಶಕ್ತಿಗಳ ಜೊತೆ ಜನತೆಯ ರಕ್ಷಣೆಗೆ ನಿಂತಿದೆ.

ಕೊಪ್ಪಳ ಜಿಲ್ಲಾ ಸಿಪಿಐ(ಎಂ) ಕಾರ್ಯದರ್ಶಿ ಜಿ. ನಾಗರಾಜ ಮಾತನಾಡಿ, ಸಿಪಿಐ(ಎಂ) ಪಕ್ಷದ ಸಂಘಟನಾ ನಿಯಮದಂತೆ ಪಕ್ಷದ ರಾಜ್ಯ ಮಟ್ಟದ ಅತ್ಯುನ್ನತ ಅಂಗವಾದ ರಾಜ್ಯ ಸಮ್ಮೇಳನವು ಮೂರು ವರ್ಷಕ್ಕೊಮ್ಮೆ ಸಭೆ ಸೇರುತ್ತದೆ. ಆದರೇ, ಈ ಬಾರಿ ಕೋವಿಡ್ ಬಾಧಿಸಿದ್ದರಿಂದ ಒಂದು ವರ್ಷ ತಡವಾಗಿ ಸೇರುತ್ತಿದೆ. ಕಳೆದ 22ನೇ ಸಮ್ಮೇಳನ ಜನವರಿ 2018ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಮೂಡಬಿದಿರೆಯಲ್ಲಿ ಸೇರಿತ್ತು. ಈ ನಾಲ್ಕು ವರ್ಷಗಳಲ್ಲಿ ಕರ್ನಾಟಕದ ಜನ ಜೀವನ ಪರಿಸ್ಥಿತಿ ಸಮೃದ್ಧಗೊಳ್ಳುವ ಬದಲು ಅತ್ಯಂತ ಯಾತನಮಯವಾಗಿ ಬದಲಾಗಿದೆ.

ಪಕ್ಷದ ರಾಜ್ಯ ಸಮ್ಮೇಳನವು ನಾಲ್ಕು ಕಾರ್ಯಸೂಚಿಯನ್ನು ಹೊಂದಿದೆ. ಪ್ರಮುಖವಾಗಿ ಕಳೆದ ನಾಲ್ಕು ವರ್ಷಗಳಲ್ಲಿ ರಾಜ್ಯವು ಸಾಗಿ ಬಂದ ಹಾದಿಯನ್ನು ಗಮನಿಸಿ, ಜನತೆಯ ರಕ್ಷಣೆಗಾಗಿ ಮುಂದಿನ ಮೂರು ವರ್ಷಗಳ ಸಿಪಿಐ(ಎಂ) ಹಾದಿಯನ್ನು ರೂಪಿಸುವುದು. ಜನತೆಯ ಮುಂದಿನ ತಕ್ಷಣದ ಕರ್ತವ್ಯಗಳನ್ನು ಗುರುತಿಸುವುದು, ಅದೇ ರೀತಿ, ಅಂತಹ ಒಂದು ಕಾರ್ಯಕ್ರಮದ ಜಾರಿಗಾಗಿ ಹೊಸ ರಾಜ್ಯ ನಾಯಕತ್ವವನ್ನು ಹಾಗೂ ಎಪ್ರಿಲ್ ತಿಂಗಳಲ್ಲಿ ಕೇರಳದ ಕಣ್ಣೂರಿನಲ್ಲಿ ನಡೆಯುವ ಪಕ್ಷದ ಅಖಿಲ ಭಾರತ ಮಹಾಧಿವೇಶನದ ಪ್ರತಿನಿಧಿಗಳನ್ನು ಚುನಾಯಿಸಲಿದೆ ಎಂದರು.

ಸಮ್ಮೇಳನಕ್ಕೆ ರಾಜ್ಯದ ಎಲ್ಲಾ 31 ಜಿಲ್ಲೆಗಳಿಂದ ಸುಮಾರು 500 ಜನ ಪ್ರತಿನಿಧಿಗಳು ಹಾಗೂ ವೀಕ್ಷಕರು ಭಾಗವಹಿಸಲಿದ್ದಾರೆ. ಮೂರು ದಿನಗಳ ಕಾಲ ನಡೆಯುವ ಸಮ್ಮೇಳನದ ಮೊದಲ ದಿನ ಸಿಪಿಐ(ಎಂ) ಪಕ್ಷದ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚೂರಿ ಉದ್ಘಾಟನೆ ಮಾಡಲಿದ್ದಾರೆ.

ಮೂರು ದಿನದ ಸಮ್ಮೇಳನದಲ್ಲಿ ಮಾಜಿ ಪ್ರಧಾನ ಕಾರ್ಯದರ್ಶಿ ಹಾಗೂ ಹಾಲಿ ಪಾಲಿಟ್ ಬ್ಯುರೋ ಸದಸ್ಯ ಪ್ರಕಾಶ್ ಕಾರಟ್, ಪಾಲಿಟ್ ಬ್ಯುರೋ ಸದಸ್ಯರಾದ ಎಸ್. ರಾಮಚಂದ್ರನ್ ಪಿಳ್ಳೈ, ಎಂ.ಎ.ಬೇಬಿ, ಬಿ.ವಿ. ರಾಘವುಲು ಪಾಲ್ಗೊಂಡು ಮಾರ್ಗದರ್ಶನ ಮಾಡಲಿದ್ದಾರೆ ಎಂದರು.

ಶಾಲಾ ಮಕ್ಕಳಿಗೆ ಮೊಟ್ಟೆ ವಿತರಣೆ ನಿಲ್ಲಿಸದಂತೆ ಸರ್ಕಾರಕ್ಕೆ ಮನವಿ ಸಲ್ಲಿಸಿದ ಎಸ್‌ಎಫ್‌ಐ

ರಾಜ್ಯದಲ್ಲಿ ಶಾಲಾ ಮಕ್ಕಳ ಅಪೌಷ್ಠಿಕತೆ ನಿವಾರಣೆಗಾಗಿ ಕಲ್ಯಾಣ ಕರ್ನಾಟಕ ಭಾಗ ಹಾಗೂ ಬಿಜಾಪುರ ಜಿಲ್ಲೆಯಲ್ಲಿ 1 ರಿಂದ 8ನೇ ತರಗತಿವರೆಗೆ ಸರ್ಕಾರಿ ಶಾಲೆಗಳಲ್ಲಿ ಓದುತ್ತಿರುವ ಮಕ್ಕಳು ಅಪೌಷ್ಠಿಕತೆ ಮತ್ತು ರಕ್ತ ಹೀನತೆಯಿಂದ ಬಳಲುತ್ತಿದ್ದಾರೆ. ಮಕ್ಕಳಿಗೆ ಅಪೌಷ್ಠಿಕತೆ ನಿವಾರಣೆಗಾಗಿ ಸರ್ಕಾರಿ ಶಾಲೆಯಲ್ಲಿ ಮಧ್ಯಾಹ್ನದ ಬಿಸಿಯೂಟದೊಂದಿಗೆ ವಾರದಲ್ಲಿ 3 ದಿನಗಳ ಕಾಲ ಮೊಟ್ಟೆ ಮತ್ತು ಬಾಳೇಹಣ್ಣು ವಿತರಣೆ ಮಾಡುವುದನ್ನು ಯಾವುದೇ ಕಾರಣಕ್ಕೂ ನಿಲ್ಲಿಸಬಾರದೆಂದು ಎಸ್‌ಎಫ್‌ಐ ಆಗ್ರಹಿಸಿದೆ.

ಪ್ರತಿಭಟನೆಯನ್ನು ಹಮ್ಮಿಕೊಂಡಿದ್ದ ಭಾರತ ವಿದ್ಯಾರ್ಥಿ ಫೆಡರೇಷನ್(ಎಸ್‌ಎಫ್‌ಐ) ಸಂಘಟನೆಯು ಕೊಪ್ಪಳ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದ್ದು, ವಾರದಲ್ಲಿ 3 ದಿನಗಳ ಕಾಲ ಮೊಟ್ಟೆ ಮತ್ತು ಬಾಳೇಹಣ್ಣು ವಿತರಣೆ ಮಾಡುವ ಬಗ್ಗೆ ಕೆಲವು ಮಠದ ಸ್ವಾಮೀಜಿಗಳು ಜಾತಿ ಮತ್ತು ಧಾರ್ಮಿಕತೆ, ನಂಬಿಕೆಯ ಹೆಸರಿನಲ್ಲಿ ಸರ್ಕಾರದ ಆದೇಶವನ್ನು ವಾಪಸ್ಸು ಪಡೆಯಬೇಕೆಂದು ರಾಜ್ಯದ ಮುಖ್ಯಮಂತ್ರಿಗಳ ಮೇಲೆ ಒತ್ತಡ ಹಾಕುತ್ತಿರುವುದು ಸರಿಯಲ್ಲ. ಮೊಟ್ಟೆಯನ್ನು ತಿನ್ನುವುದು ಹಾಗೂ ತಿನ್ನದಿರುವುದನ್ನು ಮಕ್ಕಳ ಆಯ್ಕೆಗಾಗಿರುತ್ತದೆ ಎಂದು ತಿಳಿಸಿದೆ.



ಮೊಟ್ಟೆ ಮತ್ತು ಬಾಳೇಹಣ್ಣು ವಿತರಣೆ ನಂತರ ಇದೇ ತಿಂಗಳಲ್ಲಿ ಶಾಲೆಗಳಲ್ಲಿ ಮಕ್ಕಳ ಹಾಜರಾತಿಯಲ್ಲಿ ಶೇ.10 ರಿಂದ 12ರಷ್ಟು ಏರಿಕೆ ಕಂಡುಬಂದಿದೆ. 80ರಷ್ಟು ಮಕ್ಕಳು ಮೊಟ್ಟೆ ಬೇಕೆಂದು ಬೇಡಿಕೆ ಇಟ್ಟಿದ್ದಾರೆ. ಅಪೌಷ್ಠಿಕತೆ ನಿವಾರಣೆಗೆ ಮೊಟ್ಟೆ ಸಹಾಯವಾಗಲಿದೆ. ಮೊಟ್ಟೆ- ಬಾಳೇಹಣ್ಣು ವಿತರಣೆಯಿಂದ ಯಾವುದೇ ವಿದ್ಯಾರ್ಥಿಗಳಿಗೆ ಬೇಧಭಾವವುಂಟಾಗುವುದಿಲ್ಲ.

ಸರ್ಕಾರಿ ಶಾಲೆಗಳಲ್ಲಿ ವಿವಿಧ ಜಾತಿ-ಧರ್ಮದ ತುಳಿತಕ್ಕೆ ಒಳಗಾದ ಸಮುದಾಯದ, ಬಡವರ, ಹಿಂದುಳಿದ ವರ್ಗ ಸಮುದಾಯದ ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದು, ರಾಜ್ಯದ ಎಲ್ಲಾ ಶಾಲೆಗಳಿಗೂ ಅಪೌಷ್ಠಿಕತೆ ನಿವಾರಣೆಗಾಗಿ ಮೊಟ್ಟೆ ಮತ್ತು ಬಾಳೇಹಣ್ಣನ್ನು ವಿತರಣೆ ಮಾಡಲು ಸರ್ಕಾರ ಮುಂದಾಗಬೇಕೆಂದು ಎಸ್‌ಎಫ್‌ಐ ಸಂಘಟನೆ ಪ್ರತಿಭಟನೆ ಒತ್ತಾಯ ಮಾಡಿದೆ.

ಈ ಸಂದರ್ಭದಲ್ಲಿ ಎಸ್‌ಎಫ್‌ಐ ರಾಜ್ಯ ಅಧ್ಯಕ್ಷ ಅಮರೇಶ ಕಡಗದ, ವಿದ್ಯಾರ್ಥಿ ಮುಖಂಡರಾದ ನಾಗರಾಜ ಉತ್ತನೂರು, ರಾಜಭಕ್ಷಿ, ಅಮರೇಶ ಪೂಜಾರ, ಭೀಮೇಶ, ಶಂಕರ ಇತರರು ಇದ್ದರು.

ರಸ್ತೆಗುಂಡಿ ಮುಚ್ಚದೆ ನಿರ್ಲಕ್ಷ್ಯ: ಮಂಗಳೂರು ಪಾಲಿಕೆ ವಿರುದ್ಧ ಆಕ್ರೋಶ



ಸುರತ್ಕಲ್, ಕಾನ, ಎಮ್‌ಆರ್‌ಪಿಎಲ್, ಜನತಾ ಕಾಲನಿ ರಸ್ತೆ ದುರಸ್ಥೆ, ಗುಂಡಿಗಳನ್ನು ಮುಚ್ಚದ ಮಂಗಳೂರು ನಗರ ಪಾಲಿಕೆ ಬೇಜವಾಬ್ದಾರಿತನ ಖಂಡಿಸಿ ಕಾನ ಜಂಕ್ಷನ್‌ನಲ್ಲಿ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್(ಡಿವೈಎಫ್‌ಐ) ನೇತೃತ್ವದಲ್ಲಿ ಮೆರವಣಿಗೆ ನಡೆಸಿ ಮಂಗಳೂರು ನಗರ ಪಾಲಿಕೆ ಭೂತ ದಹಸಿ ಪ್ರತಿಭಟನೆ ನಡೆಸಿದರು.

ಪ್ರತಿಭಟನೆಯನ್ನು ಉದ್ದೇಶಿಸಿ ಡಿವೈಎಫ್‌ಐ ರಾಜ್ಯಾಧ್ಯಕ್ಷ ಮುನೀರ್ ಕಾಟಿಪಳ್ಳ ಮಾತನಾಡಿ "ಶಾಸಕ ಭರತ್ ಶೆಟ್ಟಿ ಅಭಿವೃದ್ಧಿ ಕಾಮಗಾರಿಗಳನ್ನು ನಡೆಸುವುದರಲ್ಲಿ ದಯನೀಯ ವೈಫಲ್ಯ ಕಂಡಿದ್ದಾರೆ. ಹಿಂದಿನ ಶಾಸಕರ ಅವಧಿಯಲ್ಲಿ ಮಂಜೂರಾಗಿದ್ದ ಹೊಸ ರಸ್ತೆ ನಿರ್ಮಾಣ ಯೋಜನೆ ಭರತ್ ಶೆಟ್ಟಿಯವರ ಬೇಜವಾಬ್ದಾರಿತನದಿಂದ ರದ್ದುಗೊಂಡಿದೆ. ಸುರತ್ಕಲ್, ಕೃಷ್ಣಾಪುರ ಮಾರುಕಟ್ಟೆ ಕಾಮಗಾರಿಗಳಿಗೂ ತಡೆ ಬಿದ್ದಿದೆ. ಅಭಿವೃದ್ಧಿ ಕಾರ್ಯ ನಡೆಸಲಾಗದ ಭರತ್ ಶೆಟ್ಟರು ಮತೀಯ ಭಾವನೆಗಳನ್ನು ಕೆರಳಿಸಿ ತನ್ನ ವೈಫಲ್ಯಗಳನ್ನು ಮುಚ್ಚಿಡಲು ನೋಡುತ್ತಿದ್ದಾರೆ. ಪ್ರತಿಯೊಂದು ಕಾಮಗಾರಿಯಲ್ಲಿ ನಲವತ್ತು ಶೇಕಡಾ ಪರ್ಸಂಟೇಜ್ ಹೊಡೆಯುವ ಬಿಜೆಪಿ ಸರಕಾರದ ಭ್ರಷ್ಟಾಚಾರದಿಂದ ಸರಕಾರದ ಖಜಾನೆ ಖಾಲಿಯಾಗಿದೆ. ಕನಿಷ್ಟ ತೇಪೆ ಕಾರ್ಯ ನಡೆಸಲೂ ನಗರ ಪಾಲಿಕೆ ಹಣದ ಕೊರತೆ ಎದುರಿಸುತ್ತಿರುವುದು ಬಿಜೆಪಿ ಆಡಳಿತ ನಡೆಸಲು ನಾಲಾಯಕ್ ಎಂಬುದಕ್ಕೆ ಸಾಕ್ಷಿ ಎಂದು ಆರೋಪಿಸಿದರು. ಹದಿನೈದು ದಿನಗಳ ಒಳಗಡೆ ರಸ್ತೆಗಳು ದುರಸ್ಥಿಗೊಳ್ಳದಿದ್ದಲ್ಲಿ ಶಾಸಕರ ಕಚೇರಿಗೆ ಮುತ್ತಿಗೆ ಹಾಕುವುದಾಗಿ ಎಚ್ಚರಿಸಿದರು.

ಜಿಲ್ಲಾಧ್ಯಕ್ಷ ಬಿ ಕೆ ಇಮ್ತಿಯಾಜ್ ಮಾತನಾಡಿ ಹಿಂದಿನ ಶಾಸಕರ ಅವಧಿಯಲ್ಲಿ ಇದೇ ರಸ್ತೆಯ ದುರವಸ್ಥೆ ಮುಂದಿಟ್ಟು ರಾಜಕೀಯ ಲಾಭ ಪಡೆದಿದ್ದ ಭರತ್ ಶೆಟ್ಟರು ಗೆದ್ದಮೇಲೆ ಈ ರಸ್ತೆಯ ಅಭಿವೃದ್ದಿಯ ಕುರಿತು ಅನಾದಾರ ತೋರಿಸುತ್ತಿದ್ದಾರೆ. ಸ್ಮಾರ್ಟ್ ಸಿಟಿ ಹೆಸರಿನಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ನಗರದ ಕೆಲವೆ ಪ್ರದೇಶಗಳಿಗೆ ಅನಗತ್ಯ ಪೋಲು ಮಾಡಲಾಗುತ್ತಿದೆ. ಸುರತ್ಕಲ್ ಪ್ರದೇಶಕ್ಕೆ ಸ್ಮಾರ್ಟ್ ಸಿಟಿ ಅನುದಾನ ಮೀಸಲಿಡದೆ ತಾರತಮ್ಯ ಎಸಗಲಾಗುತ್ತಿದೆ. ಕಾನ, ಜನತಾ ಕಾಲನಿ ರಸ್ತೆ ಅಭಿವೃದ್ದಿಗೊಳಿಸದಿದ್ದಲ್ಲಿ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸಲಾಗುವುದು? ಎಂದು ಎಚ್ಚರಿಸಿದರು.

ಎಂ.ಆರ್.ಪಿ.ಎಲ್ ಮತ್ತು ಇತರ ಬೃಹತ್ ಕೈಗಾರಿಕೆಗಳಿಗೆ ಬರುವ ಬೃಹತ್ ಘನ ವಾಹನಗಳ ಓಡಾಟದಿಂದಾಗಿ ಮುಖ್ಯರಸ್ತೆ ಸಂಪೂರ್ಣ ಹಾಳಾಗಿ ಹೋಗಿದೆ. ಜನರ ಹೋರಾಟದ ಪ್ರತಿಫಲವಾಗಿ 2017ರಲ್ಲಿ 60 ಕೋಟಿ ವೆಚ್ಚದ 4 ಕಿ.ಮೀ ಚತುಷ್ಪಥ ರಸ್ತೆಗೆ ಮಂಜೂರಾದ ಯೋಜನೆಯನ್ನು ಶಾಸಕ ಭರತ್ ಶೆಟ್ಟಿಯವರು ತಡೆ ಹಿಡಿಯಲು ಯಶಸ್ವಿಯಾಗಿದ್ದ ಶಾಸಕರು ಮತ್ತೆ ಹೊಸ ಟೆಂಡರ್ ಮಾಡಿಸಿ ರಸ್ತೆ ಅಭಿವೃದ್ಧಿ ಮಾಡಿಸಲು ವಿಫಲರಾಗಿದ್ದಾರೆ ಎಂದು ಆರೋಪಿಸಿದರು.

ಸುರತ್ಕಲ್, ಕಾನ, ಜನತಾ ಕಾಲೊನಿ ಮತ್ತು ಎಂ.ಆರ್.ಪಿ.ಎಲ್ ವರೆಗಿನ ರಸ್ತೆ ಅಭಿವೃದ್ಧಿ ಪಡಿಸಲು ಅಸಾಧ್ಯವಾದರೆ ನಾಗರಿಕ ವೇದಿಕೆಯ ಮೂಲಕ ಹೋರಾಟವನ್ನು ತೀವ್ರಗೊಳಿಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಡಿವೈಎಫ್‌ಐ ಮುಖಂಡರಾದ ಶ್ರೀನಾಥ್ ಕುಲಾಲ್, ಮಕ್ಸೂದ್ ಬಿ ಕೆ, ಅಜ್ಮಾಲ್ ಅಹ್ಮದ್, ಜೋಯ್ ಡಿಸೋಜ, ಮುಹಮ್ಮದ್, ಜಾಯ್, ಅಬೂಬಕ್ಕರ್ ಬಾವ, ನವಾಜ್ ಕುಳಾಯಿ ಗಿರೀಶ್ ಜನತಾ ಕಾಲೊನಿ, ಮೆಹಬೂಬ್ ಖಾನ್, ಫ್ರಾನ್ಸಿಸ್ ಕಾನ, ಟ್ಯಾಂಕರ್ ಚಾಲಕರ ಸಂಘದ ಅಧ್ಯಕ್ಷರಾದ ಬಾಲು, ರಿಕ್ಷಾ ಚಾಲಕರ ಸಂಘದ ಪ್ರಮುಖರಾದ ಹಂಝ, ಇಬ್ರಾಹಿಂ, ಲಕ್ಷ್ಮೀಶ, ಬಶೀರ್ ಮುಂತಾದವರಿದ್ದರು.

ಅತಿಥಿ ಉಪನ್ಯಾಸಕರ ವಿವಿಧ ಬೇಡಿಕೆಗಳ ಈಡೇರಿಸಲು ಎಸ್‌ಎಫ್‌ಐ ಆಗ್ರಹ



ರಾಷ್ಟ್ರೀಯ ಶಿಕ್ಷಣ ನೀತಿ(ಎನ್‌ಇಪಿ) ಅನುಷ್ಠಾನಕ್ಕೆ ಆರಂಭದಲ್ಲೇ ಗೊಂದಲ ಎದುರಾಗಿದ್ದು, ರಾಜ್ಯಾದ್ಯಂತ ಅತಿಥಿ ಉಪನ್ಯಾಸಕರು ತರಗತಿ ಬಹಿಷ್ಕರಿಸಿದ್ದಾರೆ. ಇದರಿಂದಾಗಿ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳಿಗೆ ಪಾಠವಿಲ್ಲದಂತಾಗಿದೆ. ಇಂತಹ ಸಮಸ್ಯೆಗಳನ್ನು ಭಾರತ ವಿದ್ಯಾರ್ಥಿ ಫೆಡರೇಷನ್(ಎಸ್.ಎಫ್.ಐ.) ಖಂಡಿಸಿದೆ.

ಎಸ್‌ಎಫ್‌ಐ ರಾಜ್ಯ ಅಧ್ಯಕ್ಷ ಅಮರೇಶ ಕಡಗದ 430 ಪ್ರಥಮ ದರ್ಜೆ ಕಾಲೇಜುಗಳಲ್ಲಿ 14,500 ಅತಿಥಿ ಉಪನ್ಯಾಸಕರು ಕಾರ್ಯನಿರ್ವಹಿಸುತ್ತಿದ್ದು, ಸೇವಾ ಭದ್ರತೆ, ಕನಿಷ್ಠ ವೇತನ ಸೇರಿ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ತರಗತಿಗಳನ್ನು ಅನಿರ್ದಿಷ್ಟ ಅವಧಿವರೆಗೆ ಬಹಿಷ್ಕರಿಸಿದ್ದಾರೆ. 6 ಸಾವಿರ ಕಾಯಂ ಉಪನ್ಯಾಸಕರು ಮಾತ್ರ ಕಾರ್ಯನಿರ್ವಹಿಸುತ್ತಿದ್ದಾರೆ. ಕಳೆದ ವರ್ಷ ರಾಜ್ಯಾದ್ಯಂತ 3 ಲಕ್ಷಕ್ಕೂ ಹೆಚ್ಚು ಮಂದಿ ಪದವಿ ವಿದ್ಯಾರ್ಥಿಗಳಿದ್ದರು. ಈ ಬಾರಿ ದ್ವಿತೀಯ ಪಿಯುಸಿಯಲ್ಲಿ ಎಲ್ಲ ವಿದ್ಯಾರ್ಥಿಗಳು ಉತ್ತೀರ್ಣರಾಗಿರುವುದರಿಂದ ಪದವಿ ವಿದ್ಯಾರ್ಥಿಗಳ ಸಂಖ್ಯೆ ಸುಮಾರು 5.5 ಲಕ್ಷಕ್ಕೇರಿದೆ. ಈ ಹಿನ್ನೆಲೆಯಲ್ಲಿ ಕನಿಷ್ಠ 10 ಸಾವಿರ ಹೆಚ್ಚುವರಿ ಉಪನ್ಯಾಸಕರ ಅಗತ್ಯವಿದೆ. ಇದರ ನಡುವೆಯೇ ಅತಿಥಿ ಉಪನ್ಯಾಸಕರು ತರಗತಿ ಬಹಿಷ್ಕರಿಸಿರುವುದರಿಂದ ಇಡೀ ಪದವಿ ಶಿಕ್ಷಣಕ್ಕೆ ಬಲವಾದ ಹೊಡೆತಬಿದ್ದಂತಾಗಿದೆ ಎಂದು ತಿಳಿಸಿದೆ.

ಎಸ್‌ಎಫ್‌ಐ ರಾಜ್ಯ ಕಾರ್ಯದರ್ಶಿ ವಾಸುದೇವರೆಡ್ಡಿ, ಇದಕ್ಕೆ ಕಾರಣ ರಾಜ್ಯ ಸರ್ಕಾರ ಅಪ್ರಜಾಸತ್ತಾತ್ಮಕವಾಗಿ ಎನ್‌ಇಪಿಯನ್ನು ಯಾವುದೇ ತಯಾರಿ ನಡೆಸದೇ ರಾಷ್ಟ್ರೀಯ ಶಿಕ್ಷಣ ನೀತಿ ಅನುಷ್ಠಾನಗೊಳಿಸಿರುವುದು ಹೊಸ ವಿಷಯಗಳು ಕೂಡ ವಿವಿಗಳ ಬಹುತೇಕ ಕಡೆಗಳಲ್ಲಿನ ಪಠ್ಯದಲ್ಲಿ ಸೇರ್ಪಡೆಗೊಂಡಿವೆ. ಬಹುತೇಕ ಕಡೆಗಳಲ್ಲಿ ಹೊಸ ವಿಷಯಗಳ ಉಪನ್ಯಾಸಕರು ಸಿಗುತ್ತಿಲ್ಲ. ಇನ್ನು ಕೆಲವು ವಿಶ್ವವಿದ್ಯಾನಿಲಯಗಳಲ್ಲಿ ಎನ್‌ಇಪಿ ಆಧಾರಿತ ಪಠ್ಯ ಪುಸ್ತಕಗಳೇ ಇನ್ನೂ ಲಭ್ಯವಿಲ್ಲ. ಈ ನಡುವೆ ಹಾಲಿ ಅತಿಥಿ ಉಪನ್ಯಾಸಕರು ಪಾಠ ಮಾಡದ ನಿರ್ಧಾರ ತೆಗೆದುಕೊಂಡಿರುವುದರಿಂದ ಈ ಎಲ್ಲ ಗೊಂದಲಗಳ ನಡುವೆ ಎನ್‌ಇಪಿಯನ್ನು ಜಾರಿಗೊಳಿಸುವುದು ಬೇಡ. ಈ ಕೂಡಲೇ ರಾಜ್ಯ ಸರ್ಕಾರ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ವಾಪಸ್ ಪಡೆದುಕೊಳ್ಳಬೇಕು ಮತ್ತು ಅತಿಥಿ ಉಪನ್ಯಾಸಕರ ವಿವಿಧ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಆಗ್ರಹಿಸಿದ್ದಾರೆ.

ರಾಜ್ಯದ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಶೇ.60% ಅತಿಥಿ ಉಪನ್ಯಾಸಕರಿಂದ ಬೋಧನೆ ಮಾಡುತ್ತಿರುವುದು ಗಮನಾರ್ಹವಾಗಿದೆ. ಈಗ ಅತಿಥಿ ಉಪನ್ಯಾಸಕರು ತರಗತಿ ಬಹಿಷ್ಕರಿಸಿರುವುದರಿಂದ ಪಾಠಕ್ಕೆ ಬಹಳ ತೊಂದರೆಯಾಗಿದೆ. ಈಗ ಪಠ್ಯ ಮುಗಿಸಿಕೊಡುವ ಸಂದರ್ಭ. ಹೀಗಾಗಿ ಪಾಠವಿಲ್ಲದಿದ್ದರೆ ವಿದ್ಯಾರ್ಥಿಗಳಿಗೆ ಪರೀಕ್ಷೆ ಸಮಯದಲ್ಲಿ ತೊಂದರೆಯಾಗುತ್ತದೆ. ಇದು ವಿದ್ಯಾರ್ಥಿಗಳ ಒಟ್ಟಾರೆ ಶೈಕ್ಷಣಿಕ ಪ್ರಗತಿಗೆ ಮಾರಕವಾಗುತ್ತದೆ ಇವುಗಳನ್ನು ಸರಿಪಡಿಸಬೇಕೆಂದು ಎಸ್‌ಎಫ್‌ಐ ತಿಳಿಸಿದೆ.

ರಾಜ್ಯದ 430 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಸುಮಾರು 14447 ಹೆಚ್ಚು ಅತಿಥಿ ಉಪನ್ಯಾಸಕರು ಕಳೆದ 15–20 ವರ್ಷಗಳಿಂದ ಪ್ರಾಮಾಣಿಕ ಸೇವೆ ಸಲ್ಲಿಸುತ್ತಿದ್ದಾರೆ. ಇವರಲ್ಲಿ ಹಲವರು ಪಿಎಚ್ .ಡಿ., ಸೆಟ್ ಹಾಗೂ ನೆಟ್ ಪರೀಕ್ಷೆಗಳನ್ನು ಪಾಸಾಗಿದ್ದು, ಯುಜಿಸಿ ನಿಯಮಾವಳಿ ಪ್ರಕಾರ ವಿದ್ಯಾರ್ಹತೆ ಹೊಂದಿರುವವರು. ಇವರುಗಳನ್ನು ಕಾಯಂಗೊಳಿಸಲು ಸೂಕ್ತ ನಿಯಮಾವಳಿ ರೂಪಿಸಬೇಕು ಎಂದು ಭಾರತ ವಿದ್ಯಾರ್ಥಿ ಫೆಡರೇಶನ್ ಎಸ್‌ಎಫ್‌ಐ ರಾಜ್ಯ ಸರ್ಕಾರವನ್ನು ಒತ್ತಾಯಿಸಿದೆ.

ರೈತರ ಐಕ್ಯ ಆಂದೋಲನಕ್ಕೆ ಐತಿಹಾಸಿಕ ವಿಜಯ

ರಾಜ್ಯಾದಾದ್ಯಂತ ವಿಜಯೋತ್ಸವ ಆಚರಣೆ





ಜನವರಿ 10 ರಿಂದ ಅಂಗನವಾಡಿ ನೌಕರರ ಅನಿರ್ಧಿಷ್ಟಾವದಿ ಹೋರಾಟ

2021ರ ಬಜೆಟ್‌ನಲ್ಲಿ ನೀಡಬೇಕಾದ ಅನುದಾನ ನೀಡಲಿಲ್ಲ. ಇಲಾಖಾ ಹಂತದಲ್ಲಿ ಹಲವು ಮಾತುಕತೆಗಳಾದರೂ ಯಾವುದೇ ಅನುದಾನ ಬಿಡುಗಡೆಯಾಗಲಿಲ್ಲ ಮಾತ್ರವಲ್ಲ ನಿವೃತ್ತಿಯಾದವರಿಗೆ ಇಡಗಂಟು ನೀಡಲಿಲ್ಲ ಇವೆಲ್ಲವುಗಳನ್ನು ಇಟ್ಟುಕೊಂಡು ಜನವರಿ 10ರಿಂದ ಅಂಗನವಾಡಿ ಕೇಂದ್ರಗಳನ್ನು ಬಂದ್ ಮಾಡಿ ಅನಿರ್ಧಿಷ್ಟಾವದಿ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘ (ಸಿಐಟಿಯು) ತಿಳಿಸಿದೆ.

ಬಜೆಟ್ ನಲ್ಲಿ ನೀಡಬೇಕಾದ ಅನುದಾನಕ್ಕಾಗಿ 2021ರ ಮಾರ್ಚ್ 15 ಹಾಗೂ 25ರಂದು, ಜುಲೈ 13 ಹೋರಾಟಗಳನ್ನು ನಡೆಸಿದಾಗ 25–3–2021ರಂದು ಇಂದಿನ ಇಲಾಖಾ ಮಂತ್ರಿ ಶಶಿಕಲಾ ಜೊಲ್ಲೆಯವರು ಮೇ ತನಕ ಸಮಯ ಕೇಳಿದರು. ಹಾಲಿ ಇಲಾಖೆ ಸಚಿವರಾದ ಹಾಲಪ್ಪ ಆಚಾರ್ 24–8–2021ರಂದು ಜಂಟಿ ಸಭೆ ನಡೆಸಿ ಸಮಯ ಕೇಳಿದ್ದರು. ಇಲಾಖಾ ಹಂತದಲ್ಲಿ ಹಲವು ಮಾತುಕತೆಗಳಾದರೂ ಯಾವುದೇ ಅನುದಾನ ಬಿಡುಗಡೆಯಾಗಲಿಲ್ಲ ಎಂದು ಸಂಘಟನೆ ಆರೋಪಿಸಿದೆ.

ಈ ಬಗ್ಗೆ ಹೇಳಿಕೆ ಬಿಡುಗಡೆ ಮಾಡಿರುವ ರಾಜ್ಯ ಅಧ್ಯಕ್ಷರಾದ ಎಸ್.ವರಲಕ್ಷ್ಮಿ ಅವರು ರಾಜ್ಯದಲ್ಲಿ ಮಹಿಳೆಯರ ಮತ್ತು ಮಕ್ಕಳ ಸರ್ವತೋಮುಖ ಅಭಿವೃದ್ಧಿಗಾಗಿ ಅಂಗನವಾಡಿ ನೌಕರರು ಸದಾ ದುಡಿಯುತ್ತಿದ್ದಾರೆ. ಕೊರೊನಾ ಸಂದರ್ಭದಲ್ಲಿ ಹೈಕೋರ್ಟ್‌ನ ಆದೇಶದಂತೆ ರಾಜ್ಯದ 47.37 ಲಕ್ಷ ಫಲಾನುಭವಿಗಳಿಗೆ ಪೌಷ್ಟಿಕ ಆಹಾರ ಮತ್ತು ಆರೋಗ್ಯ ಸವಲತ್ತುಗಳನ್ನು ಖಾತ್ರಿಪಡಿಸಲಾಗಿದೆ. ಅಷ್ಟು ಮಾತ್ರವಲ್ಲದೆ ಕೊರೊನಾ ಫ್ರಂಟ್‌ಲೈನ್ ವಾರಿಯರ್ಸ್ ಆಗಿ ದುಡಿದು 59 ಜನರು ಬಲಿದಾನವಾಗಿದ್ದಾರೆ. ಮಾತ್ರವಲ್ಲದೆ, 293 ಜನರು ಕೊರೊನಾ ಸೋಂಕಿಗೊಳಗಾಗಿದ್ದಾರೆ. ಕೆಲವರು ಕುಟುಂಬದವರನ್ನು ಕಳೆದುಕೊಂಡು ಒಂಟಿಯಾಗಿದ್ದಾರೆ. ಕೊರೊನಾ ಸಂದರ್ಭದ ನಂತರದಲ್ಲಿ ಇ–ಸರ್ವೆ, ಚುನಾವಣೆಗಳು, ವ್ಯಾಕ್ಸಿನ್ ಹಾಕುವುದು ಮತ್ತು ಅದರ ಸರ್ವೆಗಳು, ಪೋಷಣ್ ಅಭಿಯಾನ, ಪೋಷಣ್ ಪಕ್ವಾಡ ಅಂತ ಆಚರಣೆಗಳು ನಿರಂತರವಾಗಿ ನಡೆಯುತ್ತಿವೆ. ಸರ್ಕಾರದ ನೀತಿಗಳಿಂದ ಅನಿಯಂತ್ರಿತವಾಗಿ ಪೆಟ್ರೋಲ್, ಡೀಸೆಲ್ ಬೆಲೆಗಳು ಹೆಚ್ಚಾಗಿ ಆಹಾರ ದಾನ್ಯಗಳು ಸೇರಿದಂತೆ ಪ್ರತಿಯೊಂದು ವಸ್ತು ಮತ್ತು ಸೇವೆಯ ಬೆಲೆಗಳು ಹೆಚ್ಚಾಗಿದೆ. ಆದರೆ ಆದಾಯ ಮಾತ್ರ ಹೆಚ್ಚಳವಾಗಲಿಲ್ಲ. ಆದರೆ ನೌಕರರ ಬದುಕು ಮಾತ್ರ ದುಸ್ತರವಾಗಿ ಎಂದು ತಿಳಿಸಿದರು.

ಸಂಘದ ಪ್ರಧಾನ ಕಾರ್ಯದರ್ಶಿ ಹೆಚ್.ಎಸ್.ಸುನಂದಾ ಅವರು ಕೊರೊನಾ ಲಾಕ್‌ಡೌನ್ ಇದ್ದಂತಹ ಸಂದರ್ಭದಲ್ಲಿ ಕೇಂದ್ರ ಸರ್ಕಾರ ನೂತನ ಶಿಕ್ಷಣ ನೀತಿ 2020 (ಎನ್‌ಇಪಿ)ನ್ನು ತಂದಿದೆ. ರಾಜ್ಯದಲ್ಲಿ ಸಂಬಂಧಿಸಿದ ಸಂಘಟನೆಗಳ ಬಳಿ ಚರ್ಚಿಸದೇ ಟಾಸ್ಕ್ ಪರ್ಸ್ ಕಮಿಟಿಯನ್ನು ಎನ್‌ಇಪಿಯ ಜಾರಿಗಾಗಿ ನೇಮಕ ಮಾಡಿದೆ. ಎನ್‌ಇಪಿಯ ದಸ್ತಾವೇಜಿನಲ್ಲಿ ಆಶಯಗಳು ಬೆಟ್ಟದಷ್ಟಿವೆ. ಆದರೆ ಜಾರಿಯ ಸಂದರ್ಭದಲ್ಲಿ ಸಂಪೂರ್ಣವಾಗಿ ಖಾಸಗೀಕರಣ ಮತ್ತು ವಾಣಿಜ್ಯೀಕರಣವಾಗುವ ಅಂಶಗಳೇ ಹೆಚ್ಚಾಗಿವೆ. ಐಸಿಡಿಎಸ್ ಯೋಜನೆಗೆ ಸಂಬಂಧಿಸಿ 3 ರಿಂದ 6 ವರ್ಷ ಅಂದರೆ 36 ತಿಂಗಳ ಮಗುವಿನಿಂದ 5 ವರ್ಷ 10 ತಿಂಗಳ ಮಕ್ಕಳು ಅಂಗನವಾಡಿ ಕೇಂದ್ರಕ್ಕೆ ದಾಖಲಾಗುತ್ತಿದ್ದರು. ಶಿಕ್ಷಣ ಇಲಾಖೆ ಸರ್ಕಾರಿ ಶಾಲೆಗಳಲ್ಲಿ ಅನಿಯಮಿತವಾಗಿ ಎಲ್.ಕೆ.ಜಿ – ಯು.ಕೆ.ಜಿ.ಗಳನ್ನು ತೆರೆದಿದ್ದರಿಂದ ಅಂಗನವಾಡಿ ಮಕ್ಕಳನ್ನು ಅಲ್ಲಿ ದಾಖಲು ಮಾಡಿ ಅಂಗನವಾಡಿ ಕೇಂದ್ರಕ್ಕೆ ಈಗಾಗಲೇ ಮಕ್ಕಳ ಸಂಖ್ಯೆ ಕಡಿಮೆಯಾಗುತ್ತಿದೆ. 5 ವರ್ಷ ತುಂಬುವುದಕ್ಕೆ ಮೊದಲು ಎನ್‌ಇಪಿಯ ಪ್ರಕಾರ 5 ವರ್ಷದ ಮಕ್ಕಳಿಗೆ ಬಾಲವಾಟಿಕಾ ಎನ್ನುವ ಪ್ರತ್ಯೇಕ ವ್ಯವಸ್ಥೆ ಮಾಡಿದರೆ ಅಂಗನವಾಡಿಗಳಲ್ಲಿ ಕೇವಲ 3 ವರ್ಷದ ಮಕ್ಕಳು ಮಾತ್ರ ಇರುತ್ತಾರೆ. ಇದರಿಂದ ಅಂಗನವಾಡಿ ಕೇಂದ್ರಗಳು ನಿಧಾನಗತಿಯಲ್ಲಿ ಮಕ್ಕಳೇ ಇಲ್ಲದ ಪರಿಸ್ಥಿತಿ ಸಂಭವಿಸುತ್ತದೆ. ಇದರಿಂದಾಗಿ 1974 ಮಕ್ಕಳ ರಾಷ್ಟ್ರೀಯ ನೀತಿ, 1975ರ ಐಸಿಡಿಎಸ್ ಯೋಜನೆಯ ಉದ್ದೇಶ, 2002ರ ವಿಶ್ವ ಸಂಸ್ಥೆಯ ಪೋಷಣೆ 2013ರ ಮಕ್ಕಳ ರಾಷ್ಟ್ರೀಯ ನೀತಿ ಮತ್ತು ಗುರಿಗಳನ್ನು ಸಾಧಿಸಲು ಸಾಧ್ಯವಿಲ್ಲ ಎಂದರು.



ಅಂಗನವಾಡಿ ನೌಕರರನ್ನು ಐಸಿಡಿಎಸ್‌ನ 6 ಸೇವೆಗಳಿಗೆ ಮಾತ್ರ ಸೀಮಿತ ಮಾಡಬೇಕು. ಐಸಿಡಿಎಸ್ ಯೇತರ ಕೆಲಸಗಳನ್ನು ನಿರ್ಬಂಧಿಸಬೇಕು ಹಾಗೂ ಕಾರ್ಯಕರ್ತೆಯರನ್ನು ಶಿಕ್ಷಕಿ ಎಂದು ಗುರುತಿಸಬೇಕು. ಅಂಗನವಾಡಿ ನೌಕರರಿಗೆ ತರಬೇತಿ ನೀಡಿ ಇಸಿಸಿಇ ಮಾರ್ಗದರ್ಶನ ಪ್ರಕಾರ ಪೂರ್ವ ಪ್ರಾಥಮಿಕ ಶಿಕ್ಷಣಕ್ಕೆ ಒತ್ತು ನೀಡಬೇಕು. ಅಂಗನವಾಡಿ ಕೇಂದ್ರಕ್ಕೆ ಹೆಚ್ಚುವರಿ ಸಹಾಯಕಿಯನ್ನು ನೇಮಕ ಮಾಡಬೇಕು. ಅಂಗನವಾಡಿ ಕೇಂದ್ರಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕು. ಅಂಗನವಾಡಿ ಕೇಂದ್ರಕ್ಕೆ ಬರುವ ಮಕ್ಕಳಿಗೆ ಸಮವಸ್ತ್ರ, ಷೂಗಳು ಅಗತ್ಯವಿರುವ ವಿದ್ಯಾಭ್ಯಾಸದ ಪರಿಕರಗಳನ್ನು ಕೊಡಬೇಕು. ಅಂಗನವಾಡಿ ನೌಕರರ ವೇತನವನ್ನು ಹೆಚ್ಚಿಸಬೇಕು. ಕೊರೋನಾ ವಾರಿಯರ್ಸ್ ಆಗಿ ಕೆಲಸ ಮಾಡಿ ಸೋಂಕಿತರಾಗಿ ನಿಧನರಾದ ಅಂಗನವಾಡಿ ನೌಕರರಿಗೆ ಕೂಡಲೇ 30 ಲಕ್ಷ ಪರಿಹಾರ ಬಿಡುಗಡೆ ಮಾಡಬೇಕು. ಕೊರೋನಾ ಸಂದರ್ಭದ ಕೆಲಸದ ಒತ್ತಡದಿಂದ ಮೃತರಾದವರಿಗೆ ಮರಣ ಪರಿಹಾರ 1 ಲಕ್ಷ ರೂ. ಕೊಡಬೇಕು ಎಂಬ ಬೇಡಿಕೆ ಸೇರಿದಂತೆ 25 ಕ್ಕೂ ಹೆಚ್ಚು ಬೇಡಿಕೆಗಳ ಈಡೇರಿಕೆಗಾಗಿ ಅನಿರ್ಧಿಷ್ಟಾವದಿ ಹೋರಾಟಕ್ಕೆ ಅಂಗನವಾಡಿ ನೌಕರರು ಸಿದ್ದರಾಗಿದ್ದಾರೆ.

ಹಕ್ಕುಗಳ ರಕ್ಷಣೆಗಾಗಿ ಹೋರಾಟಕ್ಕೆ ಸಜ್ಜಾಗಲು ಹಂಚು ಕಾರ್ಮಿಕರು ನಿರ್ಧಾರ

ಉಡುಪಿ ಜಿಲ್ಲಾ ಹಂಚು ಕಾರ್ಮಿಕರ ಸಂಘದ 21ನೇ ವಾರ್ಷಿಕ ಮಹಾಸಭೆಯು ಡಿಸೆಂಬರ್ 12, 2021 ರಂದು ನಡೆದಿದ್ದು, ಸರಕಾರದ ಕಾರ್ಮಿಕ ವಿರೋಧಿ ಧೋರಣೆಯಿಂದಾಗಿ ಹಂಚು ಉದ್ಯಮ ಮುಚ್ಚುವ ಭೀತಿಯಲ್ಲಿದೆ ಎಂಬ ಒಕ್ಕರೊಲಿನ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಕುಂದಾಪುರ ಹಂಚು ಕಾರ್ಮಿಕರ ಭವನದಲ್ಲಿ ಸಂಘದ ಅಧ್ಯಕ್ಷ ವಿ.ನರಸಿಂಹ ಮಾತನಾಡಿ ಕಳೆದ ಐದು ದಶಕಗಳಿಂದಲೂ ಕರಾವಳಿ ಜಿಲ್ಲೆಯಾದ್ಯಂತ ಹಂಚು ಕಾರ್ಮಿಕರು ಸಿಐಟಿಯು ನೇತೃತ್ವದಲ್ಲಿ ಸಂಘಟಿತರಾಗಿ ತಮ್ಮ ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಿ ಸರಕಾರದ ವಿರುದ್ಧ ಸಮರಶೀಲ ಹೋರಾಟ ಮಾಡಿ ಗೆಲುವು ಸಾಧಿಸಿದ್ದಾರೆ. ಆದರೆ, ಈಗ ಸರ್ಕಾರದ ಹೊಸ ನೀತಿಗಳಿಂದಾಗಿ ಹಂಚು ಕಾರ್ಮಿಕರ ಮೇಲೆ ಗಂಭೀರ ಪರಿಣಾಮ ಬೀರಿದೆ ಎಂದು ತಿಳಿಸಿದರು.

ಅಖಿಲ ಭಾರತ ಕೃಷಿಕೂಲಿಕಾರರ ಸಂಘದ ಉಡುಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೋಣಿ ವೆಂಕಟೇಶ ನಾಯಕ್ ವಾರ್ಷಿಕ ಮಹಾಸಭೆಗೆ ಶುಭ ಕೋರಿ ಮಾತನಾಡಿ, ಗ್ರಾಮಾಂತರ ಪ್ರದೇಶದ ಹಳ್ಳಿಯ ಬಡವರಾದ ಬಡ ರೈತ, ಕೃಷಿಕೂಲಿಕಾರರ ಸಂಘಟನೆಗೆ, ಹಂಚು ಕಾರ್ಮಿಕರು ಸಕ್ರಿಯ ಬೆಂಬಲ ಕೊಡಬೇಕಾಗಿ ವಿನಂತಿಸಿಕೊಂಡರು.

ಸಂಘದ ಪ್ರಧಾನ ಕಾರ್ಯದರ್ಶಿ ಎಚ್.ನರಸಿಂಹ ವಾರ್ಷುಕ ಚಟುವಟಿಕೆಯ ವರದಿ ಮಂಡಿಸಿದರು. ಕೋಶಾಧಿಕಾರಿ ಪ್ರಕಾಶ್ ಕೋಣಿ ಲೆಕ್ಕ ಪತ್ರಮಂಡಿಸಿದರು. ವರದಿಯ ಮೇಲೆ ಪ್ರತಿನಿಧಿಗಳು ಚರ್ಚಿಸಿದ ಬಳಿಕ ಸರ್ವಾನುಮತದಿಂದ ಅಂಗೀಕರಿಸಿದರು. ಮಹೇಶ್ ಶ್ರದ್ಧಾಂಜಲಿ ಠರಾವು ಮಂಡಿಸಿದರು.

ಕೇಂದ್ರ, ರಾಜ್ಯದ ಬಿಜೆಪಿ ಸರಕಾರದ ರೈತ, ಕಾರ್ಮಿಕ ವಿರೋಧಿ ನೀತಿಗಳ ವಾಪಾಸ್ಸಾತಿಗೆ ಆಗ್ರಹಿಸಿ ಜರಗುವ ಆಖಿಲ ಭಾರತ ಮುಷ್ಕರ ಯಶಸ್ವಿಗೊಳಿಸುವುದು, ಹಂಚು ಉದ್ಯಮ ಮತ್ತು ಕಾರ್ಮಿಕರ ಉದ್ಯೋಗ ರಕ್ಷಿಸಲು ಆಗ್ರಹಿಸಿ, ಇ.ಎಸ್.ಐ. ಸೌಲಭ್ಯ ಸಮರ್ಪಕವಾಗಿ ಜಾರಿಗೆ ತರಲು ಒತ್ತಾಯಿಸಿ, ಜೀವನಾವಶ್ಯಕ ವಸ್ತುಗಳ ಹಾಗೂ ತೈಲೋತ್ಪನ್ನಗಳ ಬೆಲೆ ಏರಿಕೆ ತಡೆಗಟ್ಟಬೇಕು ಇತ್ಯಾದಿ ನಿರ್ಣಯಗಳನ್ನು ಅಂಗೀಕರಿಸಿದರು.

ಈ ಬೇಡಿಕೆಗಳನ್ನು ಜಾರಿಗೊಳಿಸಲು ಆಗ್ರಹಿಸಿ ಮುಂಬರುವ ದಿನಗಳಲ್ಲಿ ಹೋರಾಟವನ್ನು ಹಮ್ಮಿಕೊಳ್ಳಲು ಮಹಾಸಭೆಯು ನಿರ್ಧರಿಸಿದೆ.


ನೂತನ ಕಾರ್ಯಕಾರಿ ಸಮಿತಿ ಆಯ್ಕೆ

ವಿ.ನರಸಿಂಹ(ಅಧ್ಯಕ್ಷ), ಕೆ.ಶಂಕರ್, ಜಿ.ಡಿ.ಪಂಜು, ವಾಸು ಪೂಜಾರಿ, ಸುರೇಂದ್ರ (ಉಪಾಧ್ಯಕ್ಷರು), ಎಚ್.ನರಸಿಂಹ (ಪ್ರಧಾನ ಕಾರ್ಯದರ್ಶಿ), ಪ್ರಕಾಶ ಕೋಣಿ (ಕೋಶಾಧಿಕಾರಿ), ಲಕ್ಷ್ಮಣ.ಡಿ., ಚಂದ್ರ ಪೂಜಾರಿ (ಜೊತೆ ಕಾರ್ಯದರ್ಶಿ) ಇವರನ್ನೊಳಗೊಂಡ 70 ಮಂದಿಯ ಕಾರ್ಯಕಾರಿ ಸಮಿತಿ ರಚನೆ ಮಾಡಿದರು.



ವರದಿ: ಕೋಣಿ ವೆಂಕಟೇಶ ನಾಯಕ್





ಓಮಿಕ್ರೋನ್ ಬಗ್ಗೆ ಈಗ ನಮಗೆಷ್ಟು ತಿಳಿದಿದೆ?

ಓಮಿಕ್ರೋನ್ ಹಿಂದಿನ ರೂಪಾಂತರಿಗಳಿಗಿಂತ ಹೆಚ್ಚು ಅಪಾಯಕಾರಿಯೇ? ಒಬ್ಬರಿಂದ ಇನ್ನೊಬ್ಬರಿಗೆ ಹರಡುವ ವೇಗ ಜಾಸ್ತಿಯೇ? ಇದು ಲಸಿಕೆಗೆ ಹೆಚ್ಚಿನ ಪ್ರತಿರೋಧ ತೋರಿಸುತ್ತದೆಯೆ? ಎನ್ನುವುದನ್ನು ಈಗಲೇ ನಿಖರವಾಗಿ ಹೇಳುವುದು ಅಸಾಧ್ಯ. ಈಗ ಸಿಗುವ ಮಾಹಿತಿಯ ಪ್ರಕಾರ ಇದು ಡೆಲ್ಟಾಗಿಂತ ಹೆಚ್ಚು ಶೀಘ್ರವಾಗಿ ಹರಡಬಹುದು. ಆದರೆ ಕಾಯಿಲೆ ಸೌಮ್ಯ ಸ್ವಭಾವದ್ದಾಗಿದ್ದು ಇಲ್ಲಿಯ ತನಕ ಐ.ಸಿ.ಯುವಿನಲ್ಲಿನ ಚಿಕಿತ್ಸೆಯ ಅಗತ್ಯ ಬಿದ್ದಿಲ್ಲ. ಸಾವುಗಳೂ ವರದಿಯಾಗಿಲ್ಲ. ಓಮಿಕ್ರಾನ್ ರೂಪಾಂತರಿಯ ಮೇಲೆ ಲಸಿಕೆಯ ಪರಿಣಾಮ ಉಳಿದ ರೂಪಾಂತರಿಗಳಿಗಿಂತ ಸ್ವಲ್ಪ ಕಡಿಮೆಯಾಗುವ ಸಾಧ್ಯತೆ ಇದ್ದರೂ ಲಸಿಕೆಗೆ ರೂಪಾಂತರಿ ಸಂಪೂರ್ಣ ಪ್ರತಿರೋಧ ಬೆಳೆಸಿಕೊಳ್ಳುವ ಸಾಧ್ಯತೆ ಇಲ್ಲ. ಹೀಗಾಗಿ ಈ ಲಸಿಕೆ ಓಮಿಕ್ರಾನ್‌ನಿಂದ ತೀಕ್ಷ್ಣ ಕಾಯಿಲೆ ಬರದಂತೆ ತಡೆಗಟ್ಟುವ ಶಕ್ತಿ ಹೊಂದಿರುತ್ತದೆ ಎನ್ನುವ ಭರವಸೆ ತಜ್ಞರಿಗೆ ಇದೆ. ಎರಡು ಡೋಸ್ ಲಸಿಕೆಯಿಂದ ದೇಹದಲ್ಲಿ ಉಂಟಾಗುವ ರೋಗ ನಿರೋಧಕ ಸಾಮರ್ಥ್ಯ ಎಷ್ಟು ಕಾಲ ಉಳಿಯುವುದು ಎಂದು ನಿಖರವಾಗಿ ಹೇಳಲು ಸಾಧ್ಯವಿಲ್ಲ. ಈ ಕಾಲಾವಧಿಯ ನಂತರ ಕಡಿಮೆಯಾಗಿ ರೋಗ ತಡೆಗಟ್ಟುವ ಸಾಮರ್ಥ್ಯ ಹೆಚ್ಚಿಸುವ ಬೂಸ್ಟರ್ ಲಸಿಕೆಯನ್ನು ನೀಡುವುದೇ ಸೂಕ್ತ. ಆದರೆ ಅದಕ್ಕೂ ಮೊದಲು ಇನ್ನೂ ಲಸಿಕೆ ಪಡೆಯದ ಜನರಿಗೆ ಅದನ್ನು ನೀಡುವುದು ಇಂದಿನ ಪರಿಸ್ಥಿತಿಯಲ್ಲಿ ಬಹಳ ಅಗತ್ಯ. 3ನೇ ಅಲೆ ತೀಕ್ಷ್ಣವಾಗಿ ಬರುವ ಸಂಭವ ಕಡಿಮೆಯಾಗಿದ್ದರೂ, ಅಂತಹ ಪರಿಸ್ಥಿತಿ ಬಂದರೆ ಅದನ್ನು ಎದುರಿಸಲು ಬೇಕಾದ ಎಲ್ಲಾ ಸೂಕ್ತ ವ್ಯವಸ್ಥೆ ಮಾಡುವುದು ಸರ್ಕಾರದ ಕರ್ತವ್ಯ.

ಡಾ. ಸುಶೀಲಾ ಕೆ.

ಪ್ರಪಂಚವನ್ನೇ ನಡುಗಿಸಿದ ಕೋವಿಡ್–19 ಗೆ ಕಾರಣವಾದ ಸಾರ್ಸ್–ಕೋವ್–2 ವೈರಸ್ ಈ 2 ವರ್ಷದ ಕಾಲಾವಧಿಯಲ್ಲಿ ತನ್ನ ಸಂಖ್ಯೆಯನ್ನು ಅತ್ಯಧಿಕ ಸಂಖ್ಯೆಯಲ್ಲಿ ವೃದ್ಧಿಸಿಕೊಂಡಿತು. ಆಗ ಸಹಜವಾಗಿಯೇ ಅವುಗಳಲ್ಲಿ ಕೆಲವೊಂದು ತಮ್ಮ ರಚನೆಯಲ್ಲಿ ಅತ್ಯಲ್ಪ ಬದಲಾವಣೆಗೊಳಗಾಗಿದ್ದುವು. ಇವಿಗಳನ್ನು 'ರೂಪಾಂತರಿ ವೈರಸ್' (Viral Variant) ಎಂದು ಕರೆಯುತ್ತಾರೆ. ಈ ರೂಪಾಂತರಿಗಳನ್ನು ಗುರುತಿಸಲು ಅವುಗಳಿಗೆ ನಾಮಕರಣ ಮಾಡುವುದು ಅವಶ್ಯಕ. ಆದರೆ ಸಂಶೋಧಕರು ನೀಡುವ ತಾಂತ್ರಿಕ ಹೆಸರುಗಳು ಜನ ಜನಸಾಮಾನ್ಯರಿಗೆ ಬಳಸಲು ಕಷ್ಟ. ಉದಾ: ಯು.ಕೆ. ಯಲ್ಲಿ ಪತ್ತೆಯಾದ ರೂಪಾಂತರಿ ಬಿ.1.1.7., ದ.ಆಫ್ರಿಕಾದ ಬಿ.1.351, ಭಾರತದ 1.617 ಗಳ ಈ ರೀತಿಯ ಹೆಸರುಗಳಿಗೆ ಬದಲಾಗಿ ಜನರು ಯು.ಕೆ. ವೈರಸ್, ದ.ಆಫ್ರಿಕಾದ ವೈರಸ್ ಹಾಗೂ ಭಾರತದ ವೈರಸ್ ಎಂದು ಕರೆಯಲು ಪ್ರಾರಂಭಿಸಿದ್ದರು. ಸಾರ್ವಜನಿಕರಲ್ಲಿ ಗೊಂದಲ ಹುಟ್ಟಿಸುವ ಅಥವಾ ಯಾವುದಾದರೂ ದೇಶಗಳಿಗೆ ಕಳಂಕ ತರುವ ಹೆಸರಿನ ಬದಲು ಪ್ರತಿರೂಪಾಂತರಿಗೂ 2021 ಮೇ ತಿಂಗಳಲ್ಲಿ ವಿಶ್ವ ಆರೋಗ್ಯ ಸಂಸ್ಥೆ (WHO–ವಿ.ಆ.ಸಂ) ಗ್ರೀಕ್ ಅಕ್ಷರ ಮಾಲೆಯ 24 ಅಕ್ಷರಗಳನ್ನು ಕ್ರಮಬದ್ಧವಾಗಿ ನೀಡಲು ನಿರ್ಧರಿಸಿತ್ತು. ಅದಾಗಲೇ 12 ರೂಪಾಂತರಿಗಳು ಪತ್ತೆಯಾಗಿದ್ದು 'ಓಮಿಕ್ರಾನ್' 13ನೇ ರೂಪಾಂತರಿ ಹಾಗೂ 13ನೇ ಅಕ್ಷರ ನು(NU). ಇದನ್ನು ನ್ಯೂ ಎಂದು ಉಚ್ಛರಿಸುವ ಸಾಧ್ಯತೆ ಇತ್ತು. ಹಾಗೂ 14ನೇ ಅಕ್ಷರ ಕ್ಸಿ (Xi). ಇದು ಚೀನಾದ ಅಧ್ಯಕ್ಷರ ಹಾಗೂ ಅಲ್ಲಿನ ಬಹಳಷ್ಟು ನಾಗರಿಕರ ಹೆಸರಿನ ಭಾಗವಾಗಿತ್ತು. ಯಾವುದೇ ಸಂಸ್ಕೃತಿ, ಸಮಾಜ, ರಾಷ್ಟ್ರ, ಪ್ರದೇಶ, ವೃತ್ತಿ ಅಥವಾ ಜನಾಂಗದ ಮನನೋಯಿಸುವ ಸಂದರ್ಭ ಬಾರದಿರುವಂತೆ ನೋಡಿಕೊಳ್ಳುವುದು ವಿ.ಆ.ಸಂ.ಯ ಧ್ಯೇಯ. ಹಾಗಾಗಿ ಈ ಎರಡು ಅಕ್ಷರಗಳನ್ನು ಬಿಟ್ಟು ಅಕ್ಷರ ಮಾಲೆಯ 15ನೇ ಅಕ್ಷರವಾದ 'ಓಮಿಕ್ರಾನ್'ನ್ನು ಈ ರೂಪಾಂತರಿಗೆ ಇಡಲಾಯಿತು.

ಎಲ್ಲಾ ದೇಶದಲ್ಲಿ ಈ ಕಾಯಿಲೆಯ ಕೆಲವು ರೋಗಿಗಳ ವೈರಸ್‌ಗಳ ವಂಶಾವಳಿಯ (Genomics Sequencing) ಕ್ರಮಾಂಕ ಪರೀಕ್ಷಿಸುತ್ತಾ ಇರುವುದು ಸಾಮಾನ್ಯ ಪದ್ಧತಿ. ಹಾಗೆ ಪರೀಕ್ಷಿಸುತ್ತಿದ್ದಾಗ ನವೆಂಬರ್ 9 ರಂದು ಬೋಟ್ಸ್‌ವಾನಾದಲ್ಲಿ ಹೊಸ ರೂಪಾಂತರಿಯೊಂದು ಪತ್ತೆಯಾಗಿತ್ತು. ಅದೇ ಸಮಯದಲ್ಲಿದ. ಆಫ್ರಿಕಾದಲ್ಲಿ ಕೆಲವು ಕೋವಿಡ್–19 ರೋಗಿಗಳಿಗೆ ಆ ಕಾಯಿಲೆಯ ಗುಣ ಲಕ್ಷಣದ ಬದಲು ಬೇರೆ ಕಾಯಿಲೆ ಗುಣಲಕ್ಷಣ ಕಾಣಿಸಿಕೊಂಡವು. ಆಗ ಆ ರೋಗಿಗಳ ವೈರಸ್ ಮಾದರಿಯನ್ನು 20 ನವೆಂಬರ್ 2021 ರಂದು ವಂಶಾವಳಿಗಳ ಕ್ರಮಾಂಕದ ಪರೀಕ್ಷೆಗೊಳಪಡಿಸಿದಾಗ ಬೋಟ್ಸ್‌ವಾನದಲ್ಲಿ ಪತ್ತೆಯಾದ ರೂಪಾಂತರಿ ಇಲ್ಲಿಯೂ ಕಾಣಿಸಿಕೊಂಡಿತ್ತು. ಆ ತಿಂಗಳ 24 ರಂದು ಇದನ್ನು ವಿ.ಆ.ಸಂ.ಯ ಅವಗಾಹನೆಗೆ ತರಲಾಯಿತು. 'ಓಮಿಕ್ರಾನ್' ರೂಪಾಂತರಿಯ ಹೆಸರಿನಲ್ಲಿ ಇದು ಪ್ರಪಂಚಕ್ಕೆ ಪರಿಚಿತವಾಯಿತು. ಆದರೆ ಸಾಧಾರಣ ಅದೇ ಸಮಯದಲ್ಲಿ ಯುರೋಪಿನ ಕೆಲವು ದೇಶಗಳಲ್ಲೂ ಇದು ಪತ್ತೆಯಾಯಿತು. ಹಾಗಾಗಿ ಇದರ ತೌರು ದ.ಆಫ್ರಿಕಾ ಎಂದು ಖಚಿತವಾಗಿ ಹೇಳಲಾಗದು. ಡಿಸೆಂಬರ್ 8ನೇ ತಾರೀಖಿನ ತನಕ ಈ ಓಮಿಕ್ರಾನ್ ಅದಾಗಲೇ ಯೂರೋಪಿನ 21 ದೇಶಗಳೂ ಸೇರಿದಂತೆ ಪ್ರಪಂಚದ 57 ದೇಶಗಳಲ್ಲಿ ಕಾಣಿಸಿಕೊಂಡಿದೆ.

ಈ ಓಮಿಕ್ರೋನ್ ಹಿಂದಿನ ರೂಪಾಂತರಿಗಳಿಗಿಂತ ಹೆಚ್ಚು ಅಪಾಯಕಾರಿಯೇ? ಒಬ್ಬರಿಂದ ಇನ್ನೊಬ್ಬರಿಗೆ ಹರಡುವ ವೇಗ ಜಾಸ್ತಿಯೇ? ಇದು ಲಸಿಕೆಗೆ ಹೆಚ್ಚಿನ ಪ್ರತಿರೋಧ ತೋರಿಸುತ್ತದೆಯೆ? ಎನ್ನುವುದನ್ನು ಈಗಲೇ ನಿಖರವಾಗಿ ಹೇಳುವುದು ಅಸಾಧ್ಯ. ಇದು ಪತ್ತೆಯಾಗಿ ಹೆಚ್ಚು ಸಮಯವಾಗಿಲ್ಲ. ಇನ್ನು ಪ್ರಪಂಚದ ಹೆಚ್ಚಿನ ದೇಶಗಳಲ್ಲಿ 'ಡೆಲ್ಟಾ' ರೂಪಾಂತರಿಯ ಅಟ್ಟಹಾಸ ಮುಂದುವರಿಯುತ್ತಿದೆ. ಈಗಿನ (8 ಡಿಸೆಂಬರ್ 2021) ತನಕ ಯುರೋಪಿನಲ್ಲಿ ಈ ಓಮಿಕ್ರಾನ್ ರೂಪಾಂತರಿಯ ಪ್ರಮಾಣ ಒಟ್ಟು ಸೋಂಕಿತರ ಶೇಕಡಾ ಒಂದರಷ್ಟಿದೆ.

ಆರ್.ಟಿ.ಪಿ.ಸಿ.ಆರ್. ನಿಂದ ಪತ್ತೆಯಾದ ಕೋವಿಡ್ ರೋಗಿಗೆ ಓಮಿಕ್ರಾನ್ ರೂಪಾಂತರಿಯಿಂದ ಸೋಂಕು ಬಂದಿದೆಯಾ ಎಂದು ತಿಳಿಯಲು ವಂಶಾವಳಿಯ ಕ್ರಮಾಂಕದ ಪರೀಕ್ಷೆ ಮಾಡುವುದು ಅಗತ್ಯ. ಟೆಕ್‌ಪಾತ್ Taq Path) ಕೋವಿಡ್–19 ಕಿಟ್‌ನಿಂದಲೂ ಈ ರೂಪಾಂತರಿಯ ಪತ್ತೆ ಸಾಧ್ಯ ಎನ್ನುವ ಮಾಹಿತಿ ಇದೆ.


ಆದರೆ ಈಗ ಸಿಗುವ ಮಾಹಿತಿಯ ಪ್ರಕಾರ ಇದು ಡೆಲ್ಟಾಗಿಂತ ಹೆಚ್ಚು ಶೀಘ್ರವಾಗಿ ಹರಡಬಹುದು. ಇದರ ರಚನೆಯಲ್ಲಿ 50 ಬದಲಾವಣೆಗಳಿದ್ದು ಇದರಲ್ಲಿ 32 ಬದಲಾವಣೆಗೆ ಇದರ ಹೊರ ಕವಚದಿಂದ ಹೊರಗೆ ಚಾಚಿಕೊಂಡಿರುವ ಸ್ಪೈಕ್ ಪ್ರೊಟೀನ್‌ನಲ್ಲಿ ಆಗಿದೆ. ದೇಹದ ಜೀವ ಕಣದ ಒಳ ಪ್ರವೇಶಿಸಲು ಈ ವೈರಸ್‌ಗಳು ಸ್ಪೈಕ್ ಪ್ರೊಟೀನ್‌ಗಳನ್ನು ಉಪಯೋಗಿಸುತ್ತದೆ. ಎಂ.ಆರ್.ಎನ್.ಎ (mRNA) ಎಂದು ಕರೆಯಲಾಗುವ ವಿಧದ ಲಸಿಕೆಗಳಾದ ಮೊಡರ್ನಾ ಹಾಗೂ ಫೈಝರ್‌ಗಳು ಉತ್ಪತ್ತಿಸುವ ಆ್ಯಂಟಿಬೋಡಿಗಳು ಈ ಸ್ಪೈಕ್ ಪ್ರೊಟೀನ್‌ಗಳ ವಿರುದ್ಧ ಕಾರ್ಯನಿರ್ವಹಿಸಿ ಅವುಗಳು ಜೀವಕಣದೊಳಗೆ ಪ್ರವೇಶಿಸದಂತೆ ನಿರ್ಬಂಧಿಸುತ್ತವೆ. ಆದರೆ ಹೆಚ್ಚಿನ ಸಂಖ್ಯೆಯಲ್ಲಿ ಬದಲಾವಣೆಗೆ ಒಳಗಾದ ಓಮಿಕ್ರಾನ್‌ನ ಸ್ಪೈಕ್ ಪ್ರೋಟೀನ್ ಈ ಆ್ಯಂಟಿ ಬೋಡಿಗಳಿಗೆ ಪ್ರತಿರೋಧ ತೋರಿಸುವ ಸಾಧ್ಯತೆ ಇದೆಯೆ, ಇದ್ದರೆ ಯಾವ ಪ್ರಮಾಣದಲ್ಲಿ ಎನ್ನುವುದು ಕಾದು ನೋಡಬೇಕಾಗಿದೆ. ಹಾಗಾಗಿ ಲಸಿಕೆಯ ಸಾಮರ್ಥ್ಯ ಕುಗ್ಗಬಹುದು. ಆದರೆ ಲಸಿಕೆ ಸಂಪೂರ್ಣ ನಿರುಪಯೋಗಿ ಆಗಲಾರದು. ಏಕೆಂದರೆ ದೇಹದ ರಕ್ಷಣಾ ವ್ಯೂಹದಲ್ಲಿ ಮಹತ್ತರ ಪಾತ್ರ ವಹಿಸುವ ಕಣಗಳನ್ನು ಕೂಡಾ ಲಸಿಕೆ ಹೆಚ್ಚಿಸುವುದು.

ಇಲ್ಲಿಯ ತನಕದ ಮಾಹಿತಿಯ ಪ್ರಕಾರ ಈ ರೂಪಾಂತರಿ 30 ವಯಸ್ಸಿಗಿಂತ ಕೆಳಗಿನ ಪ್ರಾಯದವರಲ್ಲಿ ಕಾಣಿಸಿಕೊಂಡಿದೆ. ಅತೀವ–ಆಯಾಸ, ಮೈಕೈ ನೋವು, ಸಣ್ಣ ತಲೆನೋವು, ಗಂಟಲಲ್ಲಿ ಕೆರೆತ ಇದರ ಗುಣಲಕ್ಷಣವಾಗಿದ್ದು, ಕಾಯಿಲೆ ಸೌಮ್ಯ ಸ್ವಭಾವದ್ದಾಗಿದ್ದು ಇಲ್ಲಿಯ ತನಕ ಐ.ಸಿ.ಯುವಿನಲ್ಲಿನ ಚಿಕಿತ್ಸೆಯ ಅಗತ್ಯ ಬಿದ್ದಿಲ್ಲ. ಸಾವುಗಳೂ ವರದಿಯಾಗಿಲ್ಲ.

ಆದರೆ ಈ ರೂಪಾಂತರಿ ಹರಡದಂತೆ ಸೂಕ್ತ ಎಚ್ಚರಿಕೆ ತೆಗೆದುಕೊಳ್ಳುವುದು ಅವಶ್ಯಕ. ಈಗಾಗಲೇ ತಿಳಿದಂತೆ ಮಾಸ್ಕ್‌ಧಾರಣೆ, ಒಬ್ಬರಿಂದೊಬ್ಬರ ನಡುವೆ ಅಂತರ ಕಾಪಾಡುವಿಕೆ, ಪದೇ ಪದೇ ಸಾಬೂನಿನಿಂದ ಕೈ ತೊಳೆಯುವುದು, ಜನರು ಸಭೆ ಸಮಾರಂಭಗಳ ಹೆಸರಲ್ಲಿ ಗುಂಪು ಕೂಡುವುದನ್ನು ನಿರ್ಬಂಧಿಸುವುದು, ಈ ರೂಪಾಂತರಿ ಸಮಾಜದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಹರಡಿ 3ನೇ ಅಲೆಗೆ ಕಾರಣವಾಗದಂತೆ ನೋಡಿಕೊಳ್ಳುವುದು ಅಗತ್ಯ. ಒಮ್ಮೆ ಸಮಾಜದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಇದರ ಸೋಂಕು ಕಾಣಿಸಿಕೊಂಡರೆ ಆಗ ವಯಸ್ಕರಿಗೆ, ಧೀರ್ಘಕಾಲಿಕ ಕಾಯಿಲೆಗಳಿಂದ ಬಳಲುವವರಿಗೆ, ಈ ದೇಹದಲ್ಲಿ ರೋಗ ನಿರೋಧಕ ಸಾಮರ್ಥ್ಯದ ಕೊರತೆ ಇರುವರಿಗೆ ಈ ಸೋಂಕು ತಗಲುವ ಸಾಧ್ಯತೆ ಹೆಚ್ಚು. ಆಗ ಇಂತಹವರಲ್ಲಿ ಈ ರೂಪಾಂತರಿಯ ಕಾಯಿಲೆಯ ತೀವ್ರತೆ ಹೆಚ್ಚುವ ಸಂಭವ ಇಲ್ಲದಿಲ್ಲ. ಆಗ ಹಲವು ರೋಗಿಗಳಿಗೆ ಆಸ್ಪತ್ರೆಯ ದಾಖಲಾತಿ ಹಾಗೂ ತುರ್ತು ನಿಗಾ ಘಟಕಗಳನ್ನು ಚಿಕಿತ್ಸೆ ಬೇಕಾಗಬಹುದು. ಸಾವು ನೋವಿನ ಪ್ರಮಾಣ ಹೆಚ್ಚಬಹುದು.

3ನೇ ಅಲೆ ಸಂಪೂರ್ಣವಾಗಿ ತಡೆಗಟ್ಟಲು ಸಾಧ್ಯವೆನ್ನುವ ಭರವಸೆ ಇಲ್ಲ. ಆದರೆ ಇದು ಸೌಮ್ಯವಾಗಿರುವಂತೆ ನೋಡಿಕೊಳ್ಳಲು ಸಾಧ್ಯವಾಗಬಹುದು. ನಮ್ಮ ಸರ್ಕಾರ ಇದಕ್ಕಾಗಿ ಜನರು ಕೋವಿಡ್ ತಡೆಗಟ್ಟುವ ಸೂಕ್ತ ಆಚರಣೆಗಳನ್ನು ಪಾಲಿಸುವಂತೆ ನೋಡಿಕೊಳ್ಳಬೇಕು. ಈ ಕಾರ್ಯ ಸಫಲವಾಗಬೇಕಾದರೆ ನಮ್ಮ ರಾಜಕಾರಣಿಗಳು, ಮುಖಂಡರು, ಅಧಿಕಾರಿಗಳು ಈ ಆಚರಣೆಗಳನ್ನು ತಾವು ಪಾಲಿಸುವುದು ಅಗತ್ಯ. ಜನರಲ್ಲಿ ಸೊಂಕು ಶೀಘ್ರದಲ್ಲಿ ಪತ್ತೆ ಹಚ್ಚಲು ಸಾಧ್ಯವಾಗುವಂತೆ ಪರೀಕ್ಷೆಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಮಾಡಬೇಕು. ಹಾಗೂ ಸೋಕಿತರನ್ನು ರೋಗದ ತೀಕ್ಷಣತೆಗನುಗುಣವಾಗಿ ಮನೆಯಲ್ಲಿ ಅಥವಾ ಆಸ್ಪತ್ರೆಯಲ್ಲಿ ಪ್ರತ್ಯೇಕಿಸಿ ಸೂಕ್ತ ಚಿಕಿತ್ಸೆ ನೀಡಬೇಕು.


ದೇಶದಲ್ಲಿನ ಒಟ್ಟು ಜನಸಂಖ್ಯೆಯಲ್ಲಿ ಪ್ರತಿಶತ 70 ರಿಂದ 80 ಜನರಿಗೆ ತಮ್ಮ ದೇಹದಲ್ಲಿ ಈ ರೋಗದ ನಿರೋಧಕ ಶಕ್ತಿ ಹೆಚ್ಚಿಸಿಕೊಳ್ಳಲು ಎರಡು ಡೋಸ್ ಲಸಿಕೆ ನೀಡುವ ಕಾರ್ಯ ಶೀಘ್ರಗತಿಯಲ್ಲಿ ನೆರವೇರುವಂತೆ ನೋಡಿಕೊಳ್ಳುವುದು ಅವಶ್ಯಕ. 11 ಡಿಸೆಂಬರ್ 2021 ರ ತನಕ ನಮ್ಮ ದೇಶದ ಒಟ್ಟು ಜನಸಂಖ್ಯೆಯ 37.8 ಶೇಕಡಾ ಜನರು ಎರಡು ಡೋಸ್ ಲಸಿಕೆ ಪಡೆದಿದ್ದರೆ, 60% ಜನರು ಒಂದು ಡೋಸ್ ಲಸಿಕೆ ಪಡೆದಿದ್ದಾರೆ. ಓಮಿಕ್ರಾನ್ ರೂಪಾಂತರಿಯ ಮೇಲೆ ಲಸಿಕೆಯ ಪರಿಣಾಮ ಉಳಿದ ರೂಪಾಂತರಿಗಳಿಗಿಂತ ಸ್ವಲ್ಪ ಕಡಿಮೆಯಾಗುವ ಸಾಧ್ಯತೆ ಇದ್ದರೂ ಲಸಿಕೆಗೆ ರೂಪಾಂತರಿ ಸಂಪೂರ್ಣ ಪ್ರತಿರೋಧ ಬೆಳೆಸಿಕೊಳ್ಳುವ ಸಾಧ್ಯತೆ ಇಲ್ಲ. ಹೀಗಾಗಿ ಈ ಲಸಿಕೆ ಓಮಿಕ್ರಾನ್‌ನಿಂದ ತೀಕ್ಷ್ಣ ಕಾಯಿಲೆ ಬರದಂತೆ ತಡೆಗಟ್ಟುವ ಶಕ್ತಿ ಹೊಂದಿರುತ್ತದೆ ಎನ್ನುವ ಭರವಸೆ ತಜ್ಞರಿಗೆ ಇದೆ.



ಈ ಎರಡು ಡೋಸ್ ಲಸಿಕೆಯಿಂದ ದೇಹದಲ್ಲಿ ಉಂಟಾಗುವ ರೋಗ ನಿರೋಧಕ ಸಾಮರ್ಥ್ಯ ಎಷ್ಟು ಕಾಲ ಉಳಿಯುವುದು ಎಂದು ನಿಖರವಾಗಿ ಹೇಳಲು ಸಾಧ್ಯವಿಲ್ಲ. ಪ್ರತೀ ವ್ಯಕ್ತಿಯ ದೇಹದ ರಕ್ಷಣಾ ವ್ಯೂಹದ ಸಾಮರ್ಥ್ಯವನ್ನು ಹಾಗೂ ಲಸಿಕೆಯ ವಿಧವನ್ನು ಹೊಂದಿಕೊಂಡು ಇದು ಕೆಲವು ತಿಂಗಳುಗಳಿಂದ ವರ್ಷದ ತನಕ ಇರಬಹುದೆನ್ನುವುದು ತಜ್ಞರ ಅಭಿಪ್ರಾಯ. ಹಾಗಾಗಿ ಈ ಕಾಲಾವಧಿಯ ನಂತರ ಕಡಿಮೆಯಾಗಿ

ಪುಟ 10 ನೋಡಿ





ವ್ಯಂಗ್ಯಚಿತ್ರ ಕೃಪೆ:ಗ್ಲೋಬಲ್ ಟೈಮ್ಸ್

ಬೈಡೆನ್‌ರ ಶೃಂಗದಲ್ಲಿ ಭಾಗವಹಿಸಿದ್ದವರ ಪಟ್ಟಿಯತ್ತ ಒಮ್ಮೆ ಕಣ್ಣು ಹಾಯಿಸಿದರೆ, ಇದು ಸಮ್ಮೇಳನದ ಘೋಷಿತ ಉದ್ದೇಶದಂತೆ 'ಪ್ರಜಾಪ್ರಭುತ್ವದ ಬಲವರ್ಧನೆ ಹಾಗೂ ಸರ್ವಾಧಿಕಾರವನ್ನು ಎದುರಿಸುವುದು' ಅಲ್ಲ ಎನ್ನುವುದು ಸ್ಪಷ್ಟವಾಗುತ್ತದೆ. ಜಾಗತಿಕ ಪ್ರಜಾಪ್ರಭುತ್ವದ ಒಬ್ಬ ಯೋಧ ಎಂದು ಬಣ್ಣ ಬಣ್ಣದ ಮಾತನಾಡಿ ಪೋಸ್ ನೀಡುವ ಬದಲು ಅಮೆರಿಕದಲ್ಲಿ ಪ್ರಜಾಪ್ರಭುತ್ವಕ್ಕೆ ಏನಾಗುತ್ತಿದೆ ಎನ್ನುವುದರ ಮೇಲೆ ಅವರು ಗಮನ ಕೇಂದ್ರೀಕರಿಸಿದರೆ ಒಳ್ಳೆಯದಿತ್ತು.



ಪ್ರಜಾಪ್ರಭುತ್ವದ ಹೆಸರಿನಲ್ಲಿ ಬಣ್ಣ-ಬಣ್ಣದ ಮಾತುಗಳಾಟ

* ಪ್ರಕಾಶ್ ಕಾರಟ್

ಅಮೆರಿಕ ಅಧ್ಯಕ್ಷ ಜೋ ಬೈಡೆನ್ ಡಿಸೆಂಬರ್ 9-10ರಂದು ಆಯೋಜಿಸಿದ್ದ 'ಪ್ರಜಾಪ್ರಭುತ್ವಕ್ಕೆ ಶೃಂಗಸಭೆ' ಜಗತ್ತಿನಾದ್ಯಂತ ಪ್ರಜಾಪ್ರಭುತ್ವವನ್ನು ಬಲಪಡಿಸುವ ಹಾಗೂ ಪ್ರಜಾಪ್ರಭುತ್ವವನ್ನು ದುರ್ಬಲಗೊಳಿಸುವ 'ನಿರಂಕುಶಾಧಿಕಾರಿಗಳ' ಪ್ರಯತ್ನಗಳಿಂದ ರಕ್ಷಿಸುವ ಉದ್ದೇಶದ್ದು ಎನ್ನಲಾಗಿತ್ತು. ಅಮೆರಿಕದ ವಿದೇಶಾಂಗ ಇಲಾಖೆ ಹೇಳಿರುವ ಪ್ರಕಾರ ಶೃಂಗಸಭೆಯ ಮೂರು ಮುಖ್ಯ ಚರ್ಚಾ ವಿಚಾರಗಳು ಹೀಗಿದ್ದವು: ಪ್ರಜಾಪ್ರಭುತ್ವದ ಬಲವರ್ಧನೆ ಹಾಗೂ ಸರ್ವಾಧಿಕಾರವನ್ನು ಎದುರಿಸುವುದು, ಭ್ರಷ್ಟಾಚಾರದ ವಿರುದ್ಧ ಹೋರಾಟ ಮತ್ತು ಮಾನವ ಹಕ್ಕುಗಳಿಗೆ ಗೌರವವನ್ನು ಉತ್ತೇಜಿಸುವುದು.

ಈ ಆನ್‌ಲೈನ್ ಶೃಂಗಸಭೆಗೆ ಒಟ್ಟು 100 ಸರ್ಕಾರಗಳ ನಾಯಕರನ್ನು ಆಹ್ವಾನಿಸಲಾಗಿತ್ತು. ಅವರಲ್ಲಿ 89 ನಾಯಕರು ಸ್ಪಂದಿಸಿದರು. ಶೃಂಗದಲ್ಲಿ ಭಾಗವಹಿಸಿದ್ದವರ ಪಟ್ಟಿಯತ್ತ ಒಮ್ಮೆ ಕಣ್ಣು ಹಾಯಿಸಿದರೆ, ಇದು ಸಮ್ಮೇಳನದ ಘೋಷಿತ ಉದ್ದೇಶದಂತೆ 'ಪ್ರಜಾಪ್ರಭುತ್ವದ ಬಲವರ್ಧನೆ ಹಾಗೂ ಸರ್ವಾಧಿಕಾರವನ್ನು ಎದುರಿಸುವುದಲ್ಲ' ಎನ್ನುವುದು ಸ್ಪಷ್ಟವಾಗುತ್ತದೆ. ಬದಲಿಗೆ, ಚೀನಾ ಮತ್ತು ರಷ್ಯಾ ಎದುರಿಸುವ ಕಾರ್ಯತಂತ್ರವನ್ನು ವಿಸ್ತರಿಸುವ ಹಾಗೂ 'ಪ್ರಜಾಪ್ರಭುತ್ವ ಜಗತ್ತಿನ' ಮೇಲೆ ತನ್ನ ಏಕಚಕ್ರಾಧಿಪತ್ಯ ಉಳಿಸಿಕೊಳ್ಳುವ ಅಮೆರಿಕದ ಯೋಜನೆಯನ್ನು ವಿಸ್ತರಿಸುವ ನಡೆ ಎಂಬುದು ಗೊತ್ತಾಗುತ್ತದೆ.

ಶೃಂಗಸಭೆಯ ಉದ್ಘಾಟನಾ ಭಾಷಣದಲ್ಲಿ ಜೋ ಬೈಡೆನ್ 'ಸರ್ವಾಧಿಕಾರಶಾಹಿಯನ್ನು ಹಿಮ್ಮೆಟ್ಟಿಸುವ' ಕುರಿತು ಮಾತನಾಡಿದ ನಂತರ ಸಮ್ಮೇಳನದಲ್ಲಿ ಬ್ರೆಜಿಲ್ ಅಧ್ಯಕ್ಷ ಜೈರ್ ಬೋಲ್ಸನಾರೊ, ಫಿಲಿಪ್ಪೀನ್ಸ್ ಅಧ್ಯಕ್ಷ ರಾಡ್ರಿಗೊ ಡುಟೆರ್ಟೆ ಮೊದಲಾದವರೊಂದಿಗೆ ಕುಳಿತಿದ್ದರು. ಈ ನಾಯಕರು ತಮ್ಮ ತಮ್ಮ ದೇಶದಲ್ಲಿ ಸರ್ವಾಧಿಕಾರಶಾಹಿಯನ್ನು ಸ್ಥಾಪಿಸಿದ ಚುನಾಯಿತ ನಾಯಕರಾಗಿದ್ದಾರೆ. ಬುಡಕಟ್ಟು ಜನರ ಹಕ್ಕುಗಳ ಉಲ್ಲಂಘನೆ, ಅಮೆಜಾನ್ ಮಳೆ ಕಾಡುಗಳ ನಾಶ ಮತ್ತು ಕೊವಿಡ್ ಸೋಂಕಿನ ಅಪಾಯವನ್ನು ನಿರ್ಲಕ್ಷಿಸಿ ತನ್ನ ದೇಶದ ಜನರನ್ನು ದುರಂತಕ್ಕೆ ತಳ್ಳಿದ ನಾಯಕ ಬೋಲ್ಸನಾರೊ. ಡುಟೆರ್ಟೆ, ಮಾದಕ ದ್ರವ್ಯ ವಿರುದ್ಧದ ಹೋರಾಟದ ಹೆಸರಿನಲ್ಲಿ ಸಾವಿರಾರು ಜನರನ್ನು ಕಾನೂನುಬಾಹಿರವಾಗಿ ಕೊಂದ ಹಾಗೂ ಪತ್ರಕರ್ತರು ಮತ್ತು ಮಾನವ ಹಕ್ಕುಗಳ ಕಾರ್ಯಕರ್ತರನ್ನು ಜೈಲಿಗೆ ತಳ್ಳಿ ವ್ಯಾಪಕ ದಬ್ಬಾಳಿಕೆ ನಡೆಸಿದ ಕುಖ್ಯಾತಿ ಹೊಂದಿದ್ದಾರೆ.

ಅಮೆರಿಕಾದ ಹಿತಾಸಕ್ತಿಗಳನ್ನು ಈಡೇರಿಸುವುದಕ್ಕಾಗಿ ಆಯ್ದ ಆಹ್ವಾನಿತರು ಅಲ್ಲಿದ್ದರು ಎಂಬುದು ತೈವಾನ್‌ಗೆ ಅಮೆರಿಕಾ ತನ್ನದೇ 'ಒಂದು ಚೀನಾ' ನೀತಿಯನ್ನು ಉಲ್ಲಂಘಿಸಿ ಆಹ್ವಾನ ನೀಡಿದ್ದರಲ್ಲಿ, ಮತ್ತು ವೆನೆಜುವೆಲಾದ ತಥಾಕಥಿತ ಮಧ್ಯಂತರ ಅಧ್ಯಕ್ಷ ಜುವಾನ್ ಗುಯಾಡೋ ಕೂಡ ಹಾಜರಿದ್ದುದರಲ್ಲಿ ಕಾಣುತ್ತಿತ್ತು. ಈತನನ್ನು ಅಮೆರಿಕಾ ಅಧ್ಯಕ್ಷ ಮಾದುರೊ ನೇತೃತ್ವದ ಕಾನೂನಬದ್ಧ ಸರ್ಕಾರವನ್ನು ಉರುಳಿಸುವ ಯತ್ನವಾಗಿ ಪೋಷಿಸುತ್ತಿದೆ.

ದಕ್ಷಿಣ ಏಷ್ಯಾದ ಆಹ್ವಾನಿತ ಸರ್ಕಾರಗಳ ಪಟ್ಟಿ ನೋಡಿದರೆ ಕೂಡ ಅಮೆರಿಕದ ತಂತ್ರ ಸ್ಪಷ್ಟವಾಗುತ್ತದೆ. ಪಾಕಿಸ್ತಾನವನ್ನು ಆಹಾನಿಸಲಾಗಿತ್ತು (ಅದು ಭಾಗವಹಿಸಲು ನಿರಾಕರಿಸಿತು); ಆದರೆ ಬಾಂಗ್ಲಾ ದೇಶ ಅಥವಾ ಶ್ರೀ ಲಂಕಾವನ್ನು ಆಹ್ವಾನಿಸಿರಲಿಲ್ಲ. ಭಾರತ, ನೇಪಾಳ ಮತ್ತು ಮಾಲ್ದೀವ್ಸ್ ಆಹ್ವಾನಿತ ಇತರ ಹಲವು ದೇಶಗಳಾಗಿದ್ದವು. ಬಾಂಗ್ಲಾ ದೇಶವು ಪಾಕಿಸ್ತಾನಕ್ಕಿಂತಲೂ ಕಡಿಮೆ ಪ್ರಜಾಪ್ರಭುತ್ವ ದೇಶವೇ? ಆಫ್ಘಾನಿಸ್ತಾನವನ್ನು ಒಳಗೊಳಿಸುವ ತುರ್ತು ಇದ್ದುದು ಪಾಕಿಸ್ತಾನವನ್ನು ಆಹ್ವಾನಿಸುವಲ್ಲಿ ನಿರ್ಣಾಯಕ ಅಂಶವಾಗಿತ್ತು.

ಮೋದಿ ಹೇಳಿಕೆ ಮತ್ತು ಅಮೆರಿಕಾದ ತಿರುಚಿದ ತರ್ಕ

ಶೃಂಗ ಸಭೆಗೆ ನೀಡಿದ ಹೇಳಿಕೆಯಲ್ಲಿ ಪ್ರಧಾನ ಮಂತ್ರಿ ಮೋದಿ, ತಾವು ಜಗತ್ತಿನ ಅತಿ ದೊಡ್ಡ ಪ್ರಜಾಪ್ರಭುತ್ವವನ್ನು ಪ್ರತಿನಿಧಿಸುತ್ತಿರುವುದಾಗಿ ಹೇಳಿದರು. 'ಪ್ರಜಾಸತ್ತಾತ್ಮಕ ಚೇತನ ನಮ್ಮ ನಾಗರಿಕತೆಯ ವಿಲಕ್ಷಣತೆಯ ಅವಿಭಾಜ್ಯ ಅಂಗವಾಗಿದೆ' ಎಂದೂ ಹೇಳಿದರು. ತನ್ನ ಬೆನ್ನನ್ನು ತಾನೇ ತಟ್ಟಿ ಕೊಂಡಂತಿದ್ದ ಭಾಷಣದಲ್ಲಿ ಮೋದಿ, ಭಾರತದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ಎದುರಿಸುತ್ತಿರುವ ಬೆದರಿಕೆಗಳು ಅಥವಾ ಸಮಸ್ಯೆಗಳ ಬಗ್ಗೆ ಚಕಾರವನ್ನೇ ಎತ್ತಲಿಲ್ಲ.

ಬೈಡೆನ್ ತಮ್ಮ ಆರಂಭಿಕ ಟಿಪ್ಪಣಿಗಳಲ್ಲಿ 'ಫ್ರೀಡಂ ಹೌಸ್' ಅನ್ನು ಉಲ್ಲೇಖಿಸಿದರು. ಅದೊಂದು ಅಮೆರಿಕ ಸರ್ಕಾರದಿಂದ ಹಣಕಾಸು ನೆರವು ಪಡೆಯುವ ಸರಕಾರೇತರ ಸಂಘಟನೆ. ಸತತ 15ನೇ ವರ್ಷವೂ ಜಾಗತಿಕ ಸ್ವಾತಂತ್ರ್ಯ ಹಿನ್ನಡೆ ಅನುಭವಿಸುತ್ತಿದೆ ಎಂದು 2020ರಲ್ಲಿ ಫ್ರೀಡಂ ಹೌಸ್ ತನ್ನ ವರದಿಯಲ್ಲಿ ಹೇಳಿತ್ತು. ಅದು 2021ರ ವರದಿಯಲ್ಲಿ ಭಾರತವನ್ನು 'ಸ್ವತಂತ್ರ'ದಿಂದ 'ಭಾಗಶಃ ಸ್ವತಂತ್ರ' ದೇಶದ ಸ್ಥಾನಕ್ಕೆ ಇಳಿಸಿತ್ತು. ಪ್ರಜಾಪ್ರಭುತ್ವ ಕುಸಿಯುತ್ತಿರುವ ಬಗ್ಗೆ 'ಇಂಟರ್‌ನ್ಯಾಷನಲ್ ಇನ್‌ಸ್ಟಿಟ್ಯೂಟ್ ಫಾರ್ ಡೆಮಾಕ್ರಸಿ ಅಂಡ್ ಇಲೆಕ್ಟೋರಲ್ ಅಸಿಸ್ಟನ್ಸ್' (ಅಂತರ್ರಾಷ್ಟ್ರೀಯ ಪ್ರಜಾಪ್ರಭುತ್ವ ಮತ್ತು ಚುನಾವಣಾ ನೆರವಿನ ಸಂಸ್ಥೆ) ಮಾಡಿರುವ ಟಿಪ್ಪಣಿಯನ್ನೂ ಬೈಡೆನ್ ತಮ್ಮ ಭಾಷಣದಲ್ಲಿ ಉಲ್ಲೇಖಿಸಿದರು. "ಭಾರತ, ಇಂಡೋನೇಷ್ಯಾ, ಫಿಲಿಪ್ಪೀನ್ಸ್ ಮತ್ತು ಶ್ರೀ ಲಂಕಾದಲ್ಲಿ ಪ್ರಜಾಪ್ರಭುತ್ವದ ಅವನತಿಯಲೊಂದು ಗಮನಾರ್ಹ ಮುಂದುವರಿಕೆ ದಾಖಲಾಗಿದೆ" ಎಂದು 'ದಿ ಗ್ಲೋಬಲ್ ಸ್ಟೇಟಸ್ ಆಫ್ ಡೆಮಾಕ್ರಸಿ 2021' ವರದಿಯಲ್ಲಿ ಈ ಸಂಸ್ಥೆ ಹೇಳಿದೆ.

ನಿಜ, ಭಾರತದ ಪ್ರಜಾಪ್ರಭುತ್ವದ ಬಗ್ಗೆ ಇಂತಹ ಪ್ರತಿಕೂಲ ವರದಿಗಳನ್ನು ಅಮೆರಿಕಾ ಗಂಭೀರವಾಗಿ ತೆಗೆದುಕೊಳ್ಳಬೇಕಾಗಿಲ್ಲ, ಏಕೆಂದರೆ ಚೀನಾದ ಹೆಚ್ಚುತ್ತಿರುವ ಪ್ರಭಾವದ ವಿರುದ್ಧದ ಹೋರಾಟದಲ್ಲಿ ಭಾರತ ಒಂದು ಮೌಲ್ಯಯುತ ಪಾಲುದಾರ ಎಂದು ಅದು ಪರಿಗಣಿಸುತ್ತದೆ.



ಮೋದಿ ಸಾಂಸ್ಥೀಕರಿಸಿರುವ ಹಿಂದುತ್ವ ಸರ್ವಾಧಿಕಾರಶಾಹೀ ಆಳ್ವಿಕೆ ಮತ್ತು ನಾಗರಿಕರ ಹಕ್ಕುಗಳ ವ್ಯವಸ್ಥಿತ ದಮನ, ಅಲ್ಪಸಂಖ್ಯಾತರ ಮೇಲಿನ ದಾಳಿ, ಮಾಧ್ಯಮದ ದಮನ, ಯುಎಪಿಎಯಂಥ ಕಾನೂನುಗಳನ್ನು ರಾಜಕೀಯ ಕಾರ್ಯಕರ್ತರು ಮತ್ತು ಪತ್ರಕರ್ತರ ವಿರುದ್ಧ ಬಳಸುವುದು ಮುಂತಾದ ಎಲ್ಲ ಕ್ರಮಗಳನ್ನು ನಿರ್ಲಕ್ಷಿಸಬಹುದಾಗಿದೆ. ಬಾಂಗ್ಲಾ ಪ್ರಧಾನಿ ಶೇಖ್ ಹಸೀನಾ ಭಾರತದ ಪ್ರಧಾನಿ ಮೋದಿಗಿಂತ ಹೆಚ್ಚು ಸರ್ವಾಧಿಕಾರಶಾಹಿ ಎಂಬುದನ್ನು ಅಮೆರಿಕದ ವಿದೇಶಾಂಗ ಇಲಾಖೆಯ ತಿರುಚಿದ ತರ್ಕದಿಂದ ಮಾತ್ರವೇ ವಿವರಿಸಲು ಸಾಧ್ಯ.

ಶಬ್ದಗಳೊಡನೆ ಚಿನ್ನಾಟ

ಅಮೆರಿಕದ ಸರ್ಕಾರಗಳು ಪ್ರಜಾಪ್ರಭುತ್ವ ಮತ್ತು ಮಾನವ ಹಕ್ಕುಗಳ ಹೆಸರಿನಲ್ಲಿ ಶಬ್ದಗಳ ಚಿನ್ನಾಟವನ್ನು ಸತತವಾಗಿ ಮುಂದುವರಿಸಿಕೊಂಡು ಬಂದಿವೆ. 1980ರ ದಶಕದಲ್ಲಿ ರೊನಾಲ್ಡ್ ರೇಗನ್ ಅಧ್ಯಕ್ಷರಾಗಿದ್ದಾಗ 'ದಿ ನ್ಯಾಷನಲ್ ಎಂಡೋಮೆಂಟ್ ಫಾರ್ ಡೆಮಾಕ್ರಸಿ'ಯನ್ನು (ಎನ್‌ಇಡಿ) ಸ್ಥಾಪಿಸಲಾಯಿತು. 'ಮುಕ್ತ ಮಾರುಕಟ್ಟೆಗಳು ಪ್ರಜಾಪ್ರಭುತ್ವವನ್ನು ಪೋಷಿಸುತ್ತವೆ' ಎನ್ನುವುದು ಎನ್‌ಇಡಿಯ ಗುರಿಯಾಗಿತ್ತು. ಅಮೆರಿಕಕ್ಕೆ ವಿರುದ್ಧವಾಗಿದೆಯೆನ್ನಲಾದ ಸರ್ಕಾರಗಳ ವಿರುದ್ಧ ಕೆಲಸ ಮಾಡಲು ಪ್ರತಿಪಕ್ಷಗಳಿಗೆ ಹಣಕಾಸು ಒದಗಿಸಲು ಅಮೆರಿಕ ಸರ್ಕಾರಕ್ಕೆ ಇದೊಂದು ಸಾಧನವಾಗಿತ್ತು.

ಬಿಲ್ ಕ್ಲಿಂಟನ್ ಆಡಳಿತ 'ಕಮ್ಯುನಿಟಿ ಫಾರ್ ಡೆಮಾಕ್ರಸೀಸ್' (ಸಿಒಡಿ) ಎಂಬ ವೇದಿಕೆಯನ್ನು ಹುಟ್ಟು ಹಾಕಿತು. 1990-2000ದಲ್ಲಿ ಅಂದಿನ ವಾಜಪೇಯಿ ಸರ್ಕಾರ ಅತ್ಯುತ್ಸಾಹದಿಂದ ಸಿಒಡಿಯನ್ನು ಸೇರಿತು. 2000 ಜೂನ್‌ನಲ್ಲಿ ವಾರ್ಸಾದಲ್ಲಿ ಸಿಒಡಿಯ ಅಂತಾರಾಷ್ಟ್ರೀಯ ಸಮ್ಮೇಳನ ಪ್ರಾಯೋಜಿಸಿದ ಪ್ರಮುಖ ದೇಶಗಳಲ್ಲಿ ಭಾರತವೂ ಒಂದಾಗಿತ್ತು. ಜಾರ್ಜ್ ಬುಷ್ ಅಧಿಕಾರಕ್ಕೆ ಬಂದ ಮೇಲೆ 'ಗ್ಲೋಬಲ್ ಡೆಮಾಕ್ರಸಿ ಇನಿಷಿಯೇಟಿವ್' ಅನ್ನು ಭಾರತ ಸೇರಿತು. 2005ರಲ್ಲಿ ಬುಷ್ ಮತ್ತು ಅಂದಿನ ಪ್ರಧಾನಿ ಮನಮೋಹನ್ ಸಿಂಗ್ ಜಂಟಿ ಹೇಳಿಕೆಯಲ್ಲಿ ಇದನ್ನು ಪ್ರಕಟಿಸಿದರು.

ಸರ್ಕಾರಗಳನ್ನು ಉರುಳಿಸುವ ಉದ್ಯಮ

1950ರ ದಶಕದಿಂದಲೂ ಅಮೆರಿಕದ ಪ್ರಜಾಪ್ರಭುತ್ವ ಉದ್ದಿಮೆಯೆಂದರೆ ಜಗತ್ತಿನಾದ್ಯಂತ ಜನಪ್ರಿಯ ಸರ್ಕಾರಗಳನ್ನು ಅಸ್ಥಿರಗೊಳಿಸುವುದು ಅಥವಾ ಉರುಳಿಸುವುದು. ಗ್ವಾಟೆಮಾಲಾ, ಬ್ರೆಜಿಲ್, ಚಿಲಿ, ಗ್ರೆನಡಾ, ಇರಾನ್, ದಕ್ಷಿಣ ಕೊರಿಯಾ, ಇಂಡೋನೇಷ್ಯಾ ಮುಂತಾದ ಲ್ಯಾಟಿನ್ ಅಮೆರಿಕ, ಆಫ್ರಿಕಾ ಮತ್ತು ಏಷ್ಯಾದ ದೇಶಗಳಲ್ಲಿ ನಾವು ಇದನ್ನು ಕಂಡಿದ್ದೇವೆ. ದೇಶಗಳ ಮೇಲೆ ಮಿಲಿಟರಿ ದಾಳಿ ಮಾಡಿ ಅವುಗಳನ್ನು ವಶಪಡಿಸಿಕೊಂಡು ಅಲ್ಲಿ 'ಪ್ರಜಾಪ್ರಭುತ್ವ ನೆಡಲು' ಯತ್ನಿಸುವುದು ಇನ್ನೊಂದು ವಿಧಾನವಾಗಿದೆ. ಇರಾಕ್ ಮತ್ತು ಆಫ್ಘಾನಿಸ್ತಾನ ತೀರಾ ಈಚಿನ ಉದಾಹರಣೆಗಳಾಗಿವೆ.

ಶೃಂಗಸಭೆಯ ಸಮಾರೋಪದಲ್ಲಿ ಬೈಡೆನ್ 'ಪ್ರಜಾಸತ್ತಾತ್ಮಕ ನವೀಕರಣ ಮತ್ತು ಪ್ರಜಾಪ್ರಭುತ್ವಕ್ಕೆ ಭಾಗೀದಾರಿಕೆ' (ಫಂಡ್ ಫಾರ್ ಡೆಮಾಕ್ರಟಿಕ್ ರಿನ್ಯೂವಲ್ ಮತ್ತು ಪಾರ್ಟ್ನರ್‌ಷಿಪ್ ಫಾರ್ ಡೆಮಾಕ್ರಸಿ) ಕಾರ್ಯಕ್ರಮಗಳಿಗೆ 424 ಮಿಲಿಯ ಡಾಲರ್ ನಿಧಿ ಒದಗಿಸುವುದಾಗಿ ಪ್ರಕಟಿಸಿದರು. ವಿದೇಶಾಂಗ ಇಲಾಖೆ ಮತ್ತು ಯುಎಸ್‌ಎಐಡಿ ಅದನ್ನು ನಿರ್ವಹಿಸುತ್ತವೆ ಎಂದಿದ್ದಾರೆ. ಅಮೆರಿಕದ ಭಾಗೋಳಿಕ-ರಾಜಕೀಯ ಹಿತಾಸಕ್ತಿಗಳನ್ನು ಮುಂದೊತ್ತಲು ಈ ಹಣವನ್ನು ಹೇಗೆ ಬಳಸಲಾಗುತ್ತದೆ ಎನ್ನುವುದನ್ನು ಅರ್ಥ ಮಾಡಿಕೊಳ್ಳಲು ಹೆಚ್ಚಿನ ಪರಿಶ್ರಮವೇನೂ ಬೇಕಿಲ್ಲ.

ಪೋಸ್ ಕೊಡುವುದು ಸಾಕು

ಜಾಗತಿಕ ಪ್ರಜಾಪ್ರಭುತ್ವದ ಒಬ್ಬ ಯೋಧ ಎಂದು ಪೋಸ್ ನೀಡುವ ಬದಲು ಅಮೆರಿಕದಲ್ಲಿ ಪ್ರಜಾಪ್ರಭುತ್ವಕ್ಕೆ ಏನಾಗುತ್ತಿದೆ ಎನ್ನುವುದರ ಮೇಲೆ ಬೈಡೆನ್ ಗಮನ ಕೇಂದ್ರೀಕರಿಸಿದರೆ ಒಳ್ಳೆಯದಿತ್ತು. 'ಮತದಾನದ ಪವಿತ್ರ ಹಕ್ಕಿನ' ಬಗ್ಗೆ ಮತ್ತು ಮುಕ್ತವಾಗಿ ಮತದಾನ ಮಾಡುವುದು 'ಪ್ರಜಾಪ್ರಭುತ್ವಕ್ಕೆ ಸ್ವಾತಂತ್ರ್ಯದ ಹೊಸ್ತಿಲು" ಎಂದೆಲ್ಲಾ ಬೈಡೆನ್ ಸಮಾರೋಪ ಕಾರ್ಯಕ್ರಮದಲ್ಲಿ ಬಣ್ಣ ಬಣ್ಣದ ಮಾತನಾಡಿದ್ದಾರೆ. ಅಮೆರಿಕದಲ್ಲಿ ಈ ಮುಕ್ತ ಮತದಾನದ ಹಕ್ಕನ್ನೇ ದಮನಿಸಲಾಗುತ್ತಿದೆ. ಈ ವರ್ಷವೊಂದರಲ್ಲೇ, ರಿಪಬ್ಲಿಕನ್ನರು ಬಹುಮತದಲ್ಲಿರುವ 19 ರಾಜ್ಯ ಶಾಸನಸಭೆಗಳಲ್ಲಿ ಮತದಾರರನ್ನು ನಿಯಂತ್ರಿಸುವ ಕಾನೂನುಗಳನ್ನು ಅಂಗೀಕರಿಸಲಾಗಿದೆ. ಅವುಗಳು ಕರಿಯರು ಮತ್ತು ಇತರ ವಂಚಿತ ಜನರ ಮತದಾನದ ಹಕ್ಕುಗಳಿಗೆ ಅಡ್ಡಿಯಾಗಿವೆ.

ಪ್ರಜಾಪ್ರಭುತ್ವ, ಭ್ರಷ್ಟಾಚಾರ ವಿರೋಧಿ ಹೋರಾಟ ಮತ್ತು ಮಾನವ ಹಕ್ಕುಗಳ ರಕ್ಷಣೆ -ಈ ಮೂರು ರಂಗಗಳಲ್ಲಿ ಆಗುವ ಪ್ರಗತಿಯ ಪರಿಶೀಲನೆಗೆ ಒಂದು ವರ್ಷದ ನಂತರ ಭೌತಿಕ ಸಭೆಯನ್ನು ಆಯೋಜಿಸುವುದಾಗಿ ಬೈಡೆನ್ ಭರವಸೆ ನೀಡಿದ್ದಾರೆ.ಶೃಂಗ ಸಭೆಯಲ್ಲಿ ಭಾಗವಹಿಸಿದ ಮುಖಂಡರು ಏನು ಪ್ರಗತಿ ಸಾಧಿಸಲಾಗಿದೆ ಎಂದು ವರದಿ ಮಾಡುವುದಾಗಿ ಅವರು ನಿರೀಕ್ಷಿಸುತ್ತಾರಂತೆ. ಇಂತಹ ಕಾರ್ಯನಿರ್ವಹಣೆಯ ವರದಿ ಸಲ್ಲಿಸುವ ಬಗ್ಗೆ ಮೋದಿ ಸರ್ಕಾರಕ್ಕೆ ಯಾವುದೇ ಚಿಂತೆ ಇಲ್ಲ. ಯಾಕೆಂದರೆ ಅಮೆರಿಕದೊಂದಿಗಿನ ಅದರ ಭಾಗೀದಾರಿಕೆ ಇನ್ನೇನನ್ನೋ ಸಾಧಿಸುವ ಉದ್ದೇಶದ್ದು ಎನ್ನುವುದು ಅದಕ್ಕೆ ಚೆನ್ನಾಗಿ ಗೊತ್ತಿದೆ.

ಅನು: ವಿಶ್ವ


ಭಾರತದ ಪ್ರಮುಖ ಎಡಪಕ್ಷ ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ)ದ 23ನೇ ಮಹಾಧಿವೇಶನ ಎಪ್ರಿಲ್ ತಿಂಗಳಲ್ಲಿ ಕೇರಳದ ಕಣ್ಣೂರಿನಲ್ಲಿ ನಡೆಯಲಿದೆ. ಇದಕ್ಕೆ ಪೂರ್ವಭಾವಿಯಾಗಿ ಕರ್ನಾಟಕ ರಾಜ್ಯ ಸಮ್ಮೇಳನ ಜನವರಿ 2ರಿಂದ 4 ರ ವರೆಗೆ ಗಂಗಾವತಿಯಲ್ಲಿ ನಡೆಯಲಿದೆ. ಕರ್ನಾಟಕದ ಜನತೆಯ, ಅದರಲ್ಲೂ ಕಾರ್ಮಿಕರ, ರೈತರ ಮತ್ತು ಇತರ ದುಡಿಯುವ ಜನವಿಭಾಗಗಳ ಹಿತರಕ್ಷಣೆಯಲ್ಲಿ ಕಳೆದ ಮೂರು ವರ್ಷಗಳ ಅನುಭವಗಳು ಮತ್ತು ಅದರ ಬೆಳಕಿನಲ್ಲಿ ಮುನ್ನಡೆಯ ದಾರಿಯನ್ನು ರೂಪಿಸುವುದು ಈ ಸಮ್ಮೇಳನದ ಪ್ರಮುಖ ಕಾರ್ಯಸೂಚಿ. ದುಡಿಯುವ ಜನವಿಭಾಗಗಳ ನಡುವೆ ಕೆಲಸ ಮಾಡುತ್ತಿರುವವರ ಪ್ರತಿನಿಧಿಗಳು ಇದನ್ನು ಆಮೂಲಾಗ್ರವಾಗಿ ಚರ್ಚಿಸಲಿದ್ದಾರೆ. ಇದಕ್ಕಾಗಿ ರಾಜ್ಯ ಮುಖಂಡತ್ವ ಸಿದ್ಧಪಡಿಸಿರುವ ಕರಡು ವರದಿಯ ಕೆಲವು ಅಂಶಗಳನ್ನು ಇಲ್ಲಿ ನಮ್ಮ ಓದುಗರಿಗಾಗಿ ಇಲ್ಲಿ ಪ್ರಕಟಿಸುತ್ತಿದ್ದೇವೆ.



ಕರ್ನಾಟಕದ ಆರ್ಥಿಕ ಪರಿಸ್ಥಿತಿ 2018-21

2016–17 ರಲ್ಲಿ 13.3 ಶೇಕಡವಾರು ಬೆಳೆವಣಿಗೆ ದರ ಸಾಧಿಸಿದ್ದ ಸ್ಥಿರ ಬೆಲೆಗಳ ಆಧಾರಿತ ರಾಜ್ಯದ ಒಟ್ಟಾರೆ ಆಂತರಿಕ ಉತ್ಪನ್ನವು (GSDP) ಆನಂತರ ಪ್ರತಿ ವರ್ಷವು ಇಳಿಮುಖವಾಗಿದೆ. 2020–21 ರಲ್ಲಿ ಭಾರತ ಸರ್ಕಾರದ ಮುನ್ಸೂಚನೆ ಅಂದಾಜಿನಂತೆ –2.6 ಶೇಕಡವಾರು ಋಣಾತ್ಮಕವಾಗಿದೆ. ರಾಷ್ಟ್ರೀಯ ಆಂತರಿಕ ಉತ್ಪನ್ನ ಬೆಳೆವಣಿಗೆ ದರಕ್ಕಿಂತ ಸದಾ ಹೆಚ್ಚಿರುತ್ತಿದ್ದ ರಾಜ್ಯದ ಆಂತರಿಕ ಉತ್ಪನ್ನ ದರವು ಕೋವಿಡ್ ಲಾಕ್ಡೌನ್ ಕಾಲದಲ್ಲೂ ರಾಷ್ಟ್ರೀಯ ಉತ್ಪನ್ನ ಬೆಳವಣಿಗೆ ದರ (–7.7) ಕುಸಿದಿರುವಷ್ಟು ಪ್ರಮಾಣದಲ್ಲಿ ಕುಸಿತ ಕಂಡಿಲ್ಲ. (ಕೋಷ್ಟಕ–1)

ಮೋದಿ ನೇತೃತ್ವದ ಬಿಜೆಪಿ ಸರ್ಕಾರದ ನೋಟು ರದ್ಧತಿ, ಅವೈಜ್ಞಾನಿಕ ಜಿಎಸ್‌ಟಿ ಜಾರಿ ಮುಂತಾದ ದಿವಾಳಿಕೋರ ಆರ್ಥಿಕ ನೀತಿಗಳು ಮೇಲಿನ ಆಂತರಿಕ ಉತ್ಪನ್ನ ದರದ ನಿರಂತರ ಕುಸಿತಕ್ಕೆ ಕಾರಣವಾಗಿದೆ. ಅಂತೆಯೇ ಕೋವಿಡ್ ಸಾಂಕ್ರಾಮಿಕ ಮತ್ತದರ ನಿರ್ವಹಣೆಯಲ್ಲಿ ಕೇಂದ್ರ ರಾಜ್ಯ ಬಿಜೆಪಿ ಸರ್ಕಾರಗಳ ದುರಾಡಳಿತ, ಲಾಕ್ಡೌನ್ ಸಂತಸ್ತರಿಗೆ ಪರಿಹಾರ ನೀಡುವಲ್ಲಿ ತೋರಿದ ನಿರ್ಲಕ್ಷ್ಯ, ನೇರ ನಗದು ವರ್ಗಾವಣೆ, ತಲಾ 10 ಕೆಜಿ ಉಚಿತ ಆಹಾರ ಧಾನ್ಯ ವಿತರಣೆ, ನಗರ ಪ್ರದೇಶಗಳಿಗೂ ಉದ್ಯೋಗ ಖಾತ್ರಿ ವಿಸ್ತರಣೆ, 200 ದಿನಗಳ ಉದ್ಯೋಗ ಖಾತ್ರಿ ಕೆಲಸದ ದಿನಗಳ ಹೆಚ್ಚಳದೊಂದಿಗೆ ಕೂಲಿ ಹೆಚ್ಚಳದ ಪರ್ಯಾಯ ಕ್ರಮವಹಿಸಲು ಬಿಜೆಪಿ ಸರ್ಕಾರದ ಕ್ರಿಮಿನಲ್ ನಿರಾಕರಣೆಯು ಇಂತಹ ಆಂತರಿಕ ಉತ್ಪನ್ನ ಬೆಳವಣಿಗೆ ದರ ಕುಸಿತಕ್ಕೆ ನೇರ ಕಾರಣವಾಗಿದೆ. ಋಣಾತ್ಮಕ ಬೆಳವಣಿಗೆ ದರವು ಕೇವಲ ಮುನ್ಸೂಚನ ಅಂದಾಜಾಗಿದ್ದು, ವಾಸ್ತವು ಮತ್ತಷ್ಟು ತೀವ್ರವಾಗಿದೆ, ಮಾತ್ರವಲ್ಲದೆ ಕೈಗಾರಿಕೆ, ವ್ಯಾಪಾರ, ವಾಣಿಜ್ಯ, ಕೃಷಿ ಎಲ್ಲವು ತೀವ್ರ ಹೊಡೆತಕ್ಕೆ ಸಿಲುಕಿವೆ. ಅದರ ನೇರ ಪರಿಣಾಮವು ರಾಜ್ಯದ ಆರ್ಥಿಕ ಪರಿಸ್ಥಿತಿಯ ಮೇಲುಂಟಾಗಿದೆ. ಅದರ ನಿಖರ ಮಾಹಿತಿ ಅಂಕಿ ಅಂಶಗಳಲ್ಲಿ ಇನ್ನು ಮುಂದಿನ ವರ್ಷಗಳಲ್ಲಿ ತೆರೆದುಕೊಳ್ಳಬೇಕಿದೆ.



ಈ ಕಾಲಾವಧಿಯಲ್ಲಿ ಒಂದೆಡೆ ಅತಿವೃಷ್ಟಿ, ಮತ್ತೊಂದೆಡೆ ಕೋವಿಡ್–19, ಲಾಕ್ಡೌನ್ ಮಗದೊಂದೆಡೆ ಬಿಜೆಪಿ ಸರ್ಕಾರಗಳ ದಿವಾಳಿಕೋರ ನವಉದಾರವಾದಿ ಆರ್ಥಿಕ ನೀತಿಗಳು ರಾಜ್ಯದ ಆರ್ಥಿಕತೆಯನ್ನು ಋಣಾತ್ಮಕ ಬೆಳವಣಿಗೆಗೆ ದೂಡಿವೆ.

ರಾಜ್ಯದ ಸ್ಥಿರ ಬೆಲೆಗಳಲ್ಲಿ ಒಟ್ಟು ಆಂತರಿಕ ಉತ್ಪನ್ನದ ಕೃಷಿ ಮತ್ತು ಅವಲಂಬಿತ ವಲಯದ ಬೆಳವಣಿಗೆ ದರ 2019–20ರಲ್ಲಿ 12.3 ಶೇಕಡದಿಂದ 2020–21 ರಲ್ಲಿ 6.4 ಶೇಕಡಕ್ಕೆ ಇಳಿಯಲಿದೆ, ಕೈಗಾರಿಕಾ ವಲಯದ ದರವು 0.1 ಶೇಕಡದಿಂದ (–)5.1 ಶೇಕಡಕ್ಕೆ ಕುಸಿಯಲಿದೆ. ಸೇವಾ ವಲಯದ ಬೆಳವಣಿಗೆ ದರವು 6.7 ರಿಂದ (–) 3.1 ಶೇಕಡಕ್ಕೆ ಕುಸಿಯಲಿದೆ. ಪರಿಣಾಮವಾಗಿ ರಾಜ್ಯ ಆಂತರಿಕ ಉತ್ಪನ್ನ ದರವು 5 ಶೇಕಡದಿಂದ (–)2.6 ಶೇಕಡಕ್ಕೆ ಕುಸಿಯಲಿದೆ ಎಂದು ಅಂದಾಜಿಸಲಾಗಿದೆ.

ಪ್ರಸಕ್ತ ಬೆಲೆಗಳಲ್ಲಿ ರಾಜ್ಯದ ಆಂತರಿಕ ಉತ್ಪನ್ನಕ್ಕೆ 2019–20 ರಲ್ಲಿ 12.79 ಶೇಕಡ ಕೊಡುಗೆ ನೀಡಿರುವ ಕೃಷಿ ವಲಯವು 2020–21 ರಲ್ಲಿ 13.68, ಕೈಗಾರಿಕಾ ವಲಯವು 21.06 ರಿಂದ 19.79 ಹಾಗೂ ಸೇವಾ ವಲಯವು 66.16 ಶೇಕಡದಿಂದ 66.53 ಶೇಕಡ ಕೊಡುಗೆ ನೀಡಲಿದೆ ಎಂದು ಅಂದಾಜಿಸಲಾಗಿದೆ.(ಕೋಷ್ಟಕ–2)

ರಾಜ್ಯಗಳ ಆದಾಯದ ಸಾಲಿನಲ್ಲಿ ರಾಜ್ಯವು ತಮಿಳುನಾಡು ಮತ್ತು ಉತ್ತರಪ್ರದೇಶ ರಾಜ್ಯಗಳ ನಂತರ ಮೂರನೇ ಸ್ಥಾನದಲ್ಲಿದ್ದರೆ, ತಲಾ ಆದಾಯದ ಲೆಕ್ಕದಲ್ಲಿ ಗೋವಾ, ಸಿಕ್ಕಿಂ, ದೆಹಲಿ, ಹರಿಯಾಣ, ತೆಲಂಗಾಣದ ನಂತರ ಆರನೇ ಸ್ಥಾನದಲ್ಲಿದೆ. (ಕೋಷ್ಟಕ–3)

ಜಿಲ್ಲಾ ಆದಾಯ ಮತ್ತು ತಲಾ ಆದಾಯದ ಆಧಾರದಲ್ಲಿ ರೂ.4,96,208 ತಲಾ ಆದಾಯದೊಂದಿಗೆ ಬೆಂಗಳೂರು ನಗರ ಮೊದಲ ಸ್ಥಾನದಲ್ಲಿದ್ದರೆ, ರೂ.3,51,271 ದೊಂದಿಗೆ ದಕ್ಷಿಣ ಕನ್ನಡ, ರೂ.2,84,521 ದೊಂದಿಗೆ ಉಡುಪಿ ಮತ್ತು ರೂ.2,05,368 ದೊಂದಿಗೆ ಚಿಕ್ಕಮಗಳೂರು ನಂತರದ ಸ್ಥಾನಗಳಲ್ಲಿವೆ. ಕೊನೆಯ ಸ್ಥಾನದಲ್ಲಿ ರೂ.97,353 ದೊಂದಿಗೆ ಯಾದಗಿರಿ ಜಿಲ್ಲೆಯಿದೆ. ತಲಾ ಆದಾಯದಲ್ಲಿ ಬೆಂಗಳೂರು ವಿಭಾಗ ಮೊದಲ ಸ್ಥಾನದಲ್ಲಿದ್ದರೆ, ಮೈಸೂರು ಮತ್ತು ಬೆಳಗಾವಿ ವಿಭಾಗಗಳು ನಂತರದ 2ನೇ ಮತ್ತು 3ನೇ ಸ್ಥಾನದಲ್ಲಿವೆ. ಕಲ್ಬುರಗಿ ವಿಭಾಗವು ಕೊನೆಯ ನಾಲ್ಕನೇ ಸ್ಥಾನದಲ್ಲಿದೆ.

2019–20ರಲ್ಲಿ ಪರಿಷ್ಕೃತ ಅಂದಾಜಿನಂತೆ 3,25,969 ಕೋಟಿ ರೂಗಳಷ್ಟಿದ್ದ ಸಾಲ, 2020–21 ರಲ್ಲಿ ಆಯವ್ಯಯ ಅಂದಾಜಿನಂತೆ 3,68,692 ಕೋಟಿ ರೂಗಳಿಗೆ ಹೆಚ್ಚಾಗಲಿದೆ. 2015–16 ರಲ್ಲಿ 1,83,320 ಕೋಟಿ ರೂಗಳಿದ್ದ ರಾಜ್ಯದ ಸಾಲವು 2016–17 ರಲ್ಲಿ ರೂ.2,21,320 ಕೋಟಿಗೆ ಮತ್ತು 2017–18 ರಲ್ಲಿ ರೂ.2,46,232 ಕೋಟಿಗೆ ಹಾಗೂ 2018–19 ರಲ್ಲಿ ರೂ.2,85,238 ಕೋಟಿ ರೂಗಳಿಗೆ ಹೆಚ್ಚಳವಾಗಿದೆ. ರಾಜ್ಯ ಬಿಜೆಪಿ ಸರ್ಕಾರವು 2019–20 ರಲ್ಲಿ 48,490.01 ಕೋಟಿ ರೂ ಮತ್ತು 2020–21 ರಲ್ಲಿ 52,917.50 ಕೋಟಿ ರೂಗಳ ಸಾಲ ಮಾಡಿದೆ.

ಕೇಂದ್ರ ತೆರಿಗೆಗಳಲ್ಲಿನ ರಾಜ್ಯದ ಪಾಲು 2,328 ಕೋಟಿ ರೂಗಳಷ್ಟು ಅಂದರೆ 7.53 ಶೇಕಡ ಇಳಿಕೆಯಾಗುವ ನಿರೀಕ್ಷೆಯಿದೆ. ಸರಕು ಮತ್ತು ಸೇವಾ ತೆರಿಗೆ ಹೊರತುಪಡಿಸಿ 2019–20 ರಲ್ಲಿ 19,840 ಕೋಟಿ ರೂಗಳಷ್ಟಿರುವ ಕೇಂದ್ರದ ಅನುದಾನವು 2020–21 ರಲ್ಲಿ 15,454.46 ಕೋಟಿ ರೂಗಳಿಗೆ ಇಳಿಕೆಯಾಗಿದೆ. ಅಂದರೆ 4,385.54 ಕೋಟಿ ರೂಗಳ ಅನುದಾನವನ್ನು ಕೇಂದ್ರ ಬಿಜೆಪಿ ಸರ್ಕಾರವು ಕಡಿಮೆ ಮಾಡಿದೆ. ಒಟ್ಟಾರೆ ಕೇಂದ್ರೀಯ ಅನುದಾನವು 2019–20 ರಲ್ಲಿ ರೂ.37,088.83 ಕೋಟಿ ಇದ್ದದ್ದು 2020–21 ರಲ್ಲಿ ರೂ.31,570.46 ಕೋಟಿಗಳಿಗೆ (ಶೇಕಡ 14.87 ರಷ್ಟು) ಇಳಿಕೆಯಾಗಿದೆ. ಅಂತೆಯೇ 2019–20 ಕ್ಕೆ ಹೋಲಿಸಿದಾಗ 2020–21 ರಲ್ಲಿ ರಾಜಸ್ವ ಜಮೆಯಲ್ಲಿ ಕೇಂದ್ರಿಯ ಅನುದಾನವು 20.92 ಶೇಕಡದಿಂದ 17.55ಕ್ಕೆ ಇಳಿಕೆಯಾಗಿದೆ. ಕೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರವು ರಾಜ್ಯಕ್ಕೆ ಅನುದಾನವನ್ನು ನಿರಂತರವಾಗಿ ಕಡಿಮೆ ಮಾಡುತ್ತಿದೆ.

ಕೋಷ್ಟಕ:1 ರಾಜ್ಯ ಮತ್ತು ರಾಷ್ಟ್ರದ ಒಟ್ಟಾರೆ ಆಂತರಿಕ ಉತ್ಪನ್ನ (2011–12 ಸ್ಥಿರ ಬೆಲೆಗಳ ಆಧಾರದಲ್ಲಿ)

ವರ್ಷ	GSDP ಕೋಟಿ ರೂಗಳಲ್ಲಿ	ಬೆಳವಣಿಗೆ ದರ ಶೇಕಡ	GDP ಕೋಟಿ ರೂಗಳಲ್ಲಿ	ಬೆಳವಣಿಗೆ ದರ ಶೇಕಡ
2016–17	9,41,774	13.3	1,23,08,193	8.3
2017–18	10,22,862	8.6	1,31,44,583	6.8
2018–19	10,89,271	6.5	1,40,03,316	6.5
2019–20	11,43,781	5.0	1,45,69,266	4.0
2020–21	11,13,818	(–)2.6	1,34,39,662	(–)7.7

ಆಧಾರ: ಕರ್ನಾಟಕ ಆರ್ಥಿಕ ಸಮೀಕ್ಷೆ 2020–21

ಕೋಷ್ಟಕ:2 ಒಟ್ಟಾರೆ ರಾಜ್ಯ ಉತ್ಪನ್ನಕ್ಕೆ ವಲಯವಾರು ಕೊಡುಗೆ ಮತ್ತು ಬೆಳವಣಿಗೆ ದರಕ್ಕೆ ಕೊಡುಗೆ

ವರ್ಷ	ಕೃಷಿ	ಕೈಗಾರಿಕೆ	ಸೇವಾ	ಒಟ್ಟು
2019–20	12.79(12.3)	21.06(0.1)	66.16(6.7)	100(5.0)
2020–21	13.68(6.4)	19.79(–5.1)	66.53(–3.1)	100(–2.6)

ಕೋಷ್ಟಕ–3 : ತಲಾ ವಾರ್ಷಿಕ ಆದಾಯ: ರೂಗಳಲ್ಲಿ (ಚಾಲ್ತಿ ಬೆಲೆಗಳಲ್ಲಿ)

ವರ್ಷ	2016–17	2017–18	2018–19	2019–20	2020–21
ಕರ್ನಾಟಕ	169,898	186,405	205,697	223,175	226,796
ಭಾರತ	104,880	115,224	125,883	134,186	126,968

ಕರ್ನಾಟಕದ ಕೈಗಾರಿಕಾ ಪರಿಸ್ಥಿತಿ 2018-2021



ಕೋಷ್ಟಕ : ಕರ್ನಾಟಕದಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆಯ ಒಳಹರಿವು (ಕೋಟಿ ರೂಗಳಲ್ಲಿ)*					
ವರ್ಷ	2016–17	2017–18	2018–19	2019–20	2020–21
ಕರ್ನಾಟಕ	14924	60025	12411	30023	25620
ಭಾರತ	304346	313999	310562	349839	210028

* ಪ್ರತಿ ಡಾಲರ್‌ಗೆ 70 ರೂ ಲೆಕ್ಕ ಹಾಕಲಾಗಿದೆ

ಭಾರತಕ್ಕೆ ಬರುತ್ತಿರುವ ವಿದೇಶಿ ನೇರ ಬಂಡವಾಳ ಹೂಡಿಕೆಯಲ್ಲಿ ರಾಜ್ಯದ ಪಾಲು ಗಣನೀಯವಾಗಿದೆ. 2000 ರಿಂದ 2020 ರವರೆಗೆ (ನವೆಂಬರ್ 2020) ಬಂದಿರುವ 3841 ಕೋಟಿ ಡಾಲರ್ (ರೂ.2,68,870 ಕೋಟಿ) ಗಳಲ್ಲಿ ರಾಜ್ಯಕ್ಕೆ 8 ಶೇಕಡ ವಿದೇಶಿ ನೇರ ಬಂಡವಾಳ ಹೂಡಿಕೆ ಹರಿದು ಬಂದಿದೆ.(ಕೋಷ್ಟಕ ನೋಡಿ)

ರಾಜ್ಯದ ಆರ್ಥಿಕ ಬೆಳವಣಿಗೆಯಲ್ಲಿ ಮಾಹಿತಿ ತಂತ್ರಜ್ಞಾನ (ಐಟಿ) ವಲಯವು ಪ್ರಾಥಮಿಕ ಪ್ರೇರಕಗಳಲ್ಲಿ ಒಂದಾಗಿದೆ. ಬೆಂಗಳೂರಿನಲ್ಲಿ ಸಾಂದ್ರತೆಯೊಂದಿದ್ದ ಈ ವಲಯವು ಇತ್ತೀಚೆಗೆ ರಾಜ್ಯದ ಇತರೆ ಭಾಗಗಳಿಗೆ ವಿಸ್ತರಿಸಿದೆ. 5500 ಕ್ಕೂ ಹೆಚ್ಚು ಐಟಿ/ಐಟಿಇಎಸ್ ಕಂಪನಿಗಳು ರಾಜ್ಯದಲ್ಲಿದ್ದು ಸುಮಾರು 750 ಬಹುರಾಷ್ಟ್ರೀಯ ಕಂಪನಿಗಳಿದ್ದು 4.06 ಲಕ್ಷ ಕೋಟಿ ರೂಗಳಿಗೂ ಹೆಚ್ಚು ರಫ್ತಿಗೆ ಕೊಡುಗೆ ನೀಡಿವೆ. 12 ಲಕ್ಷಕ್ಕೂ ಹೆಚ್ಚು ವೃತ್ತಿಪರರಿಗೆ ನೇರ ಉದ್ಯೋಗದೊಂದಿಗೆ 31 ಲಕ್ಷ ಪರೋಕ್ಷ ಉದ್ಯೋಗವನ್ನು ರಾಜ್ಯದಲ್ಲಿ ಸೃಜಿಸಿವೆ. ರಾಜ್ಯದ ಆಂತರಿಕ ಉತ್ಪನ್ನಕ್ಕೆ ಈ ಕ್ಷೇತ್ರವು 22ಕ್ಕೂ ಹೆಚ್ಚು ಶೇಕಡ ಕೊಡುಗೆ ನೀಡುತ್ತಿದೆ. ರಾಷ್ಟ್ರದ 10.85 ಲಕ್ಷ ಕೋಟಿ ರೂಗಳ ಮಾಹಿತಿ ತಂತ್ರಜ್ಞಾನ ರಫ್ತಿನಲ್ಲಿ ರಾಜ್ಯವು ಸುಮಾರು 40 ಶೇಕಡ ಪಾಲನ್ನು ಹೊಂದಿದೆ.

ರಾಜ್ಯವು ಬಯೋಟೆಕ್ ನವೋದ್ಯಮಗಳನ್ನು ಒಳಗೊಂಡಂತೆ 750 ಬೃಹತ್, ಮಧ್ಯಮ ಮತ್ತು ಸಣ್ಣ ಕಂಪನಗಳನ್ನು ಹೊಂದಿದೆ. 2019–20ನೇ ಸಾಲಿನಲ್ಲಿ ಕರ್ನಾಟಕದ ಜೈವಿಕ ತಂತ್ರಜ್ಞಾನ ಕ್ಷೇತ್ರದ ರಫ್ತುಗಳ ಆದಾಯವು 20,283 ಕೋಟಿ ರೂಗಳಷ್ಟಾಗಿದೆ. ಕರ್ನಾಟಕ ಜೈವಿಕ ತಂತ್ರಜ್ಞಾನ ಕಾರ್ಯನೀತಿ (2017–22) ಯಲ್ಲಿ 2025 ರ ಒಳಗೆ ರಾಷ್ಟ್ರೀಯ ಜೈವಿಕ ಆರ್ಥಿಕತೆ (ಬೈಯೋ ಎಕಾನಮಿ) ತಲುಪಲು ಉದ್ದೇಶಿಸಿರುವ 7 ಲಕ್ಷ ಕೋಟಿ ರೂಗಳಲ್ಲಿ 40 ರಿಂದ 60 ರಷ್ಟು ಮಾರುಕಟ್ಟೆ ಪಾಲನ್ನು ಹೊಂದುವ ಗುರಿ ಹೊಂದಲಾಗಿದೆ. 2019ರ ಅಂತ್ಯದ ವೇಳೆಗೆ ರಾಜ್ಯದ ಬಯೋ ಎಕಾನಮಿ ಉತ್ಪಾದನೆಯು 1.58 ಲಕ್ಷ ಕೋಟಿ ರೂಗಳಷ್ಟಾಗಿದೆ. 2018 ರ ಹೋಲಿಕೆಯಲ್ಲಿ 17 ಶೇಕಡ ಬೆಳವಣಿಗೆ ಸಾಧಿಸಿದೆ.

ಕರ್ನಾಟಕ ಮಾಹಿತಿ ತಂತ್ರಜ್ಞಾನ ಕಾರ್ಯನೀತಿ 2020–25 ಅನ್ನು ರಾಜ್ಯ ಸರ್ಕಾರವು ರೂಪಿಸಿದೆ. ಮಾಹಿತಿ ತಂತ್ರಜ್ಞಾನ ಕಂಪನಗಳಿಗೆ ಕೈಗಾರಿಕಾ ಸಂಸ್ಥೆಗಳ ಸ್ಥಾಯಿ ಆದೇಶಗಳ ಕಾಯ್ದೆಯಿಂದ ವಿನಾಯಿತಿಯನ್ನು ಮುಂದುವರಿಸಿದೆ. ಕಾರ್ಯನೀತಿಯ ಭಾಗವಾಗಿ ಐಟಿ ಹಬ್/ಕ್ಲಸ್ಟರ್‌ಗಳ ಮೂಲಸೌಕರ್ಯಕ್ಕಾಗಿ ಸ್ಥಿರ ಹೂಡಿಕೆಯ 20 ಶೇಕಡರಷ್ಟರವರೆಗೆ ಗರಿಷ್ಠ 3 ಕೋಟಿ ರೂಗಳ ಹಣಕಾಸು ನೆರವನ್ನು, ಕಾರ್ಯಸ್ಥಳಗಳ ಮೂಲ ಸೌಕರ್ಯಕ್ಕೆ ಶೇ.33 ರವರೆಗೆ ಗರಿಷ್ಠ 2 ಕೋಟಿ ರೂಗಳ ಹಣಕಾಸು ಬೆಂಬಲ, 3 ರಿಂದ 6 ಲಕ್ಷದವರೆಗೆ ಗುತ್ತಿಗೆ / ಬಾಡಿಗೆ ಮರುಪಾವತಿ, ರಾಜ್ಯದ 2 ಮತ್ತು 3ನೇ ಹಂತದ ನಗರಗಳಲ್ಲಿ ಸಂಸ್ಥೆ ಸ್ಥಾಪನೆಗೆ ಭವಿಷ್ಯನಿಧಿ/ನೌಕರರ ರಾಜ್ಯ ವಿಮೆ ರಿಯಾಯತಿಯನ್ನು ಮುದ್ರಾಂಕ ಶುಲ್ಕ ವಿನಾಯಿತಿಯನ್ನು ಪ್ರಕಟಿಸಿದೆ. ಅಂತೆಯೇ ಕರ್ನಾಟಕದ ವಿದ್ಯುನ್ಮಾನ ವ್ಯವಸ್ಥೆಗಳ ವಿನ್ಯಾಸ ಮತ್ತು ತಯಾರಿಕಾ (ESDM) ನೀತಿ 2017–22 ಕರ್ನಾಟಕ ಆನಿಮೇಷನ್ ವಿಷುವಲ್ ಗೇಮಿಂಗ್ ಮತ್ತು ಕಾಮಿಕ್ಸ್ ನೀತಿ 2017–22 ಹಾಗೂ ಕರ್ನಾಟಕ ಸ್ಟಾರ್ಟ್ ಆಫ್ ನೀತಿ 2015–2020 ಗಳನ್ನು ಪರಿಷ್ಕರಿಸಿ ನೂತನ ನೀತಿಗಳ ರೂಪಿಸಲು ರಾಜ್ಯ ಸರ್ಕಾರ ಕ್ರಮವಹಿಸುತ್ತಿದೆ.



'ಬೆಂಗಳೂರು ತಂತ್ರಜ್ಞಾನ ಶೃಂಗಸಭೆ 2020'ನ್ನು ನಡೆಸಿ ಜೈವಿಕ ತಂತ್ರಜ್ಞಾನ ಮತ್ತು ಮಾಹಿತಿ ತಂತ್ರಜ್ಞಾನದಲ್ಲಿ ಬಂಡವಾಳ ಹೂಡಿಕೆಗೆ ಅನುಕೂಲಕರವಾದ ಕ್ರಮಗಳನ್ನು ಕೈಗೊಂಡಿದೆ. ಹೂಡಿಕೆದಾರರಿಗೆ ಸಹಾಯವಾಗಲು ಕೈಗಾರಿಕಾ ಸೌಲಭ್ಯ ಕಲ್ಪಿಸುವ ಕಾಯ್ದೆ(ಕರ್ನಾಟಕ ಇಂಡಸ್ಟ್ರೀಯಲ್ ಫೆಸಿಲಿಟೇಷನ್ ಆಕ್ಟ್)ಯನ್ನು ಜಾರಿಗೆ ತರುವಲ್ಲಿ ಕರ್ನಾಟಕ ಮೊಟ್ಟ ಮೊದಲ ರಾಜ್ಯವಾಗಿದೆ. ಭಾರತೀಯ ರಫ್ತು ಸಂಘಟನೆಯ ಒಕ್ಕೂಟದ ಸಹಯೋಗದೊಂದಿಗೆ ರಾಜ್ಯದಲ್ಲಿ 5 ರಫ್ತು ಅಭಿವೃದ್ಧಿ ಕೇಂದ್ರಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. ಎಲೆಕ್ಟ್ರಾನಿಕ್ಸ್ ಮತ್ತು ಕಂಪ್ಯೂಟರ್ ಸಾಫ್ಟ್‌ವೇರ್ ರಫ್ತು ಹಾಗೂ ಸಿದ್ದ ಉಡುಪುಗಳು, ಪೆಟ್ರೋಕೆಮಿಕಲ್ಸ್ ಮತ್ತು ಇಂಜಿನಯರಿಂಗ್ ಉತ್ಪನ್ನಗಳ ರಫ್ತಿನಲ್ಲಿ ಬೆಂಗಳೂರು ಕರ್ನಾಟಕದಲ್ಲಿ ಮುಂಚೂಣಿಯಲ್ಲಿದೆ.

ವಿಶೇಷ ಆರ್ಥಿಕ ವಲಯ ಕಾಯ್ದೆ 2005ರ ಅನ್ವಯ SEZ ಮಂಡಳಿಯು 75 ಖಇಚ ಗಳಿಗೆ ಅನುಮೋದನೆ ನೀಡಿದ್ದರು, 36 SEZ ಗಳು ಮಾತ್ರ ಕಾರ್ಯನಿರ್ವಹಿಸುತ್ತಿವೆ. ಇವುಗಳಲ್ಲಿ 495 ಘಟಕಗಳು ಕಾರ್ಯನಿರ್ವಹಿಸುತ್ತಿವೆ. 3.73 ಲಕ್ಷ ಜನರಿಗೆ ಉದ್ಯೋಗ ದೊರಕಿದೆ. 99 ಸಾವಿರದ 55 ಕೋಟಿ ರೂಗಳ ಬಂಡವಾಳ ಹೂಡಿಕೆಯಾಗಿದ್ದು 2020–21ರಲ್ಲಿ ಏಪ್ರಿಲ್‌ನಂದ ನವೆಂಬರ್‌ವರೆಗೆ 62,547.44 ಕೋಟಿ ರೂಗಳ ರಫ್ತು ಮಾಡಲಾಗಿದೆ.

ಕಾರ್ಮಿಕ ಇಲಾಖೆಯ 2018ರ ಸಾಲಿನ ವಾರ್ಷಿಕ ವರದಿಯಂತೆ 2018 ಡಿಸೆಂಬರ್‌ಗೆ ರಾಜ್ಯದಲ್ಲಿ ನೋಂದಣಿಯಾಗಿರುವ ಕಾರ್ಖಾನೆಗಳ ಸಂಖ್ಯೆ 17,390. ಇವುಗಳಲ್ಲಿ ಕೆಲಸ ಮಾಡುವ ಕಾರ್ಮಿಕರ ಸಂಖ್ಯೆ 18,25,865 ರಷ್ಟಿತ್ತು. 2020–21ರ ಸಾಲಿನ ಕರ್ನಾಟಕ ಆರ್ಥಿಕ ಸಮೀಕ್ಷೆಯ ವರದಿಯಲ್ಲಿ ಪ್ರಕಟಿಸಿರುವಂತೆ ರಾಜ್ಯದಲ್ಲಿ ನೋಂದಾಯಿತ ಕಾರ್ಖಾನೆಗಳ ಸಂಖ್ಯೆ 16,991. ಇವುಗಳಲ್ಲಿ ಕೆಲಸ ಮಾಡುವ ಕಾರ್ಮಿಕರ ಸಂಖ್ಯೆ 16,92,494 ಇದೆ ಎಂದು ಹೇಳುತ್ತಿದೆ. 2019ರಲ್ಲಿನ ಆರ್ಥಿಕ ಹಿಂಜರಿತ ಮತ್ತು ಕೋವಿಡ್‌ನಂದ ಹಲವಾರು ಕೈಗಾರಿಕೆಗಳು ಮುಚ್ಚಲ್ಪಟ್ಟಿರುವುದು ಮತ್ತು 1 ಲಕ್ಷಕ್ಕಿಂತ ಹೆಚ್ಚು ಕೈಗಾರಿಕಾ ಕಾರ್ಮಿಕರು ಕೆಲಸವನ್ನು ಕಳೆದು ಕೊಂಡಿರುವುದನ್ನು ಸೂಚಿಸುತ್ತದೆ. ಅದರೆ 5,096 ಬಾಯ್ಲರ್‌ಗಳ ಸಂಖ್ಯೆ ರಾಜ್ಯದಲ್ಲಿ 5,264 ಕ್ಕೆ ಏರಿಕೆಯಾಗಿದೆ. ಇದು ಕೋವಿಡ್ ನಂತರ ವೈದ್ಯಕೀಯ ಸಂಬಂಧಿತ ಕೈಗಾರಿಕೆಗಳ ಸಂಖ್ಯೆ ಹೆಚ್ಚಳಗೊಂಡಿರುವುದು ಗಮನಸಬಹುದಾಗಿದೆ. ಇದರ ಬಹುಪಾಲು ಬೆಂಗಳೂರಿನದಾಗಿದೆ.

ಕಾರ್ಮಿಕ ಇಲಾಖೆಯು ಕಳೆದ 2 ವರ್ಷದಿಂದ ವಾರ್ಷಿಕ ವರದಿಯನ್ನು ಪ್ರಕಟಿಸದೆ ವಿಳಂಬ ಮಾಡುತ್ತಿದೆ. ವರದಿ ಪ್ರಕಟಿಸಿದರೆ ಕೋವಿಡ್ ನಂತರ ಉದ್ಯೋಗ ಕಳೆದುಕೊಂಡ ಕಾರ್ಮಿಕರ ನಿಖರ ಸಂಖ್ಯೆ, ಮುಚ್ಚಲ್ಪಟ್ಟ ಕೈಗಾರಿಕೆಗಳು, ಕಾರ್ಮಿಕ ಕಾನೂನುಗಳ ಜಾರಿಯ ಪರಿ ಹೊರಬೀಳಲಿದೆ. ಕೋವಿಡ್ ನಂತರ ಕಾರ್ಮಿಕ ಕಾನೂನುಗಳ ಉಲ್ಲಂಘನೆ ನಿರಂತರವಾಗಿ ನಡೆದಿದೆ. 2020 ಕೋವಿಡ್ ಸಂದರ್ಭದಲ್ಲಿ ಕಾರ್ಮಿಕ ಇಲಾಖೆಯಲ್ಲಿ ಲೇ–ಆಫ್, ರಿಟ್ರೆಂಚ್‌ಮೆಂಟ್, ವಿಆರ್‌ಎಸ್, ಸೇವೆಯಿಂದ ವಜಾ, ಕ್ಲೋಸರ್ ಮುಂತಾದ ಕಾರಣಕ್ಕೆ ಸುಮಾರು 5500 ಅರ್ಜಿಗಳು 2020 ಏಪ್ರಿಲ್ ನಿಂದ ಆಗಸ್ಟ್ ಅವಧಿಯಲ್ಲಿ ಸಲ್ಲಿಕೆಯಾಗಿವೆ. ಈ ಅರ್ಜಿಗಳ ಇತ್ಯರ್ಥಕ್ಕೆ ಕಾರ್ಯಪಡೆ ರಚಿಸಿದರೂ ಪ್ರಯೋಜನವಾಗಲಿಲ್ಲ. ಕಾರ್ಮಿಕರು ಸರಿಯಾದ ಪರಿಹಾರವಿಲ್ಲದೆ ಉದ್ಯೋಗಗಳನ್ನು ಕಳೆದುಕೊಳ್ಳುವಂತಾಗಿದೆ. ಅನೇಕ ಮಾಲೀಕರು ವೇತನ ಒಪ್ಪಂದಗಳ ಉಲ್ಲಂಘನೆ, ಕಾರ್ಮಿಕರ ವೇತನ ಕಡಿತ ಮುಂತಾದ ಕ್ರಮಗಳನ್ನು ಕೈಗೊಂಡರೂ ಕಾರ್ಮಿಕ ಇಲಾಖೆ ಯಾವುದೇ ಕ್ರಮಗಳನ್ನು ವಹಿಸಿಲ್ಲ. ಕೇಂದ್ರ ಸರ್ಕಾರ ರೂಪಿಸಿರುವ ನೂತನ ಸಂಹಿತೆಗಳ ಜಾರಿಯ ಕೆಲಸದಲ್ಲಿ ಕಾರ್ಮಿಕ ಇಲಾಖೆ ಮೂಲಕ ರಾಜ್ಯ ಸರ್ಕಾರ ತೊಡಗಿದೆ. ವಿವಿಧ ಕಾರ್ಮಿಕ ಕಾಯ್ದೆಗಳಡಿ ರಾಜ್ಯದಲ್ಲಿ ನಡೆಸಲಾದ ಒಟ್ಟು ತಪಾಸಣೆಯ ಸಂಖ್ಯೆ 5,838 ಆಗಿದೆ. ಹೂಡಲಾದ ಮೊಕದ್ದಮೆಗಳ ಸಂಖ್ಯೆ ಕೇವಲ 885 ಆಗಿದೆ. ವಿಲೇವಾರಿ ಮಾಡಲಾದ 545 ಮೊಕದ್ದಮೆಗಳಿಂದ ರೂ.13,93,395 ದಂಡದ ಮೊತ್ತವಾಗಿ ಸಂಗ್ರಹವಾಗಿದೆ. ಅಂದರೆ ನಡೆಸಲಾದ ತಪಾಸಣೆ ಹೆಚ್ಚಿದ್ದರೂ ಹೂಡಲಾದ ಮೊಕದ್ದಮೆಗಳ ಸಂಖ್ಯೆ ಕಡಿಮೆ ಇರುವುದು ಕಾರ್ಮಿಕ ಇಲಾಖೆಯ ಕಾರ್ಯವೈಖರಿಗೆ ಹಿಡಿದ ಕನ್ನಡಿಯಾಗಿದೆ.

2019ರಲ್ಲಿ ಆರ್ಥಿಕ ಹಿಂಜರಿತದಿಂದ ಹಾಗೂ 2020–21ರಲ್ಲಿ ಕೋವಿಡ್ ಸಾಂಕ್ರಾಮಿಕ ರೋಗದ ಹಿನ್ನೆಲೆಯಲ್ಲಿ ಆಟೋ ಪಾರ್ಟ್ಸ್ ತಯಾರಿಕಾ ಕಾರ್ಖಾನೆಗಳು, ಮತ್ತಿತರೆ ಉದ್ದಿಮೆಗಳಲ್ಲಿನ ನಧಾನಗತಿ ಹಲವು ಕಾರ್ಖಾನೆಗಳಲ್ಲಿ ಲೇ–ಆಫ್, ರಿಟ್ರೆಂಚ್‌ಮೆಂಟ್, ಉತ್ಪಾದನ ರಹಿತ ದಿನಗಳಿಗೆ ನಾಂದಿ ಹಾಡಿವೆ. ಅದರ ವಿರುದ್ಧ ಕಾರ್ಮಿಕರಲ್ಲಿ ಅತೃಪ್ತಿ ಹೆಚ್ಚುತ್ತಿದೆ. ಅಂತರಾಷ್ಟ್ರೀಯ ಮಟ್ಟದಲ್ಲಿ ನಡೆದಿರುವ ಕಾರ್ಖಾನೆಗಳ ವಿಲೀನ, ಅವಿಲೀನ, ಕೊಳ್ಳುವಿಕೆಯಿಂದಾಗಿ ರಾಜ್ಯದ ಹಲವು ಕಾರ್ಖಾನೆಗಳ ಒಡೆತನ ಏಕಾಏಕಿ ಬದಲಾಗುತ್ತಿದೆ. ಆ ಮೂಲಕ ಮಾಲೀಕತ್ವದ ದೇಶದ ಮೂಲಗಳು ಬದಲಾಗುತ್ತಿವೆ. ಬಹಳ ಕಾರ್ಖಾನೆಗಳ ಮಾಲೀಕತ್ವದ ದೇಶದ ಮೂಲ ಚೀನಾ ಆಗುತ್ತಿದೆ. ಕೆಲವು ಬಹುರಾಷ್ಟ್ರೀಯ ಕಂಪನಿಗಳನ್ನು ದೇಶೀಯ ಪ್ರಾದೇಶಿಕ ಬಂಡವಾಳಗಾರರು ಕೊಳ್ಳುತ್ತಿರುವ ಬೆಳವಣಿಗೆಯು ನಡೆದಿದೆ. ಪರಿಸರ ರಕ್ಷಣೆ ಕೇಂದ್ರಿತವಾಗಿ ಭಾರತ್ ಸಂಚಾರ್ IV ರಿಂದ ಭಾರತ್ ಸಂಚಾರ್ VI ಗೆ ವಾಹನಗಳ ಮಾದರಿ ಬದಲಾವಣೆಯು ಹಲವು ಉದ್ಯೋಗಗಳನ್ನು ಇಲ್ಲದಾಗಿಸಿದೆ. 2030ರ ವೇಳೆಗೆ ಪೆಟ್ರೋಲ್–ಡೀಸೆಲ್ ವಾಹನ ಉತ್ಪಾದನೆ ಸರ್ಕಾರವು ವಿದ್ಯುತ್ ವಾಹನಗಳ ಉತ್ಪಾದನೆಗೆ ಅನುವುಗೊಳಿಸಿದ ಪರಿಣಾಮವಾಗಿ ಮತ್ತಷ್ಟು ಉದ್ಯೋಗ ಕಡಿತವಾಗಲಿದೆ.

ಕೋವಿಡ್–19 ಲಾಕ್‌ಡೌನ್ 2020ರ ಮರುತೆರವಿನ ಬಳಿಕ ಆಗಸ್ಟ್ ಅಂತ್ಯದ ವೇಳೆಗೆ ರಾಜ್ಯದ 6.6 ಲಕ್ಷ ಕೈಗಾರಿಕೆಗಳಲ್ಲಿ 95 ಶೇಕಡ ಕೈಗಾರಿಕೆಗಳು ಮತ್ತು 53 ಲಕ್ಷ ಕಾರ್ಮಿಕರ ಬಲದಲ್ಲಿ 49 ಲಕ್ಷ ಕಾರ್ಮಿಕರು ಅಂದರೆ 91 ಶೇಕಡ ಕಾರ್ಮಿಕರು ಕೆಲಸಕ್ಕೆ ಹಾಜರಾಗುವ ಮೂಲಕ ಕೈಗಾರಿಕಾ ಉತ್ಪಾದನೆ ಲಾಕ್‌ಡೌನ್ ನಂತರ ಕೂಡಲೇ ಚೇತರಿಕೆಗೊಳ್ಳಲು ಆರಂಭವಾಗಿದೆ ಎಂದು ರಾಜ್ಯ ಸರ್ಕಾರವು ಪ್ರಕಟಿಸಿದೆ. ಜವಳಿ, ಮನೋರಂಜನೆ, ಆತಿಥ್ಯ ಮತ್ತು ರಫ್ತು ಆಧಾರಿತ ಕೈಗಾರಿಕೆಗಳು ಪುನಶ್ಚೇತನಗೊಳ್ಳಬೇಕಿದೆ ಎಂದಿದೆ. ಅಂತಿಮ ಬಳಕೆದಾರರ ಕೈಯಲ್ಲಿ ಖರ್ಚು ಮಾಡಲು ಹಣವಿರದ ಹೊರತು ಪುನಶ್ಚೇತನ ನಿಧಾನಗತಿಯನ್ನು ಎದುರಿಸಲಿದೆ, ಕೈಗಾರಿಕಾ ವಲಯವು ಮೊದಲ ಲಾಕ್‌ಡೌನ್ ವೇಳೆ 23 ಸಾವಿರ ಕೋಟಿ ಒಟ್ಟಾರೆ ನಷ್ಟವನ್ನು ಅನುಭವಿಸಿದೆ. ಹಿಂದಿನ ವರ್ಷ

ಪುಟ 10 ನೋಡಿ



ಕರ್ನಾಟಕದ ಕೈಗಾರಿಕಾ ಪರಿಸ್ಥಿತಿ 2018-2021

ಪುಟ 9 ರಿಂದ

27 ಸಾವಿರ ಕೋಟಿ ವಹಿವಾಟು ಹೊಂದಿದ್ದ ವ್ಯಾಪಾರಿ ರಫ್ತು ವಲಯವು ಎರಡನೆ ಲಾಕ್ಡೌನ್ ವೇಳೆ ಕೇವಲ 9 ಸಾವಿರ ಕೋಟಿಗೆ ಸೀಮಿತವಾಗಿದೆ. 2019–20ರಲ್ಲಿ 1 ಲಕ್ಷ 24 ಸಾವಿರ ಕೋಟಿ ಇದ್ದ ಕೈಗಾರಿಕೋದ್ಯಮದ ವಹಿವಾಟು 2020–21ರಲ್ಲಿ 97 ಸಾವಿರ ಕೋಟಿಗೆ ಕುಸಿದಿದೆ ಎಂದು ಕೈಗಾರಿಕೋದ್ಯಮ ಮತ್ತು ವಾಣಿಜ್ಯ ಸಂಘಟನೆಗಳು ಪ್ರಕಟಿಸಿವೆ. 2021ರ ಎರಡನೆ ಅಲೆಯ ಕಾಲಾವಧಿಯ ಲಾಕ್ಡೌನ್ ಅಂತಹ ಪುನಶ್ಚೇತನಕ್ಕೆ ಮತ್ತೊಂದು ಹಿನ್ನಡೆ ಉಂಟು ಮಾಡಿದೆ. ರಾಷ್ಟ್ರದಲ್ಲಿಯೆ ಮೊದಲು ರಾಜ್ಯದಲ್ಲಿ 2 ಓಮೈಕ್ರಾನ್ ಕೋವಿಡ್ ಸೋಂಕಿತರ ಇತ್ತೀಚಿನ ಪತ್ತೆ ಹಾಗೂ ಏರುತ್ತಿರುವ ಕೋವಿಡ್ ಸೋಂಕಿತರ ಸಂಖ್ಯೆ ಮೂರನೇ ಅಲೆ ಉಂಟು ಮಾಡಬಹುದಾದ ಪರಿಣಾಮ ಮತ್ತದರ ನಿಯಂತ್ರಣ ಆಧರಿಸಿ ಪುನಶ್ಚೇತನವು ನಿರ್ಧಾರಿತವಾಗುವ ಸಾಧ್ಯತೆಯಿದೆ.

ಬಿಡದಿಯ ಟೊಯೋಟಾ ಕಿರ್ಲೋಸ್ಕರ್ ಮೋಟಾರ್ಸ್ ಕಾರ್ಮಿಕರ ಮುಷ್ಕರವು ದೀರ್ಘಕಾಲ ನಡೆಯಿತು. ಇದು ರಾಜಕೀಯ ಪರ–ವಿರೋಧಗಳಿಗೆ ವೇದಿಕೆಯಾಯಿತು. ಕಾರ್ಮಿಕರ ಪ್ರತಿಭಟನಾ ಸ್ಥಳದಲ್ಲಿನ ಟೆಂಟನ್ನು ಜಿಲ್ಲಾಡಳಿತವು ತೆರವುಗೊಳಿಸಿತು. ರಾಜ್ಯ ಬಿಜೆಪಿ ಸರ್ಕಾರವು ಟೊಯೋಟಾ ಮಾಲೀಕನ ಪರ ವಹಿಸಿತು. ಪಕ್ಷವು ಟೆಂಟ್ ತೆರವುಗೊಳಿಸಿರುವುದನ್ನು ಖಂಡಿಸಿ ಕಾರ್ಮಿಕರ ಬೇಡಿಕೆ ಈಡೇರಿಕೆಗೆ ಅಗತ್ಯ ಕ್ರಮವಹಿಸಲು ರಾಜ್ಯ ಸರ್ಕಾರವನ್ನು ಒತ್ತಾಯಿಸಿದೆ. ಕೋಲಾರ ವಿಸ್ಟ್ರನ್ ಕಾರ್ಖಾನೆಯ ಕಾರ್ಮಿಕರ ದಿಢೀರ್ ಹೋರಾಟ, ಹಿಂಸಾಚಾರವು ಕಾರ್ಮಿಕ ಕಾನೂನುಗಳ ಜಾರಿಗೆ ಕ್ರಮವಹಿಸದ ರಾಜ್ಯ ಬಿಜೆಪಿ ಸರ್ಕಾರದ ವಿರುದ್ಧದ ಕಾರ್ಮಿಕ ಅತೃಪ್ತಿಯನ್ನು ತೋರುತ್ತದೆ.

ರಾಜ್ಯದಲ್ಲಿನ ಸಾರ್ವಜನಿಕ ಉದ್ದಿಮೆಗಳಾದ ಬಿ.ಇ.ಎಲ್, ಬಿ.ಇ.ಎಂ.ಎಲ್, ಬಿ.ಹೆಚ್.ಇ.ಎಲ್, ಹೆಚ್.ಎ.ಎಲ್. ಮುಂತಾದ ಕಾರ್ಖಾನೆಗಳನ್ನು ಖಾಸಗೀಕರಿಸಲು ಕೇಂದ್ರ ಸರ್ಕಾರ ಮುಂದಾಗಿದೆ. ಕೇಂದ್ರ ಸರ್ಕಾರದ ಜಿ.ಎಸ್.ಟಿ. ಮತ್ತಿತರ ನೀತಿಗಳಿಂದ ಜವಳಿ ಮತ್ತು ಸಿದ್ದ ಉಡುಪು ತಯಾರಿಕೆ ಉದ್ದಿಮೆಗಳು ಅವಸಾನದ ಅಂಚಿನಲ್ಲಿವೆ. ಬೆಂಗಳೂರಿನ ಬಹುತೇಕ ಪವರ್‌ಲೂಂಗಳು ಮುಚ್ಚಲ್ಪಟ್ಟಿದ್ದು ನೇಕಾರ ಕಾರ್ಮಿಕರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಹಲವಾರು ಘನ, ಆಧುನಿಕ ಕೈಗಾರಿಕೆಗಳು ಬೆಂಗಳೂರಿನಂದ ಹೊರ ವಲಯಕ್ಕೆ, ಗಾರ್ಮೆಂಟ್ಸ್ ಕಾರ್ಖಾನೆಗಳು ಬೆಂಗಳೂರಿನಂದ ಹೊರ ಜಿಲ್ಲೆಗಳಿಗೆ ಸ್ಥಳಾಂತರಗೊಳ್ಳುತ್ತಿವೆ. ಹಾಗಾಗಿ ಸಾವಿರಾರು ಮಹಿಳಾ ಕಾರ್ಮಿಕರು ಉದ್ಯೋಗ ಕಳೆದುಕೊಳ್ಳುತ್ತಿದ್ದಾರೆ. ಬೃಹತ್ ಪ್ರಮಾಣದಲ್ಲಿರುವ ಕಟ್ಟಡ ಕಾಮಗಾರಿ ಮತ್ತಿತರೆ ಆರ್ಥಿಕ ಚಟುವಟಿಕೆಗಳು ಪ್ರಾರಂಭಗೊಂಡಿವೆ. ರಿಯಲ್ ಎಸ್ಟೇಟ್ ಉದ್ದಿಮೆ ಬೃಹದಾಕಾರವಾಗಿ ಬೆಳೆಯುತ್ತಿರುವುದರಿಂದ ಕಟ್ಟಡ ಮತ್ತು ಇತರೆ ನಿರ್ಮಾಣ ಕೆಲಸಗಳಲ್ಲಿ ಅಸಂಘಟಿತ ಕಾರ್ಮಿಕರು, ಅದರಲ್ಲೂ ವಲಸೆ ಕಾರ್ಮಿಕರು ದೊಡ್ಡ ಸಂಖ್ಯೆಯಲ್ಲಿ ತೊಡಗಿಸಿಕೊಂಡಿದ್ದಾರೆ.

ರಾಜ್ಯದಲ್ಲಿ ಎಲ್ಲಾ ಜಿಲ್ಲೆಗಳು ಸೇವಾವಲಯದ ಮಾಲ್‌ಗಳು, ಮಲ್ಟಿಪ್ಲೆಕ್ಸ್‌ಗಳು, ಫುಡ್ ಶಾಪ್‌ಗಳು ಅರಂಭವಾಗುವುದು ಹೆಚ್ಚುತ್ತಿದೆ. ಇಲ್ಲಿ ಉದ್ಯೋಗ ಮಾಡುವ ಅಸಂಘಟಿತ ಕಾರ್ಮಿಕರ ಸಂಖ್ಯೆ ಹೆಚ್ಚಳಗೊಳ್ಳುತ್ತಿದೆ.

ಏರೋಸ್ಪೇಸ್ ನೀತಿ:

ರಾಜ್ಯದ ಏರೋಸ್ಪೇಸ್ ನೀತಿ 2013–2023 ಯನ್ನು ತಿದ್ದುಪಡಿ ಮಾಡಿ ಬೆಂಗಳೂರು ಸುತ್ತಮುತ್ತಲಿನ ವಲಯ–4 ರಲ್ಲಿ ಸ್ಥಾಪಿಸಲಾಗುವ ಏರೋಸ್ಪೇಸ್ ಉದ್ದಿಮೆಗಳಿಗೆ ವಿಶೇಷ ರಿಯಾಯಿತಿಗಳನ್ನು ನೀಡಲಾಗುವುದೆಂದು ಹೇಳಲಾಗಿದೆ. ಬೆಂಗಳೂರನ್ನು ಕೇಂದ್ರೀಕರಿಸಿ ಎಲೆಕ್ಟ್ರಾನಿಕ್ ಸಿಸ್ಟಮ್ ಡಿಸೈನ್ ಅಂಡ್ ಮ್ಯಾನುಫ್ಯಾಕ್ಚರಿಂಗ್(ಇ.ಎಸ್.ಡಿ.ಎಂ.)ಕ್ಷೇತ್ರದಲ್ಲಿ ಹೊಸ ಕಂಪನಿಗಳು ಬೆಳೆಯುತ್ತಿವೆ. ಕರ್ನಾಟಕವು ಈಗಾಗಲೇ ಚಿಪ್ ಡಿಸೈನ್ ಕ್ಷೇತ್ರದಲ್ಲಿ ದೇಶದಲ್ಲಿ 2 ನೇ ಸ್ಥಾನದಲ್ಲಿದೆ. 5 ವರ್ಷಗಳಲ್ಲಿ 15 ಸಾವಿರ ಯುವಜನರಿಗೆ ಈ



ಕ್ಷೇತ್ರದಲ್ಲಿ ತರಬೇತಿಯನ್ನು ನೀಡಲಾಗುವುದು ಎಂದು ಸರ್ಕಾರ ಹೇಳಿದೆ. ಡಿಸೈನಿಂಗ್, ಪ್ರೋಟೋಟೈಪಿಂಗ್, ಟೆಸ್ಟಿಂಗ್, ಕ್ಯಾರೆಕ್ಟರೈಸೇಷನ್ ಮುಂತಾದವುಗಳಿಗಾಗಿ ವಿಶ್ವ ದರ್ಜೆಯ ಎರಡು ಸಂಶೋಧನಾ ಕೇಂದ್ರಗಳನ್ನು ತೆರೆಯಲಾಗುವುದು ಎಂದು ಆರ್ಥಿಕ ಸಮೀಕ್ಷೆಯಲ್ಲಿ ಸರ್ಕಾರ ಪ್ರಕಟಿಸಿದೆ. ಜೊತೆಗೆ ಬೆಂಗಳೂರಿನಲ್ಲಿ ಎಲೆಕ್ಟ್ರಾನಿಕ್ಸ್ ವಿನ್ಯಾಸ ವ್ಯವಸ್ಥೆ ಉತ್ಪಾದನೆಯ ಪ್ರಧಾನ ಕ್ಲಸ್ಟರ್‌ನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ.

ಕೃತಕ ಬುದ್ದಿಮತ್ತೆ (AI-Artificial Intelligence):

ಅನಾಲಿಟಿಕ್ಸ್, ಇಂಟರ್ನೆಟ್ ಆಫ್ ಥಿಂಗ್ಸ್, ರೋಬೋಟಿಕ್ಸ್, ಕಂಪ್ಯೂಟರ್ ವಿಷನ್, ಎಆರ್, ವಿಆರ್, ನ್ಯಾಚುರಲ್ ಲಾಂಗ್ವೇಜ್ ಪ್ರೊಸೆಸಿಂಗ್ ಮುಂತಾದ ನೂತನ ಕೃತಕ ಬುದ್ದಿಮತ್ತೆ ತಂತ್ರಜ್ಞಾನಗಳ ಮೂಲಕ ಆರೋಗ್ಯ, ಕೃಷಿ, ಶಿಕ್ಷಣ, ಸಾರ್ವಜನಿಕ ಸೇವೆಗಳು, ಸುರಕ್ಷತೆ, ಸ್ಮಾರ್ಟ್ ಸಿಟಿ, ಸಾರಿಗೆ, ಆಡಳಿತ, ಕಸ ನಿರ್ವಹಣೆ ಮುಂತಾದ ಕ್ಷೇತ್ರಗಳಲ್ಲಿ ಸುಧಾರಣೆ ತರುವ ಹೆಸರಿನಲ್ಲಿ ಕರ್ನಾಟಕ ಸರ್ಕಾರ ನಾಸ್ಕಾಂ ಜೊತೆಗೂಡಿ **"ಎ.ಐ. ಫಾರ್ ಗುಡ್" "ಒಳಿತಿಗಾಗಿ ಕೃತಕ ಬುದ್ಧಿಮತ್ತೆ"** ಎಂಬ ಯೋಜನೆಯನ್ನು ರೂಪಿಸಿದೆ. ವಿವಿಧ ಕ್ಷೇತ್ರಗಳಲ್ಲಿ ಮುಂಚೂಣಿಯಲ್ಲಿರುವ ಕಂಪನಿಗಳಿಗೆ ಎಲ್ಲಾ ಅವಕಾಶಗಳನ್ನು ಮತ್ತು ವಿವಿಧ ರಿಯಾಯಿತಿಗಳನ್ನು ಸರ್ಕಾರ ನೀಡುತ್ತಿದೆ. ಅತ್ಯಂತ ಉನ್ನತ ತಂತ್ರಜ್ಞಾನದ ಈ ಕ್ಷೇತ್ರಗಳಲ್ಲಿ ಕೆಲಸ ಮಾಡುವವರ ರಕ್ಷಣೆಗೆ ಬೇಕಾದ ಯಾವ ಕಾನೂನುಗಳೂ ಇಲ್ಲ ಎಂಬುದನ್ನು ಗಮನಿಸಬೇಕಾಗಿದೆ.

ಓಮಿಕ್ರೋನ್ ಬಗ್ಗೆ ಈಗ ನಮಗೆಷ್ಟು ತಿಳಿದಿದೆ?......

ಪುಟ 6

ರೋಗ ತಡೆಗಟ್ಟುವ ಸಾಮರ್ಥ್ಯ ಹೆಚ್ಚಿಸುವ ಬೂಸ್ಟರ್ ಲಸಿಕೆಯನ್ನು ನೀಡುವುದೇ ಸೂಕ್ತ. ಆದರೆ ಅದಕ್ಕೂ ಮೊದಲು ಇನ್ನೂ ಲಸಿಕೆ ಪಡೆಯದ ಜನರಿಗೆ ಅದನ್ನು ನೀಡುವುದು ಇಂದಿನ ಪರಿಸ್ಥಿತಿಯಲ್ಲಿ ಬಹಳ ಅಗತ್ಯ.

3ನೇ ಅಲೆ ತೀಕ್ಷ್ಣವಾಗಿ ಬರುವ ಸಂಭವ ಕಡಿಮೆಯಾಗಿದ್ದರೂ, ಅಂತಹ ಪರಿಸ್ಥಿತಿ ಬಂದರೆ ಅದನ್ನು ಎದುರಿಸಲು ಬೇಕಾದ ಎಲ್ಲಾ ಸೂಕ್ತ ವ್ಯವಸ್ಥೆ ಮಾಡುವುದು ಸರ್ಕಾರದ ಕರ್ತವ್ಯ. ರೋಗಿಗಳಿಗೆ ಆಸ್ಪತ್ರೆಯಲ್ಲಿ ಬೇಕಷ್ಟು ಹಾಸಿಗೆ, ಇತರ ವೈದ್ಯಕೀಯ ಸೌಲಭ್ಯ, ಅಗತ್ಯದ ಔಷಧ, ಆ್ಯಂಬುಲೆನ್ಸ್ ವ್ಯವಸ್ಥೆ, ಈ ಕಾರ್ಯಗಳಿಗೆ ಬೇಕಾದ ಸಿಬ್ಬಂದಿಗಳ ಪೂರೈಕೆಗೆ ಆದ್ಯ ಗಮನ ನೀಡುವುದು ಅಗತ್ಯ.

ಇಂದು ಇಡೀ ಪ್ರಪಂಚ ಕೋವಿಡ್ ದಾಳಿಗೊಳಗಾಗಿದೆ. ಹಾಗೂ ಈ ಜೆಟ್‌ಯುಗದಲ್ಲಿ 24 ಗಂಟೆಗಳೊಳಗೆ ಸೋಂಕಿತ ವ್ಯಕ್ತಿಗಳೊಂದಿಗೆ ಪ್ರಪಂಚದ ಮೂಲೆ ಮೂಲೆಗಳನ್ನು ತಲುಪುವ ಸೌಲಭ್ಯ ಹೊಂದಿದೆ. ಹಾಗಾಗಿ ಯಾವುದೇ ದೇಶದಲ್ಲಿ ಈ ಸೋಂಕು ಉಲ್ಬಣಗೊಂಡು ಅದರ ಸಂತತಿಯಿಂದ ಹುಟ್ಟುವ ರೂಪಾಂತರಿಯೂ ಇತರ ದೇಶಗಳಿಗೆ ಹರಡಲು ಹೆಚ್ಚಿನ ಸಮಯ ಬೇಕಾಗಿಲ್ಲ. ಹೀಗಾಗಿ ಪ್ರಪಂಚದ ಬಡವ ಬಲ್ಲಿದ ಎನ್ನುವ ಭೇಧವಿಲ್ಲದೆ ಎಲ್ಲಾ ದೇಶಗಳಲ್ಲೂ ಈ ಸೋಂಕು ಹತೋಟಿಗೆ ಬಂದಾಗ ಮಾತ್ರ ಇದರ ಪ್ರಾಬಲ್ಯ ಕುಂದಲು ಸಾಧ್ಯ. ಆದರೆ ಈ ಕಾರ್ಯದಲ್ಲಿ ತೊಡಗುವ ಬದಲು ಕೆಲವು ಶ್ರೀಮಂತ ದೇಶಗಳ ಬಹುರಾಷ್ಟ್ರೀಯ ಔಷಧ ಕಂಪೆನಿಗಳು ಈ ಸಮಯದ ಲಾಭ ಪಡೆಯುವ ಕಾರ್ಯದಲ್ಲಿ ತೊಡಗಿಕೊಂಡಿರುವುದು ಶೋಚನೀಯ. ಸರ್ಕಾರಗಳ ಧನ ಸಹಾಯದಿಂದ ಸಂಶೋಧಿಸಿದ ಲಸಿಕೆಯ ಜ್ಞಾನವನ್ನು ಅತೀ ಅಗ್ಗ ಬೆಲೆಗೆ ಕೊಂಡು ಅತೀ ಹೆಚ್ಚಿನ ಬೆಲೆಗೆ ಶ್ರೀಮಂತ ದೇಶಗಳಿಗೆ ಮಾರುತ್ತಿದ್ದಾರೆ. ಫೈಝರ್ ಔಷಧಿ ಕಂಪೆನಿ ತಯಾರಿಸುವ ಒಂದು ಡೋಸ್ ಲಸಿಕೆಗೆ ತಗಲುವ ವೆಚ್ಚ ಒಂದು ಡಾಲರ್, ಆದರೆ ಅದರ ಮಾರುಕಟ್ಟೆಯ ಬೆಲೆ 29 ಡಾಲರ್ ಎಂದು ಹೇಳಲಾಗುತ್ತಿದೆ. ಹಾಗೂ ಈ ಉತ್ಪಾದನೆ ಕೆಲವೇ ಕಂಪೆನಿಗಳ ಕೈಯಲ್ಲಿರುವುದರಿಂದ ಪ್ರಪಂಚದ ಎಲ್ಲಾ ದೇಶಗಳಿಗೆ ಅಗತ್ಯವಿರುವಷ್ಟು ಲಸಿಕಾ ಉತ್ಪಾದನೆಯೂ ಆಗುತ್ತಿಲ್ಲ. ಈ ಲಸಿಕೆ ತಯಾರಿಕೆಯ ಜ್ಞಾನವನ್ನು ಬಡರಾಷ್ಟ್ರಗಳಿಗೆ ಹಂಚಿದರೆ ಹೆಚ್ಚಿನ ರಾಷ್ಟ್ರಗಳು ತಮ್ಮ ಅವಶ್ಯಕತೆಗೆ ಬೇಕಾದ ಲಸಿಕೆ ಅಗ್ಗದ ಬೆಲೆಯಲ್ಲಿ ತಯಾರಿಸಬಹುದು. ಆದರೆ ಧನದಾಹ ಈ ಕಾರ್ಯಕ್ಕೆ ತಡೆಯೊಡ್ಡುತ್ತಿದೆ.

ಯಾವುದೇ ಸೋಂಕು ಕೆಲವು ವರ್ಷದಲ್ಲಿ ತಾನು ದಾಳಿ ಮಾಡುವ ಜನರ ಸಂಖ್ಯಾ ಪ್ರಮಾಣ ಹೆಚ್ಚಿದಂತೆ, ಅವರಲ್ಲಿ ರೋಗ ತಡೆಗಟ್ಟುವ ಸಾಮರ್ಥ್ಯ ಹೆಚ್ಚಿಸುತ್ತದೆ. ಮತ್ತು ಸೋಂಕಿಗೊಳಗಾಗುವವರ ಸಂಖ್ಯೆ ಕಡಿಮೆಯಾಗುತ್ತದೆ. ಈ ಸೋಂಕು ಬರಿಸಿದ ರೋಗಾಣುಗಳ ಸಂಖ್ಯೆ ಹಾಗೂ ಅವುಗಳ ಸಂತತಿಯ ಸಂಖ್ಯಾ ಪ್ರಮಾಣವು, ಅವುಗಳಿಂದಾಗುವ ರೂಪಾಂತರಿಗಳ ಸಂಖ್ಯೆಯೂ ಕಡಿಮೆಯಾಗುತ್ತದೆ. ಹೀಗೆ ರೋಗ ತನ್ನಿಂದ ತಾನೇ ಹತೋಟಿಗೆ ಬರುತ್ತದೆ. ಆದರೆ ಆಗಾಗ ಕೆಲವು ಪ್ರದೇಶದಲ್ಲಿ ಇವು ಚಿಕ್ಕ ಅಲೆಗಳನ್ನು ಉಂಟು ಮಾಡುವ ಸಾಮರ್ಥ್ಯ ಹೊಂದಿರುತ್ತವೆ.

ಈ ಜಗತ್ತು ಸೂಕ್ಷ್ಮಾಣುಗಳ ಜಗತ್ತು. ಹಾಗಾಗಿ ಇವುಗಳಲ್ಲಿ ಯಾವುದೇ ಸೂಕ್ಷ್ಮಾಣು ಕೋವ್–2 ಕಾಡಿದಂತೆ ಕಾಡುವುದಿಲ್ಲ ಎನ್ನುವ ಭರವಸೆ ಇಲ್ಲ.


ಹುಡುಗಿಯರ ವಿವಾಹ ವಯಸ್ಸು ಏರಿಕೆ–ವಿಫಲತೆ, ನಿರಾಕರಣೆಗಳಿಂದ ಗಮನ ತಿರುಗಿಸುವ ತಂತ್ರ ಸರಕಾರ ಈ ನಿರ್ಧಾರವನ್ನು ರದ್ದು ಮಾಡಬೇಕು–ಎಐಡಿಡಬ್ಲ್ಯುಎ ಆಗ್ರಹ

ಕೇಂದ್ರ ಸಂಪುಟ ಇತ್ತೀಚೆಗೆ ಹುಡುಗಿಯರ ವಿವಾಹ ವಯಸ್ಸನ್ನು 18ರಿಂದ 21 ಕ್ಕೆ ಏರಿಸಲು ನಿರ್ಧರಿಸಿರುವುದಕ್ಕೆ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ (ಎಐಡಿಡಬ್ಲ್ಯುಎ) ಬಲವಾದ ಅಸಮ್ಮತಿಯನ್ನು ವ್ಯಕ್ತಪಡಿಸಿದೆ. 'ಮಹಿಳಾ ಸಬಲೀಕರಣ'ಕ್ಕೆ ಎಂದು ಹೇಳಲಾಗುವ ಈ ನಡೆ ಜನಗಳ ಅತ್ಯಂತ ಮೂಲಭೂತ ಶೈಕ್ಷಣಿಕ, ಉದ್ಯೋಗ ಪೋಷಣಾಂಶಗಳ ಕುರಿತಾದ ಆವಶ್ಯಕತೆಗಳನ್ನು ಪೂರೈಸಲು ಸರಕಾರ ವಿಫಲವಾಗಿರುವಾಗ, ಯಾವುದೇ ಪರಿಣಾಮ ಬೀರಲಾರದ ಒಂದು ಕ್ರಮವಾಗಿ ಬಿಡುತ್ತದೆ ಎಂದು ಅದು ಹೇಳಿದೆ.

ನಿಜ ಹೇಳಬೇಕೆಂದರೆ, ಈ ನಡೆ ತದ್ವಿರುದ್ಧ ಪರಿಣಾಮ ಬೀರಲಿದೆ. ಹೆಣ್ಣುಮಕ್ಕಳ ವಿವಾಹ ವಯಸ್ಸನ್ನು ಏರಿಸುವುದರ ಪರಿಣಾಮವಾಗಿ ಆಯ್ಕೆಯ ಮದುವೆಗಳ ಮೇಲೆ ಗುರಿಯಿಡುವುದು ಇನ್ನಷ್ಟು ಹೆಚ್ಚಲಿದೆ. ಈಗಾಗಲೇ ತನ್ನ ಆಯ್ಕೆಯ ವ್ಯಕ್ತಿಯನ್ನು ಮದುವೆಯಾಗುವಲ್ಲಿ ಭಾರೀ ಡ್ಡಿ–ಆತಂಕಗಳನ್ನು ಎದುರಿಸ ಬೇಕಾಗಿರುವ ಪರಿಸ್ಥಿತಿಯಲ್ಲಿ ಇದು ಯುವತಿಯ ಲೈಂಗಿಕ ಆಸಕ್ತಿಯ ಮೇಲೆ ಹತೋಟಿ ಹಾಕುವ ಒಂದು ದಾರಿಯಾಗಿ ಬಿಡಬಹುದು. ಯುವ ವ್ಯಕ್ತಿಗಳ ನಡುವೆ ಸಹಮತದ ಲೈಂಗಿಕ ಚಟುವಟಿಕೆಯನ್ನು ಅಪರಾಧವಾಗಿಸುವುದು ಸಾಮಾನ್ಯವಾಗಿ ಅಪಹರಣ, ಮಾನಭಂಗ ಮತ್ತು ಬಾಲವಿವಾಹ ನಿಷೇಧ ಕಾಯ್ದೆ , 2006ರ ಅಡಿಯಲ್ಲಿನ ಅಪರಾಧಗಳು ಮತ್ತು ಇತರ ಅಪರಾಧಗಳ ಆರೋಪಗಳಿಗೆ ಎಡೆಮಾಡಿಕೊಡುತ್ತದೆ ಮತ್ತು ಇದರಿಂದಾಗಿ ಈ ಕೂಡಿಕೆಗಳು ಮುರಿದು ಹೋಗುವಂತಾಗುತ್ತದೆ, ಮತ್ತು ಸಂಬಂಧಪಟ್ಟ ಯುವಕ ಜೈಲಿಗೆ ಹೋಗಬೇಕಾಗುತ್ತದೆ ಎಂಬುದು ಅಧ್ಯಯನಗಳಿಂದ ಮತ್ತು ನಮ್ಮ ಅನುಭವದಿಂದಲೇ ಗೊತ್ತಾಗಿದೆ. ಆದ್ದರಿಂದ ಇಂತಹ ಒಂದು ಕ್ರಮ ಮಹಿಳೆಯರ ಖಾಸಗಿತ್ವ ಮತ್ತು ಸ್ವಾಯತ್ತತೆಯ ಮೂಲಭೂತ ಸಂವಿಧಾನಿಕ ಹಕ್ಕುಗಳನ್ನು ತಟ್ಟುವಂತಾಗುತ್ತದೆ ಎಂದು ಎಐಡಿಡಬ್ಲ್ಯುಎ ಅಭಿಪ್ರಾಯ ಪಟ್ಟಿದೆ.

ಲಿಂಗ ಸಮಾನತೆ ತರಲಿಕ್ಕಾಗಿ ಮಹಿಳೆಯರ ವಿವಾಹ ವಯಸ್ಸನ್ನು ಏರಿಸಬೇಕು ಎಂಬ ತರ್ಕವೂ ದೋಷಪೂರಿತವಾಗಿದೆ ಎಂದಿರುವ ಎಐಡಿಡಬ್ಲ್ಯುಎ ತಾನು ಈ ಮೊದಲು ಹುಡುಗರ ವಿವಾಹ ವಯಸ್ಸನ್ನೇ 18ಕ್ಕೆ ಇಳಿಸಬೇಕು ಎಂದು ಆಗ್ರಹಿಸಿರುವುದನ್ನು ನೆನಪಿಸಿದೆ. ಏಕೆಂದರೆ ಇದು ಪ್ರಾಪ್ತ ವಯಸ್ಸು ಎಂದೆನಿಸಿದೆ, ಎಲ್ಲ ವ್ಯಕ್ತಿಗಳಿಗೆ ಮತದಾನದ ಹಕ್ಕು ಮತ್ತು ಒಪ್ಪಂದಗಳಿಗೆ ಸಹಿಹಾಕುವ ಸಾಮರ್ಥ್ಯ ಪಡೆಯುವ ವಯಸ್ಸು ಎಂದು ಪರಿಗಣಿತವಾಗಿದೆ. 18ನೇ ಕಾನೂನು ಆಯೋಗ ಕೂಡ ಸಮಸ್ಕಂಧತೆ ತರಲು ಹುಡುಗರ ವಿವಾಹ ವಯಸ್ಸನ್ನು 18ಕ್ಕೆ ಇಳಿಸಬೇಕು ಎಂದು ಶಿಫಾರಸು ಮಾಡಿದೆ. ಇದು ಕೂಡ ಹುಡುಗನನ್ನು ವಿವಿಧ ಕ್ರಿಮಿನಲ್ ದಂಡಗಳಿಗೆ ಒಳಪಡಿಸುವುದಕ್ಕೆ ತಡೆ ಹಾಕುತ್ತದೆ.

ವಿವಾಹ ವಯಸ್ಸನ್ನು ಏರಿಸುವ ಈ ನಡೆ ಸ್ಪಷ್ಟವಾಗಿಯೂ ಜನಗಳ ಗಮನವನ್ನು ಬೇರೆಡೆಗೆ ತಿರುಗಿಸುವ ಸರಕಾರದ ತಂತ್ರ ಎಂದು ಎಐಡಿಡಬ್ಲ್ಯುಎ ಅಭಿಪ್ರಾಯ ಪಟ್ಟಿದೆ. ಐಸಿಡಿಎಸ್ ನಂತಹ ಪೋಷಣಾಂಶ ಕಾರ್ಯಕ್ರಮಗಳು, ಶಿಕ್ಷಣ ಮತ್ತು ಆರೋಗ್ಯಪಾಲನೆಗೆ ಸಾಕಷ್ಟು ಸಂಪನ್ಮೂಲಗಳನ್ನು ಕೊಡಲು ನಿರಾಕರಿಸುವ ಒಂದು ಸರಕಾರದ ತಂತ್ರ ಇದು ಎಂದು ಅದು ಹೇಳಿದೆ. ಮಹಿಳೆಯರ ಪೋಷಣಾಂಶ ಸ್ಥಿತಿಗತಿ ಹುಟ್ಟಿನಿಂದಲೇ ಕೆಳ ಮಟ್ಟದಲ್ಲಿರುತ್ತದೆ ಎಂದು ಗಮನಿಸಿರುವಾಗ, 21 ಕ್ಕೆ ವಿವಾಹವಾಗಿ ನಂತರ ಮಗುವನ್ನು ಪಡೆಯುವುದರಿಂದ ತಾಯಿ ಮತ್ತು ಮಗುವಿನ ಆರೋಗ್ಯವೇನೂ ಉತ್ತಮಗೊಳ್ಳದು, ಅಥವ ಮರಣದರ ಇಳಿಯದು ಎಂದಿರುವ ಎಐಡಿಡಬ್ಲ್ಯುಎ ಹುಡುಗಿಯರ ವಿವಾಹ ವಯಸ್ಸನ್ನು 21ಕ್ಕೆ ಏರಿಸುವ ಈ ನಡೆಯನ್ನು ರದ್ದು ಮಾಡಬೇಕು ಎಂದು ಆಗ್ರಹಿಸಿದೆ.







ಹರ್ಯಾಣ ಮುಖ್ಯಮಂತ್ರಿಯ ಬೆದರಿಕೆ ಮತ್ತು ವಿಭಜನೆಯ ಸಂಕುಚಿತ ರಾಜಕೀಯ

ಕಳೆದ ಕೆಲವು ವಾರಗಳಲ್ಲಿ ಭಾರತದ ರಾಜಕೀಯದಲ್ಲಿ ಎರಡು ಸಮಾನಾಂತರ ಪ್ರವೃತ್ತಿಗಳು ಕಂಡುಬಂದಿವೆ. ಮೊದಲನೆಯದು ಐಕ್ಯತೆಯ ರಾಜಕೀಯ– ಕಾರ್ಮಿಕರ ಬೆಂಬಲಿತ ರೈತರ ಐಕ್ಯ ಹೋರಾಟಗಳ ಐತಿಹಾಸಿಕ ವಿಜಯ ಇದಕ್ಕೆ ನಿದರ್ಶನ. ಎರಡನೆಯದು, ಮತ್ತೊಮ್ಮೆ ಸಂಕುಚಿತ ರಾಜಕೀಯ ಲಾಭಕ್ಕಾಗಿ ಧರ್ಮವನ್ನು ಬಳಸಿಕೊಳ್ಳುವ ಮತ್ತು ದುರುಪಯೋಗ ಪಡಿಸಿಕೊಳ್ಳುವ ಕೇಂದ್ರದ ಆಳ್ವಿಕೆಯ ಮುಖಂಡರು ಮತ್ತೆ ಆರಂಬಿಸಿರುವ ಆಕ್ರಮಣ. ಮುಸ್ಲಿಮರಿಗೆ ಹರ್ಯಾಣ ಮುಖ್ಯಮಂತ್ರಿ ಎಚ್ಚರಿಕೆ ಅಥವಾ ಮಾಂಸಾಹಾರದ ಮಾರಾಟಗಾರರ ವಿರುದ್ಧ ಗುಜರಾತ್ ರಾಜ್ಯದ ಕಂದಾಯ ಸಚಿವರ ಕ್ರಮಗಳಲ್ಲಿ ಇದು ಕಂಡುಬರುತ್ತದೆ. ವಿಭಜನೆಯ ಕೋಮು ಶಕ್ತಿಗಳು ನಡೆಸುವ ಅಲ್ಪಸಂಖ್ಯಾತ–ವಿರೋಧಿ ಅಣಿನೆರಿಕೆಗಳ ವಿರುದ್ಧ ಪ್ರಜ್ಞಾಪೂರ್ವಕ ಹೋರಾಟದ ರಾಜಕೀಯ ನೆಲೆಗಟ್ಟು ಖಂಡಿತವಾಗಿಯೂ ಅಗತ್ಯವಿದೆ.

ಬೃಂದಾ ಕಾರಟ್
ಅನು: ಶ್ರೃಂ.ಶ.ನಾ



2018 ರಿಂದ ಅಧಿಕೃತವಾಗಿ ಗೊತ್ತುಪಡಿಸಿದ ಸ್ಥಳಗಳಲ್ಲಿ ಮುಸ್ಲಿಮರು ಪ್ರಾರ್ಥನೆ ಮಾಡುವುದನ್ನು ಬಲವಂತವಾಗಿ ತಡೆಯುವುದು ಕೇವಲ ಅಂಚಿನಲ್ಲಿರುವ ಇಸ್ಲಾಮ್–ಭೀತಿಯ ಕಾಯಿಲೆಗ್ರಸ್ತವಾದ ದ್ವೇಷ–ಆಧಾರಿತ ಗುಂಪುಗಳ ಕೈವಾಡ ಎಂದು ಯಾರಾದರೂ ಭಾವಿಸಿದ್ದರೆ, ಅದು ನಿಜವಲ್ಲ ಎಂದು ಹರಿಯಾಣ ಮುಖ್ಯಮಂತ್ರಿ ಎಂ.ಎಲ್. ಖಟ್ಟರ್ ನೇರವಾಗಿಯೇ ತೋರಿಸಿದ್ದಾರೆ. ಡಿಸೆಂಬರ್ 11ರಂದು, ಒಂದು ಬೆದರಿಕೆ ಮತ್ತು ಆಕ್ಷೇಪಾರ್ಹ ಭಾಷೆಯಲ್ಲಿ, ಅವರ ಸರ್ಕಾರವು ತೆರೆದ ಸ್ಥಳಗಳಲ್ಲಿ ಪ್ರಾರ್ಥನೆಗಳನ್ನು "ಸಹಿಸಿಕೊಳ್ಳುವುದಿಲ್ಲ", ಮನೆಗಳಲ್ಲಿಯೇ ಪ್ರಾರ್ಥಿಸಬೇಕು ಎಂದು ಮುಸ್ಲಿಮರಿಗೆ ಎಚ್ಚರಿಸಿದರು.


ಜನರನ್ನು ದಾರಿತಪ್ಪಿಸಲೆಂದೇ ಮುಖ್ಯಮಂತ್ರಿಗಳು ಈ ಸಮಸ್ಯೆಯನ್ನು ಈ ರೀತಿ ಬಿಂಬಿಸಿದ್ದಾರೆ. ಆಸ್ತಿಕರು ಶುಕ್ರವಾರದಂದು ಪ್ರಾರ್ಥನಾ ಸಭೆಗಳಿಗೆ ಹಾಜರಾಗುವುದು ವಾಡಿಕೆಯಾಗಿದೆ, ಅಲ್ಲಿ ಸಾಮಾನ್ಯವಾಗಿ ಧರ್ಮೋಪದೇಶವನ್ನು ಸಹ ನೀಡಲಾಗುತ್ತದೆ. ಇತರ ದಿನಗಳಲ್ಲಿ, ಹೆಚ್ಚಿನವರು ಮನೆಯಲ್ಲಿಯೇ ಪ್ರಾರ್ಥಿಸುತ್ತಾರೆ. ದೇಶಾದ್ಯಂತ ಇರುವುದು ಇದೇ ಕ್ರಮ. ಮುಸ್ಲಿಮರು ಪ್ರತಿದಿನವೂ ದಿನಕ್ಕೆ ಐದು ಬಾರಿ ಎಂಬಂತೆ ಬೀದಿಗೆ ಬಂದು, ಬಯಲುಗಳಲ್ಲಿ ಪ್ರಾರ್ಥನೆ ಸಲ್ಲಿಸುತ್ತಾರೆ ಎನ್ನುವ ಅರ್ಥ ಬರುವ ರೀತಿಯಲ್ಲಿ ಹರ್ಯಾಣದ ಮುಖ್ಯಮಂತ್ರಿಗಳು ನಿರ್ದಿಷ್ಟವಾಗಿ ಮುಸ್ಲಿಮರನ್ನೇ ಮನೆಯಲ್ಲಿಯೇ ಪ್ರಾರ್ಥನೆ ಮಾಡಬೇಕೆಂದು ಏಕೆ ಆದೇಶಿಸಬೇಕು?

ಎರಡನೆಯದಾಗಿ, ಮುಖ್ಯಮಂತ್ರಿಗಳು ತಮ್ಮ ಭಾಷಣದಲ್ಲಿ ಉದ್ದೇಶಪೂರ್ವಕವಾಗಿ ವಾಸ್ತವಾಂಶಗಳನ್ನು ಹೇಳದೆ ತಪ್ಪಿಸಿಕೊಂಡರು. ಗುರುಗ್ರಾಮ್‌ನಲ್ಲಿ, ಜನಸಂಖ್ಯೆಯ ಶೇಕಡಾ 5 ಕ್ಕಿಂತ ಕಡಿಮೆ ಇರುವ ಮುಸ್ಲಿಮರು, ಹೆಚ್ಚೇನೂ ಮಸೀದಿಗಳಿಲ್ಲದ ಕಾರಣ ಶುಕ್ರವಾರದ ಪ್ರಾರ್ಥನೆಗಳಿಗೆ ಸೇರಲಾಗದ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಮಸೀದಿಗಳಿಗೆ ಭೂಮಿ ಖರೀದಿಸಲು ಸಮುದಾಯದ ಪ್ರತಿನಿಧಿಗಳು ನಿರಂತರವಾಗಿ ಪ್ರಯತ್ನಿಸುತ್ತಿದ್ದರೂ, ಅಧಿಕೃತ ಏಜೆನ್ಸಿಗಳು ಅಡ್ಡಿ ಮಾಡುತ್ತಿವೆ. ಆದರೆ ಇತರ ಪೂಜಾ ಸ್ಥಳಗಳಿಗೆ ಭೂಮಿಯನ್ನು ನೀಡಲಾಗಿದೆ. ಪ್ರಸ್ತುತ ಒತ್ತುವರಿಗೊಂಡಿರುವ ಅಥವಾ ಸರ್ಕಾರಿ ಏಜೆನ್ಸಿಗಳು ಅಧೀನಪಡಿಸಿಕೊಂಡಿರುವ ವಖ್ಫ್ ಭೂಮಿಯನ್ನು ಹಿಂದಿರುಗಿಸಿ ಎಂದೂ ಮನವಿಗಳನ್ನು ಮಾಡಲಾಗಿದೆ. ಅಲ್ಲಿ ಮಸೀದಿ ಗಳನ್ನು ಕಟ್ಟಬಹುದು ಅಥವಾ ಪ್ರಾರ್ಥನೆಗಾಗಿ ಗೋಡೆ ನಿರ್ಮಿಸಬಹುದು ಎಂದು ಸರ್ಕಾರಕ್ಕೆ ಹೇಳಲಾಗಿದೆ. ಸರ್ಕಾರ 2018ರಲ್ಲಿ ಭೂಮಿ ವಾಪಸ್ ಕೊಡಿಸುವುದಾಗಿ ಭರವಸೆಯನ್ನೂ ನೀಡಿತ್ತು, ಆದರೂ, ಆ ಬಳಿಕ ಏನೂ ಮಾಡಿಲ್ಲ.

ಮೂರನೆಯದಾಗಿ, 2018 ರಲ್ಲಿ ತೆರೆದ ಸ್ಥಳಗಳಲ್ಲಿ ಪ್ರಾರ್ಥನೆಗೆ ಸಂಬಂಧಿಸಿದಂತೆ ಒಂದು ಪರಸ್ಪರ ತಿಳುವಳಿಕೆಗೆ ಬರಲಾಗಿತ್ತು. ಆಡಳಿತವು ಏಕಾಏಕಿಯಾಗಿ ಇದನ್ನು ಕಡೆಗಣಿಸಿರುವುದಕ್ಕೆ ಮುಖ್ಯಮಂತ್ರಿಗಳ ಬಳಿ ಯಾವುದೇ ವಿವರಣೆಯೂ ಇಲ್ಲ. ಮೇ 2018 ರಲ್ಲಿ, ಸಾರ್ವಜನಿಕ ಸ್ಥಳಗಳಲ್ಲಿ ಪ್ರಾರ್ಥನೆಗಳಿಗೆ ಕೆಲವು ಸಂಸ್ಥೆಗಳು ಆಕ್ಷೇಪಣೆಗಳನ್ನು ಸಲ್ಲಿಸಿದವು. ಆಡಳಿತವು ಶುಕ್ರವಾರದ ಪ್ರಾರ್ಥನೆಗಾಗಿ 37 ಸ್ಥಳಗಳನ್ನು ಗೊತ್ತುಪಡಿಸಿತು. ಎರಡು 'ರಕಾತ್'ಗಳ ಪಠಣದ ಶುಕ್ರವಾರದ ಪ್ರಾರ್ಥನೆಗಳು ಐದು ನಿಮಿಷಗಳಿಗಿಂತ ಹೆಚ್ಚು ಕಾಲ ನಡೆಯುವುದಿಲ್ಲ. ಒಂದು ಉಪದೇಶ ಅಥವಾ 'ಖುತ್ಬಾ'ವನ್ನು ಪಠಿಸಿದರೆ, ಅದು ಸಾಮಾನ್ಯವಾಗಿ ಸುಮಾರು 15–20 ನಿಮಿಷಗಳವರೆಗೆ ಇರುತ್ತದೆ.

ಗುರುಗ್ರಾಮ್‌ನಲ್ಲಿ ಗೊತ್ತುಪಡಿಸಿದ ಹೆಚ್ಚಿನ ಸ್ಥಳಗಳು ವಸತಿ ಕಾಲೋನಿಗಳಲ್ಲಿ ಇಲ್ಲ, ಬದಲಾಗಿ ಮುಖ್ಯ ರಸ್ತೆಗಳು ಮತ್ತು ಕೈಗಾರಿಕಾ ಪ್ರದೇಶಗಳಿಗೆ ಹೊಂದಿಕೊಂಡಂತೆ ಇರುವ ಟ್ರಕ್‌ಗಳನ್ನು ನಿಲ್ಲಿಸಲು ಬಳಸುವ ಅಥವಾ ಖಾಲಿ ಇರುವ ಸ್ಥಳಗಳಾಗಿವೆ. ಹಾಗಾಗಿ ಸಾರ್ವಜನಿಕರಿಗೆ ಅನಾನುಕೂಲ ಅಥವಾ ಸಂಚಾರಕ್ಕೆ ಅಡ್ಡಿಯಾಗುವ ಸಮಸ್ಯೆ ಇಲ್ಲ. ಹಾಗಾದರೆ, ಒಪ್ಪಂದದಿಂದ ಹಿಂದೆ ಸರಿಯಲು ಕಾರಣವೇನು? ಆಡಳಿತವು ಈಗ ಗೊತ್ತುಪಡಿಸಿದ ಸ್ಥಳಗಳ ಸಂಖ್ಯೆಯನ್ನು ಹತ್ತಕ್ಕಿಂತಲೂ ಕೆಳಕ್ಕೆ ಇಳಿಸಿದೆ ಎಂದು ವರದಿಯಾಗಿದೆ. ಇದು ಅನ್ಯಾಯ, ಸರಿಯಲ್ಲದ ಮತ್ತು ಮೇಲಾಗಿ ಸಂಪೂರ್ಣವಾಗಿ ಪಕ್ಷಪಾತದ ನಡೆಯಾಗಿದೆ.

ಮುಖ್ಯಮಂತ್ರಿಗಳು ಪರಿಹಾರ ಕಂಡುಕೊಳ್ಳುವ ಬದಲು ಒತ್ತಡ ಮತ್ತು ಬೆದರಿಕೆ ಹಾಕುತ್ತಿದ್ದಾರೆ. ಇದಕ್ಕೆ ವಿರುದ್ಧವಾಗಿ, ಹಲವು ನಾಗರಿಕರು ಸಹಾನುಭೂತಿ ಮತ್ತು ಬೆಂಬಲವನ್ನು ನೀಡಿದ್ದಾರೆ.. ಶುಕ್ರವಾರದ ಪ್ರಾರ್ಥನೆಗೆ ಸೇರುವವರಲ್ಲಿ ಹಲವರು ಉಡುಪು ತಯಾರಿಕೆ ಮತ್ತು ಇತರ ಕೈಗಾರಿಕೆಗಳಲ್ಲಿ ಉದ್ಯೋಗದಲ್ಲಿರುವ ಕೈಗಾರಿಕಾ ಕಾರ್ಮಿಕರು ಅಥವಾ ಅಸಂಘಟಿತ ವಲಯದ ಕೆಲಸಗಾರರು.



ಮಾಂಸದಂಗಡಿ ಮತ್ತು ದ್ವೇಷದಂಗಡಿ–ವ್ಯಂಗ್ಯಚಿತ್ರ ಕೃಪೆ: ಮಂಜುಲ್

ಸಾಕಷ್ಟು ಸ್ಥಳಾವಕಾಶವಿರುವ ಕೆಲವು ಕಾರ್ಖಾನೆಗಳಲ್ಲಿ, ಕಾರ್ಖಾನೆಯ ಮಾಲೀಕರು, ಅವರಲ್ಲಿ ಹೆಚ್ಚಿನವರು ಹಿಂದೂಗಳು, ತಮ್ಮ ಕಾರ್ಮಿಕರಿಗೆ ಛಾವಣಿಯ ಮೇಲೆ ಪ್ರಾರ್ಥನೆ ಮಾಡಲು ಅನುಮತಿ ನೀಡುತ್ತಾರೆ. ಇದು ಸಕಾರಾತ್ಮಕ ಪರಿಣಾಮವನ್ನು ಬೀರುತ್ತದೆ. ಆದರೆ ಈಗ ಇಂತಹ ಕೋಮು ವಿಭಜನೆಗಳು ತಮ್ಮ ಕಾರ್ಖಾನೆಗಳಲ್ಲಿ ಕೆಲಸದ ಮೇಲೆ ಎಂತಹ ಪರಿಣಾಮ ಬೀರಬಹುದು ಎಂಬುದರ ಬಗ್ಗೆ ಅವರು ಸಹಜವಾಗಿ ಚಿಂತಿತರಾಗಿದ್ದಾರೆ. ಕಾರ್ಖಾನೆಗಳಲ್ಲಿನ ಸಹೋದ್ಯೋಗಿಗಳು, ಹಿಂದೂಗಳು ಒಳಗೊಂಡಂತೆ ವಿರೋಧಿಸಿದ ಒಂದೇ ಒಂದು ಘಟನೆ ನಡೆದಿಲ್ಲ. ಗುರುಗ್ರಾಮ್‌ನ ಅನೇಕ ನಿವಾಸಿಗಳು ಸಹ ಪ್ರಾರ್ಥನೆಗಾಗಿ ಸ್ಥಳಗಳನ್ನು ನೀಡಲು ಬೆಂಬಲವಾಗಿ ನಿಂತಿದ್ದಾರೆ.

ಕಳೆದ ಕೆಲವು ವಾರಗಳಲ್ಲಿ ಭಾರತದ ರಾಜಕೀಯದಲ್ಲಿ ಎರಡು ಸಮಾನಾಂತರ ಪ್ರವೃತ್ತಿಗಳು ಕಂಡುಬಂದಿವೆ. ಮೊದಲನೆಯದು ಐಕ್ಯತೆಯ ರಾಜಕೀಯ– ಕಾರ್ಮಿಕರ ಬೆಂಬಲಿತ ರೈತರ ಐಕ್ಯ ಹೋರಾಟಗಳ ಐತಿಹಾಸಿಕ ವಿಜಯ ಇದಕ್ಕೆ ನಿದರ್ಶನ. ಈ ಐಕ್ಯತೆ ಹಲವು ಪ್ರದೇಶಗಳಲ್ಲಿ ನಿರ್ಮಿಸಲಾಗಿದ್ದ ಕೋಮು ಗೋಡೆಗಳನ್ನು ಮುರಿದಿದೆ, ಇದು ಸರ್ಕಾರವನ್ನು ಹಿಮ್ಮೆಟ್ಟುವಂತೆ ಮಾಡುವಲ್ಲಿ ನಿರ್ಣಾಯಕ ಅಂಶವಾಗಿದೆ.

ಎರಡನೆಯದು, ಮತ್ತೊಮ್ಮೆ ಸಂಕುಚಿತ ರಾಜಕೀಯ ಲಾಭಕ್ಕಾಗಿ ಧರ್ಮವನ್ನು ಬಳಸಿಕೊಳ್ಳುವ ಮತ್ತು ದುರುಪಯೋಗ ಪಡಿಸಿಕೊಳ್ಳುವ ಕೇಂದ್ರದ ಆಳ್ವಿಕೆಯ ಮುಖಂಡರು ಮತ್ತೆ ಆರಂಬಿಸಿರುವ ಆಕ್ರಮಣ. ಹರ್ಯಾಣ ಮುಖ್ಯಮಂತ್ರಿ ಅಥವಾ ಗುಜರಾತ್ ರಾಜ್ಯದ ಕಂದಾಯ ಸಚಿವ ರಾಜೇಂದ್ರ ತ್ರಿವೇದಿಯಂತವರ ಮಾತುಗಳಲ್ಲಿ ಇದು ಕಂಡುಬರುತ್ತದೆ. ರಸ್ತೆಗಳಲ್ಲಿ ಮಾಂಸಾಹಾರವನ್ನು ಬಹಿರಂಗವಾಗಿ ಮಾರಾಟ ಮಾಡುವುದರಿಂದ ಹಿಂದೂಗಳ "ಭಾವನೆಗಳಿಗೆ ಧಕ್ಕೆ"ಯಾಗುತ್ತದೆ ಎಂದು ತ್ರಿವೇದಿ ಹೇಳಿದ್ದಾರೆ.

ಇದು ಒಂದು ಅರ್ಥಹೀನ ಹೇಳಿಕೆಯಾಗಿದ್ದರೂ, ಒಂದು ವೋಟಿನ ನೆಲೆಯನ್ನು ಬಲಪಡಿಸಿಕೊಕೊಳ್ಳುವ ತಂತ್ರವನ್ನು ಹೊಂದಿದೆ. ಗುರುಗ್ರಾಮದಲ್ಲಿ, ಆಕ್ರಮಣಕಾರಿ ಹಿಂದುತ್ವ ಗುಂಪುಗಳು ಪ್ರಾರ್ಥನೆಯನ್ನು ನಿಲ್ಲಿಸಿದರೆ, ಗುಜರಾತ್‌ನಲ್ಲಿ, ಸರ್ಕಾರದ ಆದೇಶದ ಮೇರೆಗೆ ಪೊಲೀಸರು ಮಾಂಸಾಹಾರಿ ಆಹಾರವನ್ನು ಮಾರಾಟ ಮಾಡದಂತೆ ಬೀದಿ ಮಾರಾಟಗಾರರನ್ನು ನಿಷೇಧಿಸಿದರು ಮತ್ತು ಅವರ ಸರಕುಗಳನ್ನು ವಶಪಡಿಸಿಕೊಂಡರು. ಗುಜರಾತಿನ ಪ್ರಕರಣದಲ್ಲಿ, ಅಲ್ಲಿನ ಹೈಕೋರ್ಟ್ ಇದರ ವಿರುದ್ಧ ತೀಕ್ಷ್ಣವಾದ ಟಿಪ್ಪಣಿಗಳನ್ನು ಮಾಡಿತು

ಉತ್ತರಪ್ರದೇಶದಲ್ಲಿ ಕೇಂದ್ರ ಮತ್ತು ರಾಜ್ಯ ಬಿಜೆಪಿ ನಾಯಕರ ಸುಮಾರಾಗಿ ಪ್ರತಿಯೊಂದು ಭಾಷಣವೂ ಕೋಮುವಾದಿ ಒತ್ತನ್ನು ಹೊಂದಿರುತ್ತದೆ. ಇಂತಹ ಅನೇಕ ಉದಾಹರಣೆಗಳಿವೆ. ಆದರೆ ಇದರಲ್ಲಿ ಮತ್ತಷ್ಟು ಆತಂಕದ ವಿಷಯವೆಂದರೆ ಒಂದಿಡೀ ಸಮುದಾಯವನ್ನು "ಭದ್ರತಾ ಬೆದರಿಕೆ" ಒಡ್ಡುವ ರಾಕ್ಷಸರೆಂಬಂತೆ ಚಿತ್ರಿಸುವ ಅಪಾಯಕಾರಿ ಪ್ರವೃತ್ತಿ. ಗುರುಗ್ರಾಮ್‌ನಲ್ಲಿ ನಿಂದನೆಗಳಿಂದ ತುಂಬಿದ ಪ್ರತಿಭಟನೆಗಳನ್ನು ಸಂಘಟಿಸುವವರು ಹಂಚಿಕೊಂಡಿರುವ ಒಂದು ವಿಡಿಯೋದಲ್ಲಿ ವಿಎಚ್‌ಪಿ ನಾಯಕನೊಬ್ಬ "ಇದು ನಮಾಜ್ ಅಲ್ಲ, ಜಿಹಾದ್, ಇದು ಭಯೋತ್ಪಾದನೆ" ಎಂದು ಹೇಳುವುದನ್ನು ನೋಡಬಹುದು. ಮುಸ್ಲಿಂ ಬೀದಿಬದಿ ವ್ಯಾಪಾರಿಗಳು ಹಿಂದೂ ಪ್ರದೇಶಗಳಿಗೆ ಬರುವುದನ್ನು ಬಲವಂತವಾಗಿ ತಡೆಗಟ್ಟುವಾಗ ಅಥವಾ ಬೇರೆ ಪ್ರದೇಶಗಳಲ್ಲಿ ಮುಸ್ಲಿಮರಿಗೆ ಮನೆಗಳನ್ನು ಬಾಡಿಗೆಗೆ ಕೊಡಲು ನಿರಾಕರಿಸುವಾಗಲೂ ಸಹ ಇದೇ ರೀತಿಯ ಅಪಪ್ರಚಾರವನ್ನು ಬಳಸಲಾಗುತ್ತಿದೆ. ಒಂದು ಸಮುದಾಯದ ಬಗ್ಗೆ ಭೀತಿಯ ಭಾವನೆಯನ್ನು ಸೃಷ್ಟಿಸಲು ಸಾಮಾನ್ಯವಾಗಿ ಇಂತಹ ಭದ್ರತೆಯ ಹುಸಿ ಭೀತಿಯನ್ನು ಹರಡಿಸಲಾಗುತ್ತದೆ. ಇದು ರಾಷ್ಟ್ರವಾದ ಮತ್ತು ಬಹು ಸಂಖ್ಯಾಕವಾದವನ್ನು ಬೆರೆಸುವ ಹಿಂದುತ್ವ ಶಕ್ತಿಗಳ ಎಂದಿನ ದುರುದ್ದೇಶಪೂರ್ಣ ಕಾರ್ಯತಂತ್ರಕ್ಕೆ ಅನುಗುಣವಾಗಿದೆ.

ಸಾಮೂಹಿಕ ಹೋರಾಟಗಳ ರಾಜಕೀಯ ಶಕ್ತಿಯು ದ್ವೇಷ ಮತ್ತು ವಿಭಜನೆಯ ರಾಜಕೀಯವನ್ನು ಜಯಿಸಬಲ್ಲದು, ಮತ್ತು ರೈತ ಹೋರಾಟದಲ್ಲಿ ಕಂಡುಬರುವಂತೆ ಜಯಿಸಿದೆ ಕೂಡ. ಆದರೆ ಇದು ಶಾಶ್ವತವಾದ ಪರಿಣಾಮವನ್ನು ಬೀರಲು, ಹೋರಾಟದ ಸಮಯದಲ್ಲಿ ಮೂಡಿಬರುವ ಭ್ರಾತೃತ್ವದ ಸ್ವಯಂಸ್ಫೂರ್ತ ಭಾವನೆಗಳಿಗಿಂತಲೂ ಮುಂದಕ್ಕೆ ಹೋಗುವುದು ಅವಶ್ಯಕ.

ವಿಭಜನೆಯ ಕೋಮು ಶಕ್ತಿಗಳು ನಡೆಸುವ ಅಲ್ಪಸಂಖ್ಯಾತ–ವಿರೋಧಿ ಅಣಿನೆರಿಕೆಗಳ ವಿರುದ್ಧ ಪ್ರಜ್ಞಾಪೂರ್ವಕ ಹೋರಾಟದ ರಾಜಕೀಯ ನೆಲೆಗಟ್ಟು ಖಂಡಿತವಾಗಿಯೂ ಅಗತ್ಯವಿದೆ. ಸಮಸ್ಯೆ ತಂತಾನೇ ಹೋಗಿಬಿಡಬಹುದೆಂದು ಆಶಿಸುವ ಮೂಲಕ ಅದನ್ನು ನಿರ್ಲಕ್ಷಿಸುವ ಯಾವುದೇ ರಕ್ಷಣಾತ್ಮಕ ನಿಲುವು ಜನರನ್ನು ವಿವಿಧ ಸಂಕುಚಿತ ಆಧಾರಗಳಲ್ಲಿ ವಿಭಜಿಸಿ ಅದರಿಂದ ಪ್ರಯೋಜನ ಪಡೆಯುವ ಶಕ್ತಿಗಳಿಗೆ ಬಲ ನೀಡುತ್ತದೆ.

ಲಖಿಂಪುರ್ ಖೇರಿಯಲ್ಲಿ ನಡೆದದ್ದು ಪೂರ್ವಯೋಜಿತ ಹತ್ಯೆಗಳು-ಎಸ್.ಐ.ಟಿ.

ನ್ಯೂಇಂಡಿಯಾ ನ್ಯೂಸ್

ಅಕ್ಟೋಬರ್ 3 ರಂದು ನಾಲ್ವರು ರೈತರು ಮತ್ತು ಒಬ್ಬ ಪತ್ರಕರ್ತನ ಸಾವಿಗೆ ಕಾರಣವಾದ ಘಟನೆ ಒಂದು ಆಪಘಾತವಲ್ಲ, ಅದು ಒಂದು ಪೂರ್ವ–ಯೋಜಿತ ಸಂಚು ಎಂದು ಇದರ ತನಿಖೆಗೆ ಸುಪ್ರಿಂ ಕೋರ್ಟ್ ನೇಮಿಸಿದ ವಿಶೇಷ ತನಿಖಾ ದಳ(ಎಸ್.ಐ.ಟಿ.)ವೇ ಈಗ ದೃಢಪಡಿಸಿದೆ.

ಈ ಮೊದಲು ಉತ್ತರ ಪ್ರದೇಶ ಪೋಲೀಸ್ ಕೇಂದ್ರ ಸಂಪುಟದ ಮಂತ್ರಿಯ ಮಗನೂ ಸೇರಿದಂತೆ 13 ಜನರ ಮೇಲೆ ಎಫ್.ಐ.ಆರ್. ನಲ್ಲಿ ಹಾಕಿದ್ದ ಎರ್ರಾಬಿರ್ರಿ ಮೋಟಾರು ಚಾಲನೆ (ಐಪಿಸಿ ಸೆಕ್ಷನ್ 279), ನಿರ್ಲಕ್ಷದಿಂದಾಗಿ ತೀವ್ರ ಗಾಯ ಉಂಟುಮಾಡಿದ್ದು(338), ದುಡುಕು ಕೃತ್ಯದಿಂದಾಗಿ ಸಾವು ಸಂಭವಿಸುವಂತೆ ಮಾಡಿದ್ದು(304ಎ) ಆರೋಪಗಳನ್ನು ಐಪಿಸಿ ಸೆಕ್ಷನ್ 307(ಕೊಲೆ ಪ್ರಯತ್ನ) ಮಟ್ಟಕ್ಕೆ ಏರಿಸಬೇಕು , ಮತ್ತು ಸೆಕ್ಷನ್ 302 (ಕೊಲೆ) ಆರೋಪದೊಂದಿಗೆ 147(ಗಲಭೆ ನಡೆಸಿರುವುದು), 148(ಮಾರಕ ಅಸ್ತ್ರಗಳೊಂದಿಗೆ ಗಲಭೆ) , 149(ಕಾನೂನುಬಾಹಿರವಾಗಿ ಒಟ್ಟುಗೂಡಿದ ಎಲ್ಲರೂ ಅಪರಾಧಿಗಳು) ಮತ್ತು 120 ಬಿ(ಕ್ರಿಮಿನಲ್ ಪಿತೂರಿ) ಆರೋಪಗಳನ್ನೂ ಸೇರಿಸಬೇಕು ಎಂದು ಎಸ್.ಐ.ಟಿ. ಶಿಫಾರಸು ಮಾಡಿದೆ. ಜತೆಗೆ ಶಸ್ತ್ರಾಸ್ತ್ರ ಕಾಯ್ದೆಯ ಸೆಕ್ಷನ್3/25/30ನ್ನೂ ಹಾಕಬೇಕು ಎಂದೂ ಶಿಫಾರಸು ಮಾಡಿದೆ.

ವ್ಯಾಪಕ ಪ್ರತಿಭಟನೆಯ ನಂತರ 13 ಮಂದಿಯನ್ನು ಬಂಧಿಸಿದ ನಂತರವೂ ಉತ್ತರಪ್ರದೇಶ ಪೋಲೀಸ್ ಇದೊಂದು ಎಚ್ಚರಗೇಡಿತನದಿಂದ ನಡೆದ ಅವಘಡವಾಗಿರಬಹುದು ಎಂದು ಬಿಂಬಿಸುವ ಪ್ರಯತ್ನವಾಗಿ ಹಗುರವಾದ ಸೆಕ್ಷನ್‌ಗಳನ್ನು ಹಾಕಿತ್ತು. ಉತ್ತರಪ್ರದೇಶ ಸರಕಾರ ನೇಮಿಸಿದ ಎಸ್.ಐ.ಟಿ. ಕೆಲಸದ ರೀತಿಯ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ ಸರ್ವೋಚ್ಚ ನ್ಯಾಯಾಲಯ ಉತ್ತರಪ್ರದೇಶದವರಲ್ಲದ ಪೋಲೀಸ್ ಅಧಿಕಾರಿಗಳಿರುವಂತೆ ಎಸ್‌ಐಟಿಯನ್ನು ಪುನರ್ರಚಿಸಿತು.

ಈ ಎಸ್‌ಐಟಿ "ಆರೋಪಿಗಳ ಕ್ರಿಮಿನಲ್ ಕಾರ್ಯಾಚರಣೆ ಒಂದು ಅಜ್ಞಾನದ ಕೃತ್ಯವಲ್ಲ, ಬದಲಿಗೆ ಒಂದು ಪೂರ್ವಯೋಜಿತ ಸಂಚು, ಹತ್ಯೆಯ ಉದ್ದೇಶದಿಂದ ನಡೆಸಿದ್ದು ಎಂದು ಈಗ ಸಾಬೀತಾಗಿದೆ" ಎಂದು ಹೇಳುತ್ತ ಆಪಾದಿತರ ಮೇಲಿನ ಆರೋಪಗಳನ್ನು ಈ ರೀತಿಯಲ್ಲಿ 'ಮೇಲ್ದರ್ಜೆ'ಗೆ ಏರಿಸಬೇಕು ಎಂದು ಚೀಫ್ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟರಿಗೆ ಹೇಳಿದೆ ಎಂಥು ವರದಿಯಾಗಿದೆ.

ರೈತರು ಈ ಮೊದಲೇ ಇದು ಕೊಲೆ ಪಿತೂರಿ ಎಂದು ಆರೋಪಿಸಿ ಈ ದುಷ್ಕೃತ್ಯ ಎಸಗಿದವರನ್ನು ಶಿಕ್ಷಿಸಬೇಕು, ಕೇಂದ್ರ ಸಂಪುಟದಲ್ಲಿ ಗೃಹವ್ಯವಹಾರಗಳ ರಾಜ್ಯ ದರ್ಜೆಯ ಮಂತ್ರಿ ಅಜಯ್ ಮಿಶ್ರರನ್ನು ವಜಾ ಮಾಡಬೇಕು ಎಂದು ಆಗ್ರಹಿಸಿದ್ದರು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.



ವ್ಯಂಗ್ಯಚಿತ್ರ ಕೃಪೆ:ಪಿ.ಮಹಮ್ಮದ್, ವಾರ್ತಾಭಾರತಿ

ಈಗ ಉತ್ತರಪ್ರದೇಶದಲ್ಲಿ ಚುನಾವಣಾ ಪ್ರಚಾರದಲ್ಲಿರುವ ಪ್ರಧಾನ ಮಂತ್ರಿಗಳು ಈ ಎಸ್‌ಐಟಿ ಶಿಫಾರಸಿನ ನಂತರವಾದರೂ ಆ ಮಂತ್ರಿಯನ್ನು ಸಂಪುಟದಿಂದ ಕೈಬಿಡುತ್ತಾರೆ ಎಂದು ರೈತರು ನಿರೀಕ್ಷಿಸುತ್ತಿದ್ದರೆ, ಅತ್ತ ಆ ಮಂತ್ರಿ ಪತ್ರಕರ್ತರು ಈ ಎಸ್‌ಐಟಿ ಹೇಳಿಕೆಯನ್ನು ಪ್ರಸ್ತಾಪಿಸಿದಾಗ ಅವರ ಮೇಲೆ ಹರಿಹಾಯ್ದಿರುವ ಘಟನೆ ವರದಿಯಾಗಿದೆ.

ವಾಸ್ತವವಾಗಿ ಖೇರಿ ಘಟನೆ ನಡೆದದ್ದೇ ಈ ಮಂತ್ರಿಯ ಉಡಾಫೆಯ ಮಾತುಗಳಿಂದ ಎಂದು ರೈತರು ನೆನಪಿಸುತ್ತಾರೆ. ಎಸ್‌ಐಟಿಯ ತನಿಖೆ ತನ್ನ ನಿಲುವನ್ನು ದೃಢಪಡಿಸಿದೆ ಎಂದು ಹೇಳಿರುವ ಸಂಯುಕ್ತ ಕಿಸಾನ್ ಮೋರ್ಚಾ ಈ ಘಟನೆಯ ಮಾಸ್ಟರ್‌ಮೈಂಡ್ ಆರಾಮವಾಗಿ ತಿರುಗಾಡುತ್ತಿದ್ದಾರೆ, ಕೇಂದ್ರ ಸಂಪುಟದಲ್ಲಿ ತನ್ನ ಸ್ಥಾನದಲ್ಲಿ ಗಟ್ಟಿಯಾಗಿ ಕೂತಿದ್ದಾರೆ, ಮೋದಿ ಸರಕಾರ ಈಗಲಾದರೂ 'ಲಖಿಮ್‌ಪುರ್ ಖೇರಿಯ ರೈತರ ಹತ್ಯಾಕಾಂಡದ ಪಿತೂರಿಗಾರ'ನ್ನು ರಕ್ಷಿಸುವುದನ್ನು ನಿಲ್ಲಿಸಬೇಕು, ಅತನನ್ನು ವಜಾಮಾಡಿ ಬಂಧಿಸಬೇಕು ಎಂಬ ತನ್ನ ಒತ್ತಾಯವನ್ನು ಪುನರುಚ್ಚರಿಸಿದೆ. ಇದಕ್ಕೆ ಬಲಿಯಾದವರಿಗೆ ನ್ಯಾಯ ಸಿಗವ ವರೆಗೆ ಭಾರತೀಯ ರೈತರು ಈ ಹತ್ಯಾಕಾಂಡವನ್ನು ಮರೆಯುವುದಿಲ್ಲ ಎಂದು ಅದು ಹೇಳಿದೆ.

ಸಗಟು ಹಣದುಬ್ಬರ 13 ತಿಂಗಳಲ್ಲಿ ಗರಿಷ್ಠ ಮಟ್ಟಕ್ಕೆ ಏರಿಕೆ

ಭಾರತದ ಸಗಟು ಬೆಲೆಗಳ ಹಣದುಬ್ಬರವು ಅಕ್ಟೋಬರ್‌ನಲ್ಲಿ 12.54% ರಿಂದ ನವೆಂಬರ್‌ನಲ್ಲಿ 14.23% ನ ಗರಿಷ್ಠ ಮಟ್ಟಕ್ಕೆ ತಲುಪಿದೆ. ಖನಿಜ, ಇಂಧನ ಮತ್ತು ವಿದ್ಯುತ್ ಶಕ್ತಿ ಮತ್ತು ತೈಲದ ಬೆಲೆಗಳ ಸತತ ಏರಿಕೆಯಿಂದಾಗಿ ಪ್ರಾಥಮಿಕ ಆಹಾರ ಹಣದುಬ್ಬರವು 13 ತಿಂಗಳಲ್ಲಿ ಗರಿಷ್ಠ ಮಟ್ಟಕ್ಕೆ ತಲುಪಿದೆ.

ಭಾರತವು ಸತತ ಎಂಟನೇ ತಿಂಗಳಿನಲ್ಲಿ ಎರಡಂಕಿಯ ಹಣದುಬ್ಬರ ತಲುಪಿದೆ ಎಂದು ಅರ್ಥಶಾಸ್ತ್ರಜ್ಞರು ವಿಶ್ಲೇಷಿಸಿದ್ದಾರೆ. ನವೆಂಬರ್‌ನಲ್ಲಿ ಕೇಂದ್ರ ಸರ್ಕಾರವು ಇಂಧನದ ದರದಲ್ಲಿ ಅತ್ಯಲ್ಪ ಪ್ರಮಾಣದಲ್ಲಿ ತೆರಿಗೆಗಳನ್ನು ಕಡಿತ ಮಾಡಿದ್ದರೂ, ಸರಕು ಸಾಗಣೆ ವೆಚ್ಚಗಳೊಂದಿಗೆ ತಾಳೆ ಮಾಡಿದಾಗ ಉತ್ಪಾದಕರಿಗೆ ದೊಡ್ಡ ಪರಿಹಾರವೇನೂ ನೀಡಲಿಲ್ಲ ಎಂಬುದು ಸಾಬೀತಾಗಿದೆ.

ಇಂಧನ ಮತ್ತು ವಿದ್ಯುತ್ ಮೇಲಿನ ಹಣದುಬ್ಬರವು ನವೆಂಬರ್‌ನಲ್ಲಿ ಶೇ.40% ರಷ್ಟು ದಾಖಲೆ ಮಟ್ಟಕ್ಕೆ ಏರಿಕೆ ಕಂಡಿದೆ. ಸೆಪ್ಟೆಂಬರ್ ತಿಂಗಳಿನಲ್ಲಿ ಶೇ.29.5% ರಷ್ಟು ದಾಖಲಾಗಿದ್ದ ಏರಿಕೆಯು ಎರಡು ತಿಂಗಳುಗಳಲ್ಲಿ ತೀವ್ರವಾಗಿ ದರ ಏರಿಕೆಯನ್ನು ಕಂಡಿದೆ. ಇಂಧನದ ಬೆಲೆಗಗಳ ಏರಿಕೆಯಿಂದಾಗಿಯೂ ದೊಡ್ಡ ಜನವಿಭಾಗಕ್ಕೆ ಸಾಕಷ್ಟು ಸಂಕಷ್ಟವನ್ನು ತಂದೊಡ್ಡಿದೆ.

ಅಕ್ಟೋಬರ್‌ನಲ್ಲಿ ಹಣದುಬ್ಬರವು ಶೇ.12.04 ರಿಂದ ಶೇ.11.92ಕ್ಕೆ ಇಳಿಕೆ ಕಂಡಿದ್ದರೂ ಸಹ ಉತ್ಪಾದನಾ ಘಟಕಗಳಲ್ಲಿನ ಕನಿಷ್ಠ ಮಟ್ಟಕ್ಕೆ ಮಾತ್ರ ಕಡಿತಗೊಂಡಿದೆ. ಆದರೆ, ಸಗಟು ಆಹಾರ ಸೂಚ್ಯಂಕದ ಪ್ರಕಾರ ಆಹಾರ ಹಣದುಬ್ಬರವು ನವೆಂಬರ್‌ನಲ್ಲಿ ಶೇ.3.06 ರಿಂದ ಶೇ.6.7 ಕ್ಕೆ ದ್ವಿಗುಣಗೊಂಡಿದೆ. ದಿನಬಳಕೆಯ ಸಾಮಾನ್ಯ ವಸ್ತುಗಳ ಹಣದುಬ್ಬರವು ಅಕ್ಟೋಬರ್‌ನಲ್ಲಿ ಶೇ.5.2 ರಿಂದ ಶೇ.10.34ಕ್ಕೆ ದ್ವಿಗುಣಗೊಂಡಿದೆ.

ನವೆಂಬರ್ 2021ರಲ್ಲಿ ಶೇ.14.2 ರಷ್ಟು ದಾಖಲೆಯ ಹಣದುಬ್ಬರವು ಆಘಾತಕಾರಿಯಾಗಿದೆ ಎಂದು ಐಸಿಆರ್‌ಎ ಮುಖ್ಯ ಅರ್ಥಶಾಸ್ತ್ರಜ್ಞ ಅದಿತಿ ನಾಯರ್ ಹೇಳಿದ್ದಾರೆ. ನವೆಂಬರ್ 2020ರಲ್ಲಿ 2.29% ರಷ್ಟು ಇದ್ದ ಹಣದುಬ್ಬರವು ಈ ಬಾರಿ ಅಧಿಕ ಪ್ರಮಾಣದಲ್ಲಿ ಏರಿಕೆ ಕಂಡಿದೆ ಎಂದು ಡಬ್ಲ್ಯುಪಿಐ ಮಾನದಂಡಗಳು ತಿಳಿಸುತ್ತವೆ. ಅತ್ಯಧಿಕ ಸಾಮಾನ್ಯ ವರ್ಗಗಳ ಜೀವನಮಟ್ಟದ ಹಣದುಬ್ಬರ ದರವನ್ನು ನಿರೀಕ್ಷಿಸಿದ್ದಕ್ಕಿಂತ ಹೆಚ್ಚು ಕಠಿಣ ಪರಿಸ್ಥಿತಿಗೆ ನೂಕಲ್ಪಟ್ಟಿದೆ ಎಂದು ವಿವರಿಸಲಾಗಿದೆ.



ಬಚಾವ್ರೋ ಭಗ್ವಾನ್, ಪ್ಲೀಸ್

ವ್ಯಂಗ್ಯಚಿತ್ರ ಕೃಪೆ:ಸತೀಶ ಆಚಾರ್ಯ

ದಿನಬಳಕೆಯ ತರಕಾರಿ ಬೆಲೆಗಳಲ್ಲಿನ ಅಧಿಕ ಪ್ರವಾಣದ ಏರಿಕೆಕಂಡಿದೆ. ಅಲ್ಲದೆ, ಮೊಟ್ಟೆ, ಮಾಂಸ ಮತ್ತು ಮೀನು ಮತ್ತು ಮಸಾಲೆ ಪದಾರ್ಥಗಳ ಬೆಲೆಗಳ ಏರಿಕೆಯಿಂದಾಗಿ ಹಣದುಬ್ಬರ ಅಧಿಕಗೊಂಡಿದೆ. ಸಾಮಾನ್ಯ ಆಹಾರ ಹಣದುಬ್ಬರವು ನವೆಂಬರ್ 2021ರಲ್ಲಿ 13 ತಿಂಗಳ ಗರಿಷ್ಠ ಶೇ.4.9ಕ್ಕೆ ಏರಿಕೆ ಕಂಡಿದೆ.

ಆಹಾರ ಪದಾರ್ಥಗಳಾದ ಮೊಟ್ಟೆ, ಮಾಂಸ ಮತ್ತು ಮೀನಿನ ಹಣದುಬ್ಬರವು ಅಕ್ಟೋಬರ್‌ನಲ್ಲಿ ಶೇ. 1.98 ರಿಂದ ನವೆಂಬರ್‌ನಲ್ಲಿ ಶೇ. 9.66ಕ್ಕೆ ಏರಿಕೆ ಕಂಡಿದೆ. ಹಣ್ಣುಗಳ ಹಣದುಬ್ಬರವು ಅಕ್ಟೋಬರ್‌ನಲ್ಲಿ ಶೇ.8.2 ರಿಂದ ಶೇ.15.5 ದಾಖಲಾಗಿದೆ. ಗೋಧಿ ಬೆಲೆಗಳು ಅಕ್ಟೋಬರ್‌ನಲ್ಲಿ ಶೇ.8.14 ರಿಂದ ಶೇ.10.14ರಷ್ಟು ಏರಿಕೆ ಕಂಡಿದೆ. ತರಕಾರಿ ಬೆಲೆಗಳಲ್ಲಿಯೂ ಕನಿಷ್ಠ ಐದು ತಿಂಗಳ ಋಣಾತ್ಮಕ ಹಣದುಬ್ಬರದ ನಂತರ ಮತ್ತಷ್ಟು ದಾಖಲೆ ಪ್ರಮಾಣದಲ್ಲಿ ಏರಿಕೆ ಕಂಡಿದೆ. ನವೆಂಬರ್‌ನಲ್ಲಿ ಶೇ.3.91ಕ್ಕೆ ಹಣದುಬ್ಬರ ದಾಖಲಾಗಿದೆ.

3 ವರ್ಷದಲ್ಲಿ ಯುಎಪಿಎ ಬಂಧಿತರಲ್ಲಿ ಅರ್ಧಕ್ಕಿಂತ ಹೆಚ್ಚು 30 ವರ್ಷ ಕೆಳಗಿನವರು

ದೇಶದಲ್ಲಿ 2018 ರಿಂದ 2020 ನಡುವೆ ಅಕ್ರಮ ಚಟುವಟಿಕೆಗಳ ನಿಯಂತ್ರಣ ಕಾಯ್ದೆ (ಯುಎಪಿಎ) ಅಡಿಯಲ್ಲಿ ಬಂಧನಕ್ಕೊಳಗಾದವರ ಪೈಕಿ ಶೇಕಡಾ 50ಕ್ಕೂ ಹೆಚ್ಚಿನವರು 30 ವರ್ಷಕ್ಕಿಂತ ಕೆಳಗಿನವರು ಎಂದು ಸಂಸತ್ತಿಗೆ ಕೇಂದ್ರ ಸರಕಾರ ಮಾಹಿತಿ ನೀಡಿದೆ.


ಸಂಸದರು ಕೇಳಿದ ಪ್ರಶ್ನೆಗಳಿಗೆ ಪ್ರತಿಕ್ರಿಯೆಯಾಗಿ ಕೇಂದ್ರ ಗೃಹ ಸಚಿವಾಲಯ ರಾಜ್ಯ ಸಚಿವ ನಿತ್ಯಾನಂದ ರೈ ನೀಡಿದ ಉತ್ತರದಲ್ಲಿ ಮೇಲಿನ ಮಾಹಿತಿ ನೀಡಲಾಗಿದೆ. ಕಳೆದ ಮೂರು ವರ್ಷಗಳಲ್ಲಿ ದೇಶದಲ್ಲಿ ಈ ಕಾಯ್ದೆಯಡಿ 4,690 ಜನರನ್ನು ಬಂಧಿಸಲಾಗಿದೆ. ಇವರ ಪೈಕಿ 2,501 ಮಂದಿ ಅಥವಾ ಶೇಕಡಾ 53.32ರಷ್ಟು ಮಂದಿ 30 ವರ್ಷಕ್ಕಿಂತ ಕೆಳಗಿನವರಾಗಿದ್ದಾರೆ.

ಉತ್ತರ ಪ್ರದೇಶದಲ್ಲಿ ಗರಿಷ್ಠ ಪ್ರಮಾಣದಲ್ಲಿ ಅಂದರೆ, ಕಳೆದ ಮೂರು ವರ್ಷಗಳ ಅವಧಿಯಲ್ಲಿ 1,338 ಮಂದಿಯನ್ನು ಬಂಧಿಸಲಾಗಿದೆ. ಇವುಗಳ ಪೈಕಿ 931 ಮಂದಿ ಅಥವಾ ಶೇ.69.5ರಷ್ಟು ಮಂದಿ 30 ವರ್ಷಕ್ಕಿಂತ ಕೆಳಗಿನವರಾಗಿದ್ದಾರೆ.

ಯುಎಪಿಎ ಬಂಧನಗಳಲ್ಲಿ ಉತ್ತರ ಪ್ರದೇಶದ ನಂತರ ಮಣಿಪುರ ಎರಡನೇ ಸ್ಥಾನದಲ್ಲಿದ್ದು ಇಲ್ಲಿ ಕಳೆದ ಮೂರು ವರ್ಷಗಳಲ್ಲಿ 943 ಮಂದಿಯನ್ನು ಬಂಧಿಸಲಾಗಿದೆ. ಇವರ ಪೈಕಿ 499 ಮಂದಿ 30 ವರ್ಷಕ್ಕಿಂತ ಕೆಳಗಿನವರು.ಜಮ್ಮು–ಕಾಶ್ಮೀರ ಮೂರನೇ ಸ್ಥಾನದಲ್ಲಿದ್ದು 750 ಮಂದಿಯನ್ನು ಈ ಕಾಯ್ದೆಯಡಿ ಬಂಧಿಸಲಾಗಿದ್ದು ಇವರ ಪೈಕಿ 366 ಮಂದಿ 30 ವರ್ಷಕ್ಕಿಂತ ಕೆಳಗಿನವರು ಎಂದು ಮಾಹಿತಿಯಲ್ಲಿ ಉಲ್ಲೇಖಿಸಿದೆ.

ಯುಎಪಿಎ ಅಡಿಯಲ್ಲಿ ಬಂಧಿಸಲ್ಪಟ್ಟವರಲ್ಲಿ ಬಿಹಾರ, ಮಹಾರಾಷ್ಟ್ರ, ಮೇಘಾಲಯ, ಪಂಜಾಬ್ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳಲ್ಲಿ 2019ಕ್ಕೆ ಹೋಲಿಸಿದರೆ 2020 ರಲ್ಲಿ ಹೆಚ್ಚಳವಾಗಿದೆ.

ಯುಎಪಿಎ ಅಡಿಯಲ್ಲಿರುವ ಪ್ರಕರಣಗಳನ್ನು ರಾಜ್ಯ ಪೊಲೀಸರು ಮತ್ತು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ತನಿಖೆ ನಡೆಸುತ್ತದೆ. ಎನ್‌ಐಎಗೆ ಸಂಬಂಧಿಸಿದಂತೆ, ಎನ್‌ಐಎ ಪ್ರಕರಣಗಳ ತ್ವರಿತ ವಿಚಾರಣೆಗಾಗಿ ಇದುವರೆಗೆ ದೇಶಾದ್ಯಂತ 49 ವಿಶೇಷ ನ್ಯಾಯಾಲಯಗಳನ್ನು ಗೊತ್ತುಪಡಿಸಲಾಗಿದೆ.



ದಮ್‌ದಾರ್ !

"ಸೋಚ್ ಈಮಾನ್‌ದಾರ್ –ಕಾಮ್ ದಮ್‌ದಾರ್"

ಡಿಸೆಂಬರ್ 13 ರಂದು ದೇಶದ ರಾಜಧಾನಿಯ ಪ್ರಮುಖ ದೈನಿಕಗಳೂ ಸೇರಿದಂತೆ ಉತ್ತರ ಭಾರತದ ದೈನಿಕಗಳಲ್ಲಿ "ದಿವ್ಯ ಕಾಶಿ–ಭವ್ಯ ಕಾಶಿ" ಎಂಬ ಉತ್ತರಪ್ರದೇಶ ಸರಕಾರದ ಎರಡು ಪುಟಗಳ ವರ್ಣಮಯ ಜಾಹೀರಾತುಗಳು ಪ್ರಕಟಗೊಂಡವು. ಅಧಿಕೃತವಾಗಿ ಇದು ಪ್ರಧಾನ ಮಂತ್ರಿಗಳಿಂದ 'ಕಾಶಿ ವಿಶ್ವನಾಥ ಧಾಮ'ದ ಉದ್ಘಾಟನೆಯ ಕಾರ್ಯಕ್ರಮ.


"ಸೋಚ್ ಈಮಾನ್‌ದಾರ್ –ಕಾಮ್ ದಮ್‌ದಾರ್" ಎಂಬುದು ಈ ಜಾಹೀರಾತಿನ ಘೋಷ ವಾಕ್ಯ

ಅಂದರೆ ಪ್ರಾಮಾಣಿಕ ವಿಚಾರ, ಬಲಯುತ ಕೆಲಸ.

ಈ ಜಾಹೀರಾತು ಹೇಳಿರುವ 'ದಮ್‌ದಾರ್ ಕಾಮ್' ಎಂದರೆ ಕಾಶಿಯ 'ಪುನಶ್ಚೇತನ ಮತ್ತು ರೂಪಾಂತರವೇ ಹೊರತು, ಬೆಲೆಯೇರಿಕೆಯ ಹೊರೆಯನ್ನು ಹೊರುವ ಶಕ್ತಿಯನ್ನು ಕೊಡುವುದಲ್ಲ.

ವ್ಯಂಗ್ಯಚಿತ್ರ ಕೃಪೆ: ಸತೀಶ ಆಚಾರ್ಯ

ಕೊರೊನಾ ನಂತರ ಭಾರತದ ಆರ್ಥಿಕ ಚೇತರಿಕೆ ಹೇಗೆ?



ಪ್ರೊ. ಪ್ರಭಾತ್ ಪಟ್ನಾಯಕ್
ಅನು: ಕೆ.ಎಂ. ನಾಗರಾಜ್

ಕೊರೊನಾ ಸಂದರ್ಭದಲ್ಲಿ ಭಾರತ ವಿಶ್ವದಲ್ಲೇ ಅತಿ ಹೆಚ್ಚು ಜಿಡಿಪಿ ಕುಸಿತ ಕಂಡ ದೇಶಗಳಲ್ಲಿ ಒಂದು ಎಂಬ ಹಿನ್ನೆಲೆಯಲ್ಲಿ, ಈ ವರ್ಷದಲ್ಲಿ ಎರಡಂಕಿಯ ಬೆಳವಣಿಗೆ ನಿರೀಕ್ಷಿತವೇ. ಅದು ಕೇಕೆಹಾಕುವ ವಿಷಯವೇನೂ ಅಲ್ಲ. ಈ ಚೇತರಿಕೆಯು ನಿಸ್ಸಂಶಯವಾಗಿ ಸುಸ್ಥಿರವಲ್ಲ. ಬಳಕೆ ಹೆಚ್ಚಾದರೆ ಮಾತ್ರ ಚೇತರಿಕೆ ತಾಳುತ್ತದೆ. ಇಲ್ಲದಿದ್ದರೆ ಬೆಳವಣಿಗೆ ಕುಂದುತ್ತದೆ. ಅರ್ಥವ್ಯವಸ್ಥೆಯ ಚೇತರಿಕೆಗಾಗಿ ಎರಡು ಆಯ್ಕೆಗಳು ಉಳಿಯುತ್ತವೆ. ಒಂದು, ಸರ್ಕಾರವು ಕುಟುಂಬಗಳಿಗೆ ನೇರವಾಗಿ ಹಣ ವರ್ಗಾವಣೆ ಮಾಡುವ ಮೂಲಕ ಖಾಸಗಿ ಬಳಕೆಯನ್ನು ಉತ್ತೇಜಿಸಬಹುದು. ಎರಡನೆಯ ಆಯ್ಕೆ ಎಂದರೆ, ಸರ್ಕಾರದ ವೆಚ್ಚಗಳನ್ನು ಗಣನೀಯ ಪ್ರಮಾಣದಲ್ಲಿ ಹೆಚ್ಚಿಸುವುದು. ಆರೋಗ್ಯ ರಕ್ಷಣೆ, ಶಿಕ್ಷಣ ಮತ್ತು ಇತರ ಸಾಮಾಜಿಕ ಸೇವೆಗಳ ಮೇಲಿನ ವೆಚ್ಚಗಳನ್ನು ಹೆಚ್ಚಿಸಬೇಕಾಗುತ್ತದೆ. ಆದರೆ ಕಾರ್ಪೊರೇಟ್‌ಗಳಿಗೆ ಸಬ್ಸಿಡಿ ಮತ್ತು ತೆರಿಗೆ ರಿಯಾಯಿತಿ ಒದಗಿಸುವ ಬದಲು, ಖಾಸಗಿ ಬಳಕೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಗಮನ ಹರಿಸಬೇಕು ಎಂಬ ಸರಳ ಅಂಶವನ್ನೂ ಅರ್ಥಮಾಡಿಕೊಳ್ಳದಷ್ಟು ಅಸಮರ್ಥವಾಗಿದೆ ಮೋದಿ ಸರ್ಕಾರ!

ಅಲೆ ಅಲೆಯಾಗಿ ಅಪ್ಪಳಿಸಿ ಇಡೀ ವಿಶ್ವವನ್ನೇ ವ್ಯಾಪಿಸಿಕೊಂಡಿರುವ ಕೊರೊನಾ ಸಾಂಕ್ರಾಮಿಕವು ಇನ್ನೂ ಕೊನೆಗೊಂಡಿಲ್ಲ. ಅನೇಕ ದೇಶಗಳು ಅದರ ಹಾವಳಿಯಿಂದ ಇನ್ನೂ ನರಳುತ್ತಿವೆ. ಆದರೆ, ಲಾಕ್‌ಡೌನ್ ಪ್ರಕರಣಗಳು ಬಹುತೇಕ ಇಲ್ಲವಾಗಿವೆ. ಭಾರತದಲ್ಲೂ ಸಹ, ಪ್ರಸಕ್ತ ಹಣಕಾಸು ವರ್ಷದಲ್ಲಿ ಲಾಕ್‌ಡೌನ್ ಇರಲಿಲ್ಲ. ಅರ್ಥವ್ಯವಸ್ಥೆಯ ಕಾರ್ಯಾಚರಣೆಗಳು ಅಬಾಧಿತವಾಗಿದ್ದವು. ಅದರ ಕಾರ್ಯಕ್ಷಮತೆಗೆ ಯಾವ ಅಡ್ಡಿ-ಆತಂಕಗಳೂ ಇರಲಿಲ್ಲ. ಆರ್ಥಿಕ ಚಟುವಟಿಕೆಗಳು ಮಾಮೂಲಿನಂತೆ ಜರುಗಿವೆ. ಹಿಂದಿನ ವರ್ಷ ಕೊರೊನಾದಿಂದಾಗಿ ವಿಶ್ವದ ಅರ್ಥವ್ಯವಸ್ಥೆಯ ಹದಗೆಟ್ಟಿತ್ತು ಎಂಬುದನ್ನು ಮರೆಯುವಂತಿಲ್ಲ.

ಭಾರತದ ಅರ್ಥವ್ಯವಸ್ಥೆಯ ಚೇತರಿಕೆಯು ಸಾರವತ್ತಾಗಿದೆ ಮತ್ತು ಅದು ಪ್ರಸಕ್ತ ಹಣಕಾಸು ವರ್ಷದಲ್ಲಿ ಎರಡು ಅಂಕಿ ದರದ ಬೆಳವಣಿಗೆಯನ್ನು ಕಾಣಲಿದೆ ಎಂಬುದಾಗಿ ಸರ್ಕಾರದ ವಕ್ತಾರರು ಹೇಳುತ್ತಾರೆ. ಆದರೆ, ಪ್ರಸಕ್ತ ಹಣಕಾಸು ವರ್ಷದಲ್ಲಿ ಅರ್ಥವ್ಯವಸ್ಥೆಯು ಎರಡು ಅಂಕಿ ದರದಲ್ಲಿ ಬೆಳೆಯುವುದು ಒಂದು ಆಶ್ಚರ್ಯದ ವಿಷಯವೇ ಅಲ್ಲ. ಏಕೆಂದರೆ, ಹಿಂದಿನ ವರ್ಷದಲ್ಲಿ ಜಿಡಿಪಿಯು ತೀವ್ರವಾಗಿ ಕುಸಿದಿತ್ತು. ಬೇರೆ ಯಾವುದೇ ದೇಶಕ್ಕಿಂತ ಹೆಚ್ಚು ಕಠಿಣವಾದ ಲಾಕ್‌ಡೌನನ್ನು ಭಾರತದಲ್ಲಿ ಹೇರಿದ್ದರಿಂದಾಗಿ ಜಿಡಿಪಿಯು 2020ರ ಏಪ್ರಿಲ್-ಜೂನ್ ತ್ರೈಮಾಸಿಕದಲ್ಲಿ ದಿಗ್ಭ್ರಮೆಗೊಳಿಸುವ ಶೇಕಡಾ 24 ರಷ್ಟು ಕುಸಿತ ಕಂಡಿತ್ತು. ಇದು, ವಾಸ್ತವವಾಗಿ, ಕೊರೊನಾ ಸಂದರ್ಭದಲ್ಲಿ ವಿಶ್ವದಲ್ಲೇ ಅತಿ ಹೆಚ್ಚು ಕುಸಿತಗಳಲ್ಲೊಂದಾಗಿತ್ತು. ಕುಸಿತದ ಹಿನ್ನೆಲೆಯಲ್ಲಿ, ಈ ವರ್ಷದಲ್ಲಿ ಎರಡಂಕಿಯ ಬೆಳವಣಿಗೆ ನಿರೀಕ್ಷಿತವೇ. ಅದು ಕೇಕೆಹಾಕುವ ವಿಷಯವೇ ಅಲ್ಲ.

ನಿಜಕ್ಕೂ ಸವಾಲಿನ ಪ್ರಶ್ನೆಯೆಂದರೆ, ಪ್ರಸಕ್ತ ಹಣಕಾಸು ವರ್ಷದ ಜಿಡಿಪಿಯ ಬೆಳವಣಿಗೆಯು, ಕೊರೊನಾ ಪೂರ್ವ ಹಣಕಾಸು ವರ್ಷದ, ಅಂದರೆ, 2019-20ರ ಜಿಡಿಪಿಯ ಬೆಳವಣಿಗೆಯೊಂದಿಗೆ ಹೇಗೆ ಹೋಲುತ್ತದೆ ಎಂಬುದು. ಈ ರೀತಿಯ ತುಲನೆ ಮಾಡುವಾಗ, ಈ ವರ್ಷದ ಮೊದಲ ತ್ರೈಮಾಸಿಕದ ಜಿಡಿಪಿಯು 2019-20ರ ಮೊದಲ ತ್ರೈಮಾಸಿಕಕ್ಕಿಂತಲೂ ಕೆಳಗಿದೆ ಎಂಬುದು ಕಾಣುತ್ತದೆ. ಈ ವರ್ಷದ ಎರಡನೇ ತ್ರೈಮಾಸಿಕದ ಜಿಡಿಪಿಯು 2019-20ರ ಎರಡನೇ ತ್ರೈಮಾಸಿಕದ ಜಿಡಿಪಿಯಷ್ಟೇ ಇದೆ. ಈ ಅಂಶವನ್ನು ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಅದರ ಹಿಂದಿನ ವರ್ಷಕ್ಕೆ ಹೋಲಿಸಿದರೆ ಕಳೆದ ವರ್ಷ ಜಿಡಿಪಿಯಲ್ಲಿ ಶೇ.7.3ರಷ್ಟು ಕುಸಿತವಾಗಿದ್ದು, ಈ ವರ್ಷದ ಶೇ.10ರ ಮಟ್ಟದ ಎರಡಂಕಿಯ ಬೆಳವಣಿಗೆ ದರವೂ ಸಹ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಂತಹ ಸರ್ಕಾರಿ ಸಂಸ್ಥೆಯ ಅಂದಾಜಿನ ಪ್ರಕಾರವೇ ಶೇ.9.5 ಮಟ್ಟದಲ್ಲಿ ಬೆಳೆಯಲಿದೆ ಎಂಬುದಕ್ಕಿಂತ ತುಸು ಹೆಚ್ಚಿನದು ಮತ್ತು 2019-20ರ ವರ್ಷಕ್ಕೆ ಹೋಲಿಸಿದರೆ, 1.97% ಹೆಚ್ಚಿನದು. ಈ ಮಟ್ಟದ ಬೆಳವಣಿಗೆಯು, ಅರ್ಥವ್ಯವಸ್ಥೆಯ ಸಕಾರಾತ್ಮಕ ಪ್ರವೃತ್ತಿಯ ಪ್ರತೀಕವೇನಲ್ಲ.

ಈ ಚೇತರಿಕೆಯೂ ಸಹ ಸುಸ್ಥಿರವಾದುದೇನಲ್ಲ. ಏಕೆ ಸುಸ್ಥಿರವಾದುದಲ್ಲ ಎಂಬುದು ಈ ವರ್ಷದ ಎರಡನೇ ತ್ರೈಮಾಸಿಕದಲ್ಲೂ ಬಳಕೆಯು 2019-20ರ ಇದೇ ತ್ರೈಮಾಸಿಕದಲ್ಲಿದ್ದುದಕ್ಕಿಂತ 3.5% ಕಡಿಮೆ ಇದೆ ಎಂಬ ಅಂಶದಿಂದ ಸ್ಪಷ್ಟವಾಗುತ್ತದೆ. 2021-22ರ ಎರಡನೇ ತ್ರೈಮಾಸಿಕದ ಜಿಡಿಪಿಯ 2019-20ರ ಎರಡನೇ ತ್ರೈಮಾಸಿಕದಷ್ಟೇ ಮಟ್ಟಕ್ಕೆ ಚೇತರಿಕೆಯಾಗಿರುವ ವಿದ್ಯಮಾನಕ್ಕೆ ಹೂಡಿಕೆಯು ಅಪಾರ ಕೊಡುಗೆ ನೀಡಿದೆ. ಹಿಂದೆ ತೆಗೆದುಕೊಂಡ ನಿರ್ಧಾರಗಳ ಫಲಿತಾಂಶವಾಗಿ ಪರಿಶೀಲನೆಯ ಹಂತದಲ್ಲಿದ್ದ ಹೂಡಿಕೆಗಳು ಬಹುಶಃ ಈಗ ಫಲಕಾರಿಯಾಗಿವೆ. ಇದು ಏನನ್ನು ಅರ್ಥೈಸುತ್ತದೆ ಎಂದರೆ, ಪ್ರಸಕ್ತ ವರ್ಷದಲ್ಲಿ, ಈ ಹೂಡಿಕೆಗಳಿಂದಾಗಿ ಉತ್ಪಾದಕ ಸಾಮರ್ಥ್ಯವು ಹೆಚ್ಚುತ್ತದೆಯಾದರೂ, ಜಿಡಿಪಿಯು 2019-20ರ ಮಟ್ಟದಲ್ಲಿದ್ದಂತೆಯೇ ಇರುತ್ತದೆ. ಆದರೆ, ಉತ್ಪಾದನಾ ಸಾಮರ್ಥ್ಯದ ಬಳಕೆಯಲ್ಲಿ ಕುಸಿತವಾಗುತ್ತದೆ. ಪರಿಣಾಮವಾಗಿ, ಮುಂಬರುವ ವರ್ಷದಲ್ಲಿ ಹೂಡಿಕೆಗಳು ಕಡಿಮೆಯಾಗುತ್ತವೆ. ಅದರ ಜೊತೆಯಲ್ಲಿ ಜಿಡಿಪಿಯೂ ಕಡಿಮೆಯಾಗುತ್ತದೆ.

ಸಂಕ್ಷಿಪ್ತವಾಗಿ ಹೇಳುವುದಾದರೆ, ಈ ಚೇತರಿಕೆಯು ನಿಸ್ಸಂಶಯವಾಗಿ ಸುಸ್ಥಿರವಲ್ಲ. ಬಳಕೆ ಹೆಚ್ಚಾದರೆ ಮಾತ್ರ ಚೇತರಿಕೆ ತಾಳುತ್ತದೆ. ಇಲ್ಲದಿದ್ದರೆ ಬೆಳವಣಿಗೆ ಕುಂದುತ್ತದೆ. ಅದಕ್ಕೆ ಕಾರಣವನ್ನು ಹೀಗೆ ವಿವರಿಸಬಹುದು: ಅರ್ಥಮಾಡಿಕೊಳ್ಳುವ ಸರಳತೆಗಾಗಿ, ನಿವ್ವಳ ರಫ್ತುಗಳನ್ನು ಜಿಡಿಪಿಯ ಲೆಕ್ಕಾಚಾರದಿಂದ ಹೊರಗಿಡಬಹುದು, ಏಕೆಂದರೆ, ಅವು ಜಿಡಿಪಿಯ ಒಟ್ಟು ಲೆಕ್ಕದಲ್ಲಿ ಒಂದು ಬಹಳ ಸಣ್ಣ ಅಂಶವಾಗುತ್ತವೆ. ಜಿಡಿಪಿಯು, ಖಾಸಗಿ ಬಳಕೆ ಮತ್ತು ಖಾಸಗಿ ಹೂಡಿಕೆ ಮತ್ತು ಸರ್ಕಾರದ ವೆಚ್ಚಗಳ ಒಟ್ಟು ಮೊತ್ತಕ್ಕೆ ಸಮನಾಗುತ್ತದೆ. ಖಾಸಗಿ ಹೂಡಿಕೆಯ ಬಗ್ಗೆ ಹೇಳುವುದಾದರೆ, ಮಾರುಕಟ್ಟೆಯ ಗಾತ್ರವು ಎಷ್ಟು ಬೆಳೆದಿದೆ ಎಂಬುದನ್ನು ಆಧರಿಸಿ ಅದಕ್ಕೆ ತಕ್ಕಂತೆ ಹೂಡಿಕೆಯಾಗುತ್ತದೆ. ಹೂಡಿಕೆಯು ಜಿಡಿಪಿಯ ಬೆಳವಣಿಗೆಯ ಒಂದು ಸೂಚಕವೂ ಹೌದು. ಅರ್ಥವ್ಯವಸ್ಥೆಯ ಸುಸ್ಥಿತಿ ಅಥವಾ ಅದರ ನಿರಂತರ ಚೇತರಿಕೆಗಾಗಿ ಖಾಸಗಿ ಬಳಕೆಯಲ್ಲಾಗಲಿ ಅಥವಾ ಸರ್ಕಾರಿ ವೆಚ್ಚಗಳಲ್ಲಾಗಲಿ ಸಾಕಷ್ಟು ಹೆಚ್ಚಳ ಇರಲೇಬೇಕಾಗುತ್ತದೆ. ಆದರೆ, ಅಧಿಕೃತ ವಕ್ತಾರರು, ಸಾಮಾನ್ಯವಾಗಿ, ಸರ್ಕಾರದ ಮೂಲಸೌಕರ್ಯ ಹೂಡಿಕೆಯೇ ಈ ಅಂಶವನ್ನು ನೋಡಿಕೊಳ್ಳುತ್ತದೆ ಎಂಬ ಅಭಿಪ್ರಾಯವನ್ನು ಹೊಂದಿರುತ್ತಾರೆ.

ಆದರೆ, ಸರ್ಕಾರವು "ನಗದೀಕರಣ"ದ ಮೂಲಕ ಸಾರ್ವಜನಿಕ ವಲಯದ ಮೂಲಸೌಕರ್ಯದ ಆಸ್ತಿಗಳನ್ನು ಖಾಸಗಿಯವರಿಗೆ ಹಸ್ತಾಂತರಿಸುವ ಮೂಲಕ ಅಥವಾ ಸಾರ್ವಜನಿಕ ಆಸ್ತಿಗಳನ್ನು ಬೇಕೆಂದೇ ಬೆಲೆ ಇಳಿಸಿ ಖಾಸಗಿಯವರಿಗೆ ಮಾರುವ ಮೂಲಕ ಅಥವಾ ಸಾರ್ವಜನಿಕ ಆಸ್ತಿಗಳನ್ನು ಖಾಸಗಿಯವರಿಗೆ ದೀರ್ಘ ಕಾಲದ ಗುತ್ತಿಗೆ ಕೊಡುವ ಮೂಲಕ ಮೂಲಸೌಕರ್ಯಗಳಿಗೆ ಹೂಡಿಕೆ ಮಾಡಲು ಸಾಧ್ಯವಿಲ್ಲ. ವಾಸ್ತವವಾಗಿ, ಮೋದಿ ಸರ್ಕಾರವು ಜನರ ಹಣದಿಂದ ರಚಿಸಿದ ಮೂಲಸೌಕರ್ಯಗಳ ಬಹು ದೊಡ್ಡ ಭಾಗವನ್ನು ಖಾಸಗಿ ವ್ಯಕ್ತಿಗಳಿಗೆ ಹಸ್ತಾಂತರಿಸುವ ನೀತಿಯನ್ನು ಪ್ರಕಟಿಸಿದೆ.

ಅದೂ ಅಲ್ಲದೆ, ಮೂಲಸೌಕರ್ಯ ಹೂಡಿಕೆಯು ಸಾಮಾನ್ಯವಾಗಿ ಭೂ ಸ್ವಾಧೀನವನ್ನು ಒಳಗೊಂಡಿರುತ್ತದೆ. ಈ ಭೂ ಸ್ವಾಧೀನ ಪ್ರಕ್ರಿಯೆಯಲ್ಲಿ ಒರಟುತನ ತಲೆ ಹಾಕಿದಾಗ, ಸಾಮಾಜಿಕ ಪ್ರತಿರೋಧ ಎದುರಾಗುತ್ತದೆ. ಆದ್ದರಿಂದ, ಅಂತಹ ಹೂಡಿಕೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವೆ ಒಂದು ಮಟ್ಟದ ಸಹಕಾರದ ಅಗತ್ಯವಿರುತ್ತದೆ. ಆದರೆ, ನರೇಂದ್ರ ಮೋದಿ ಆಡಳಿತವು ಈ ಸಹಕಾರದ ಅಂಶವನ್ನು ಬಹುತೇಕ ಅಸಾಧ್ಯಗೊಳಿಸಿದೆ. ಹಾಗಾಗಿ, ಈ ರೀತಿಯ ಮೂಲಸೌಕರ್ಯ ಹೂಡಿಕೆಯು ಅರ್ಥವ್ಯವಸ್ಥೆಯ ಚೇತರಿಕೆಯನ್ನು ಉತ್ತೇಜಿಸುವ ಒಂದು ಸಾಧನವಾಗಿ ಪರಿಣಾಮಕಾರಿಯಾಗದು.


ಹಾಗಾಗಿ, ಅರ್ಥವ್ಯವಸ್ಥೆಯ ಚೇತರಿಕೆಗಾಗಿ ಎರಡು ಆಯ್ಕೆಗಳು ಉಳಿಯುತ್ತವೆ. ಒಂದು, ಸರ್ಕಾರವು ಕುಟುಂಬಗಳಿಗೆ ನೇರವಾಗಿ ಹಣ ವರ್ಗಾವಣೆ ಮಾಡುವ ಮೂಲಕ ಖಾಸಗಿ ಬಳಕೆಯನ್ನು ಉತ್ತೇಜಿಸಬಹುದು. ಕೊರೊನಾ ನಿಮಿತ್ತದ ಲಾಕ್‌ಡೌನ್‌ನಿಂದ ಉಂಟಾದ ಸಮಸ್ಯೆಗಳನ್ನು ಪರಿಹರಿಸುವ ಸಲುವಾಗಿ ಅರ್ಥಶಾಸ್ತ್ರಜ್ಞರು, ರಾಜಕೀಯ ಪಕ್ಷಗಳು ಮತ್ತು ನಾಗರಿಕ ಸಮಾಜ ಸಂಘಟನೆಗಳು, ಕುಟುಂಬಗಳಿಗೆ ನೇರವಾಗಿ ಹಣ ವರ್ಗಾವಣೆ ಮಾಡುವ ಕ್ರಮವನ್ನು ಬಹಳ ಸಮಯದಿಂದಲೂ ಒತ್ತಾಯಿಸಿವೆ. ಮೂಲತಃ, ಲಾಕ್‌ಡೌನ್ ಸಮಯದಲ್ಲಿ ಜನರು ಇದ್ದಕ್ಕಿದ್ದಂತೆ ತಮ್ಮ ಆದಾಯದ ಮೂಲಗಳನ್ನು ಕಳೆದುಕೊಂಡಿದ್ದರಿಂದ, ಕುಟುಂಬಗಳಿಗೆ ನೇರ ವರ್ಗಾವಣೆ ಮಾಡುವಂತೆ ಒತ್ತಾಯಿಸಲಾಯಿತು. ಆ ಪರಿಸ್ಥಿತಿ ಹಿಂದಕ್ಕೆ ಸರಿದಿದೆಯಾದರೂ ವರ್ಗಾವಣೆಗಳ ಅಗತ್ಯವೇನೂ ಕಡಿಮೆಯಾಗಿಲ್ಲ. ಏಕೆಂದರೆ, ಜನರು ಸಾಲ ಮಾಡುವ ಮೂಲಕ ಆ ಸಮಯದಲ್ಲಿ ತಮ್ಮ ತೊಂದರೆಗಳನ್ನು ನಿಭಾಯಿಸಿಕೊಂಡರು. ಈ ಸಾಲಗಳು ಅವರ ತಲೆಯ ಮೇಲೆ ತೂಗಾಡುವ ಕತ್ತಿಯಂತೆ ನೇತಾಡುತ್ತಿವೆ. ಆದ್ದರಿಂದ, ಅವರು ತಮ್ಮ ಸಾಲ ತೀರಿಸುವ ಸಲುವಾಗಿ ಹೊಟ್ಟೆ-ಬಟ್ಟೆ ಕಟ್ಟಿ ತಮ್ಮ ಬಳಕೆಯನ್ನು ಕಡಿಮೆ ಮಾಡಿಕೊಳ್ಳುವ ಅನಿವಾರ್ಯಕ್ಕೆ ಒಳಗಾಗಿದ್ದಾರೆ. ಹಾಗಾಗಿ, ಲಾಕ್‌ಡೌನ್ ಇಲ್ಲದಿದ್ದರೆ ಬಳಕೆಯು ಯಾವ ಮಟ್ಟದಲ್ಲಿರುತ್ತಿತ್ತೋ ಅದೇ ಮಟ್ಟದ ಬಳಕೆಯನ್ನು ಲಾಕ್‌ಡೌನ್ ನಂತರದ ಅವಧಿಯಲ್ಲಿ ಇರುವಂತೆ ನೋಡಿಕೊಳ್ಳಲು ನೇರ ವರ್ಗಾವಣೆಗಳು ಅಗತ್ಯವಾಗುತ್ತವೆ. ಆದ್ದರಿಂದ, ಕೇಂದ್ರ ಸರ್ಕಾರವು ಆದಾಯ ತೆರಿಗೆ ವ್ಯಾಪ್ತಿಯಿಂದ ಹೊರಗಿರುವವರಿಗೆ, ತಿಂಗಳಿಗೆ 7,500 ರೂ.ಗಳಂತೆ ಕೆಲವು ತಿಂಗಳುಗಳ ಕಾಲವಾದರೂ ವರ್ಗಾಯಿಸಬೇಕೆಂಬ ಬೇಡಿಕೆಯನ್ನು ಈಡೇರಿಸಿದರೆ, ಬಳಕೆಯ ಕೊರತೆಯನ್ನು ನಿವಾರಿಸಬಹುದು.


ಈ ರೀತಿಯ ನೇರ ವರ್ಗಾವಣೆಗಳಿಂದ ಉಂಟಾಗುವ ಇನ್ನೂ ಹೆಚ್ಚಿನ ಪ್ರಯೋಜನವೆಂದರೆ, ಫಲಾನುಭವಿ ಕುಟುಂಬಗಳು ಬಳಸುವ ವಸ್ತುಗಳು ಬಹುತೇಕ ಕಿರು-ಉತ್ಪಾದನಾ ವಲಯದಲ್ಲಿ ಅಥವಾ ಸಣ್ಣ ಬಂಡವಾಳ ವಲಯದಲ್ಲಿ ಉತ್ಪಾದನೆ ಯಾಗುವುದರಿಂದ ಮತ್ತು ನೋಟು ರದ್ದತಿ ಮತ್ತು ಸರಕು ಮತ್ತು ಸೇವಾ ತೆರಿಗೆಯಂತಹ ಕ್ರಮಗಳಿಂದಾಗಿ ಇನ್ನೂ ಸೊರಗುತ್ತಿರುವ ಈ ವಲಯಗಳು ಚೇತರಿಸಿಕೊಳ್ಳುತ್ತವೆ ಮತ್ತು ಉದ್ಯೋಗಗಳೂ ದೊಡ್ಡ ಪ್ರಮಾಣದಲ್ಲಿ ಸೃಷ್ಟಿಯಾಗುತ್ತವೆ. ಈ ಮೂಲಕವಾಗಿ ಎರಡನೆಯ ಮತ್ತು ಮೂರನೆಯ ಸುತ್ತಿನ ಬಳಕೆಯ ವೆಚ್ಚಗಳು ಅರ್ಥವ್ಯವಸ್ಥೆಯಲ್ಲಿ ಚೇತರಿಕೆ ಮೂಡಿಸುತ್ತವೆ.

ಈ ವರ್ಗಾವಣೆಯ ಕಾರ್ಯಕ್ರಮದಲ್ಲಿ ಮಾಡಬೇಕಿರುವ ಮತ್ತೊಂದು ಬದಲಾವಣೆ ಎಂದರೆ, ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಗೆ ಒದಗಿಸುವ ವೆಚ್ಚವನ್ನು ಹೆಚ್ಚಿಸುವುದು. ಆದರೆ, ಈ ಉದ್ಯೋಗ ಖಾತ್ರಿ ಯೋಜನೆಯು ಪ್ರತಿ ಕುಟುಂಬದ ಒಬ್ಬ ವ್ಯಕ್ತಿಗೆ ಮಾತ್ರ ಅದೂ ಕೂಡ ಗರಿಷ್ಠ 100 ದಿನಗಳ ಅವಧಿಗೆ (ಇಷ್ಟನ್ನೂ ಒದಗಿಸಲಿಲ್ಲ), ಉದ್ಯೋಗ ಒದಗಿಸುವ ಸೀಮಿತ ವ್ಯಾಪ್ತಿ ಹೊಂದಿರುವುದನ್ನು ಗಮನಿಸಿದರೆ, ಈ ಯೋಜನೆಯು ಸಂಪೂರ್ಣವಾಗಿ ಅಸಮರ್ಪಕವಾಗಿದೆ ಎಂಬುದು ಸ್ಪಷ್ಟವಾಗುತ್ತದೆ. ಆದ್ದರಿಂದ, ಈ ಯೋಜನೆಗೆ ಪೂರಕವಾಗಿ ನೇರ ನಗದು ವರ್ಗಾವಣೆಯನ್ನೂ ಮಾಡಬೇಕಾಗುತ್ತದೆ. ಬಳಕೆಯ ಅಂಶವು ಜಿಡಿಪಿಯಲ್ಲಿ 55% ಭಾಗದ ಪಾಲು ಹೊಂದಿರುವುದರಿಂದ, ಜಿಡಿಪಿಯ 1% ಬಳಕೆಯ ಹೆಚ್ಚಳಕ್ಕೂ ಸುಮಾರು 2 ಲಕ್ಷ ಕೋಟಿ ರೂ ಹಣದ (ಅಥವಾ ಖರ್ಚುಗಳ) ಅಗತ್ಯವಿದೆ. ಮತ್ತೊಂದೆಡೆ, ಬಜೆಟ್ ನಿಗದಿಪಡಿಸಿದ್ದಕ್ಕಿಂತ ಅಧಿಕವಾಗಿ ನವೆಂಬರ್ ಅಂತ್ಯದಲ್ಲಿ ಘೋಷಿಸಲಾದ ಕೇವಲ 22,000 ಕೋಟಿಗಳ ಹೆಚ್ಚಳದ ಮೊತ್ತವು ಬಳಕೆಯ ಹೆಚ್ಚಳಕ್ಕೆ ಬೇಕಾಗಿದ್ದ ಮೊತ್ತದ ಹತ್ತನೇ ಒಂದು ಭಾಗದಷ್ಟಾಗುತ್ತದೆ. ಹೀಗಾಗಿ, ಯೋಜನೆಯ ವ್ಯಾಪ್ತಿಯನ್ನು ಹೆಚ್ಚಿಸದ ಹೊರತು, ಬಳಕೆಯನ್ನು ಹೆಚ್ಚಿಸುವ ಉದ್ದೇಶಕ್ಕಾಗಿ ಈ 22,000 ಕೋಟಿಗಳ ಮೊತ್ತವು ಸಾಲುವುದಿಲ್ಲ.

ಅರ್ಥವ್ಯವಸ್ಥೆಯ ಚೇತರಿಕೆಗಾಗಿ ಉಳಿದ ಎರಡನೆಯ ಆಯ್ಕೆ ಎಂದರೆ, ಸರ್ಕಾರದ ವೆಚ್ಚಗಳನ್ನು ಗಣನೀಯ ಪ್ರಮಾಣದಲ್ಲಿ ಹೆಚ್ಚಿಸುವುದು. ಆರೋಗ್ಯ ರಕ್ಷಣೆ, ಶಿಕ್ಷಣ ಮತ್ತು ಇತರ ಸಾಮಾಜಿಕ ಸೇವೆಗಳ ಮೇಲಿನ ವೆಚ್ಚಗಳನ್ನು ಹೆಚ್ಚಿಸಬೇಕಾಗುತ್ತದೆ. ಭೌತಿಕ ಮೂಲಸೌಕರ್ಯಗಳ ಮೇಲೆ ಮಾಡುವ ಹಲವು ರೀತಿಯ ವೆಚ್ಚಗಳಿಗಿಂತ ಭಿನ್ನವಾಗಿ ಆರೋಗ್ಯ, ಶಿಕ್ಷಣ ಮುಂತಾದ ಸಾಮಾಜಿಕ ಸೇವೆಗಳ ಮೇಲಿನ ವೆಚ್ಚಗಳನ್ನು ಜನರು ಸ್ವಾಗತಿಸುತ್ತಾರೆ. ಈ ಸೇವೆಗಳು ಜನರ ಜೀವನ ಮಟ್ಟವನ್ನು ಸುಧಾರಿಸುವ ಪರಿಣಾಮ ಹೊಂದಿವೆ. ಆದರೆ, ಇಲ್ಲಿಯೂ ಸಹ, ಮೋದಿ ಸರ್ಕಾರವು ಶಿಕ್ಷಣ ಮತ್ತು ಆರೋಗ್ಯ ರಕ್ಷಣೆಯನ್ನು ಖಾಸಗೀಕರಣಗೊಳಿಸುವಲ್ಲಿ ನಿರತವಾಗಿದೆ. ಹಾಗಾಗಿ, ಸರ್ಕಾರ ತನ್ನ ದಿಕ್ಕಥವನ್ನು ಬದಲಾಯಿಸುವ ಮತ್ತು ಈ ಸೇವೆಗಳಿಗೆ ವೆಚ್ಚವನ್ನು ಇದ್ದಕ್ಕಿದ್ದಂತೆ ಹೆಚ್ಚಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ಪುಟ 15 ನೋಡಿ





ಮಾಧ್ಯಮ ಕ್ಷೇತ್ರದ ಬೆಳವಣಿಗೆಗಳು: 2018–21– ಭಾಗ–1
ಮಾಧ್ಯಮಗಳು ಆಳುವವರ ಬೇಟೆನಾಯಿಗಳಾದ ಅವಧಿ

ಸಿಪಿಐ(ಎಂ) ಕರ್ನಾಟಕ 23ನೆಯ ರಾಜ್ಯ ಸಮ್ಮೇಳನದ ಸಂದರ್ಭದಲ್ಲಿ 22ನೆಯ ಸಮ್ಮೇಳನದ ನಂತರದ ಅವಧಿಯಲ್ಲಿ ವಿವಿಧ ಕ್ಷೇತ್ರಗಳಲ್ಲಿನ ಬೆಳವಣಿಗೆಗಳ ಕುರಿತ ಲೇಖನಗಳ ಸರಣಿಯ ಭಾಗವಾಗಿ, ಈ ಅವಧಿಯ ಮಾಧ್ಯಮ ಕ್ಷೇತ್ರದ ಬೆಳವಣಿಗೆಗಳನ್ನು ಇಲ್ಲಿಕೊಡಲಾಗಿದೆ. ಈ ಭಾಗ–1 ರಲ್ಲಿ ಬಹುಪಾಲು ಮಾಧ್ಯಮಗಳು ಆಳುವವರ ಬೇಟೆನಾಯಿಗಳಾದ ಪ್ರಮುಖ ಬೆಳವಣಿಗೆ ಮತ್ತಿತರ ಬೆಳವಣಿಗೆಗಳ ನಿರೂಪಣೆಯಿದೆ. ಇಲ್ಲಿ ಕೊನೆಯಲ್ಲಿ ನಿರೂಪಿಸಲಾಗಿರುವ ವೆಬ್ ಸಂಪರ್ಕ ವಿಸ್ತಾರದ ಪರಿಣಾಮವಾಗಿ ಮಾಧ್ಯಮ ಕ್ಷೇತ್ರದಲ್ಲಿ ಆಗಿರುವ ಮಹತ್ತರ ಬದಲಾವಣೆಗಳ ನಿರೂಪಣೆ ಭಾಗ–2 ರಲ್ಲಿ ಇರುತ್ತದೆ.

ವಸಂತರಾಜ ಎನ್.ಕೆ.

2014ರ ಚುನಾವಣೆಯಲ್ಲಿ ಮತ್ತು ನಂತರದ ಮೂರು ವರ್ಷಗಳ (2014–17) ಅವಧಿಯಲ್ಲಿ ಮೋದಿ ಸರಕಾರದ ಮತ್ತು ಬಿಜೆಪಿಯ ಪ್ರಜಾಪ್ರಭುತ್ವ–ವಿರೋಧಿ, ಜನ–ವಿರೋಧಿ ನಡೆಗಳನ್ನು ಕಾರ್ಪೊರೆಟ್ ಮಾಧ್ಯಮಗಳು ಪ್ರಬಲ ಪ್ರಖರ ಸಮರ್ಥನೆ ಮಾಡಿದ್ದವು. ಹಾಗೂ ಜನರ ಗಮನವನ್ನು ಭಾವನಾತ್ಮಕ ವಿಷಯಗಳತ್ತ (ಕೋಮು ದ್ವೇಷ, ಭಯೋತ್ಪಾದಕ ದಾಳಿ, ಗಡಿಯಲ್ಲಿ ದೇಶದ ಭದ್ರತೆಗೆ ಅಪಾಯ ಇತ್ಯಾದಿ) ಗಮನ ತಿರುಗಿಸುವ ಕೆಲಸ ಮಾಡಿದ್ದವು. ಇದರಿಂದಾಗಿ ಮುಖ್ಯವಾಹಿನಿ ಮಾಧ್ಯಮವನ್ನು 'ಗೋದಿ ಮೀಡಿಯಾ' (ಆಳುವವರ ಮಡಿಲ್ಲಲಿರುವ ಮುದ್ದಿನ ನಾಯಿ) ಎಂದು ಜನ ಕರೆಯಲಾರಂಭಿಸಿದ್ದರು. ಆದರೆ ಕಳೆದ ರಾಜ್ಯ ಸಮ್ಮೇಳನ ನಂತರದ ಅವಧಿಯಲ್ಲಿ (2018–2021) ಅವು ಸರಕಾರದ ಆಳುವ ಪಕ್ಷದ ಸಮರ್ಥನೆಗೆ ಮಾತ್ರ ಸೀಮಿತಗೊಳ್ಳದೆ, ಈ ನಡೆಗಳ ಬಗ್ಗೆ ಉಸಿರೆತ್ತುವ ಎಲ್ಲ ವ್ಯಕ್ತಿ, ಚಳುವಳಿ, ಶಕ್ತಿ, ಸಂಘಟನೆ, ಪಕ್ಷಗಳ ವಿರುದ್ಧ ಅಪಪ್ರಚಾರ, ನಿಂದನೆ ಮಾಡುವುದು ಹಾಗೂ ಅವರ ಸಾರ್ವಜನಿಕ ಬೇಟೆಯಾಡುತ್ತಿವೆ. ಹಾಗಾಗಿ ಅವುಗಳನ್ನು ಆಳುವವರ 'ಬೇಟೆ ನಾಯಿ' ಎಂದು ಕರೆಯುವುದು ಹೆಚ್ಚು ಸೂಕ್ತ. ಆಳುವವರ 'ಮುದ್ದಿನ ನಾಯಿ' 'ಬೇಟೆ ನಾಯಿ'ಯಾಗಿರುವುದು ಹೊಸ ಬೆಳವಣಿಗೆ. ಮಾಧ್ಯಮ ಪ್ರಜಾಸತ್ತಾತ್ಮಕ ವ್ಯವಸ್ಥೆಯ ಮೂರು ಅಂಗಗಳ ಮೇಲೆ ಕಣ್ಗಾವಲು ಇಡುವ 'ನಾಲ್ಕನೇ ಅಂಗ'ವಾಗಿಸುವ ಸಾಂವಿಧಾನಿಕ ಆಶಯವನ್ನು ಬುಡಮೇಲು ಮಾಡುವುದು, ಪ್ರಜಾಸತ್ತಾತ್ಮಕ ಭಿನ್ನಮತಕ್ಕೆ ಯಾವುದೇ ವೇದಿಕೆ ದೊರಕದಂತೆ ಮಾಡುವುದು ಇವುಗಳ ಹಿಂದಿರುವ ಉದ್ದೇಶ.

ಮಾಧ್ಯಮ ಬಹುತ್ವ ಮತ್ತು ಸ್ವಾತಂತ್ರ್ಯಕ್ಕೆ ಧಕ್ಕೆ

2018ರ ಹೊತ್ತಿಗೆನೇ ಅಂಬಾನಿಯ ನೆಟ್‌ವರ್ಕ್ 18 ಮಾತ್ರವಲ್ಲ, ಟೈಮ್ಸ್, ಸನ್, ಝಿ, ಸ್ಟಾರ್, ಏಶ್ಯಾನೆಟ್, ಮುಂತಾದ ದೈತ್ಯ ಕಾರ್ಪೊರೇಟುಗಳು ಇಂಗ್ಲಿಷ್, ಹಿಂದಿ ಮಾತ್ರವಲ್ಲ ವಿವಿಧ ಭಾಷೆಗಳ ಪ್ರದೇಶಗಳ ವಿವಿಧ ಪ್ರಕಾರಗಳ ಮಾಧ್ಯಮಗಳಲ್ಲಿ ಏಕಸ್ವಾಮ್ಯ ಸಾಧಿಸಿದ್ದವು. ಪ್ರತಿಯೊಂದು ಭಾಷೆಯ ಪ್ರಿಂಟ್ ಪತ್ರಿಕೆ, ಟಿವಿ, ರೇಡಿಯೊ, ವೆಬ್ ತಾಣಗಳಲ್ಲಿ ಸಹ ಕೆಲವೇ ಕಂಪನಿಗಳ ಏಕಸ್ವಾಮ್ಯ, ಯಜಮಾನಿಕೆ ಇದೆ. ಈ ದೈತ್ಯ ಕಾರ್ಪೊರೇಟುಗಳ ಏಕಸ್ವಾಮ್ಯ ಈ ಅವಧಿಯಲ್ಲಿ (2018–21) ಇನ್ನಷ್ಟು ಹೆಚ್ಚಿದೆ. ಇದರಾಚೆಗೆ ಇರುವ ಸ್ವತಂತ್ರ ಸಣ್ಣ–ಮಧ್ಯಮ ಮಾಧ್ಯಮ ಕಂಪನಿಗಳ ಪ್ರಮಾಣ ಇನ್ನಷ್ಟು ಕುಗ್ಗಿದೆ. ಮಾಧ್ಯಮಗಳ ಒಡೆತನದಲ್ಲಿ ಮಾತ್ರವಲ್ಲ ಪ್ರತಿ ರಾಜ್ಯದಲ್ಲೂ ಭಾಷೆಯಲ್ಲೂ ಹಲವು ಪತ್ರಿಕೆಗಳು, ಟಿವಿ ಚಾನೆಲುಗಳು, ರೇಡಿಯೋ ಸ್ಟೇಶನುಗಳು ಇದ್ದರೂ ಒಂದೆರಡು ಪತ್ರಿಕೆ, ಟಿವಿ ಚಾನೆಲುಗಳಲ್ಲಿ ಅರ್ಧಕ್ಕಿಂತಲೂ ಹೆಚ್ಚು ನೋಡುಗ/ಕೇಳುಗ./ಓದುಗರನ್ನು ಬಾಚಿಕೊಂಡಿರುತ್ತದೆ. ಈ ಎರಡೂ ಏಕಸ್ವಾಮ್ಯಗಳನ್ನು ತಡೆಯಲು ಬೇಕಾಗಿರುವ ಕಾನೂನು ನಿಬಂಧನೆಗಳನ್ನು ಉದಾರೀಕರಣದ ಹೆಸರಲ್ಲಿ ಸಡಿಸಲಾಗಿದೆ. ಮಾಧ್ಯಮಗಳ ಒಡೆತನದ ಮತ್ತು ಫಂಡಿಂಗ್ ಬಗ್ಗೆ ಪೂರ್ಣ ಪಾರದರ್ಶಕತೆ, ವಿದೇಶೀ ಹೂಡಿಕೆಯ ಮೇಲೆ ನಿರ್ಬಂಧ, ಭಿನ್ನ ಮಾಧ್ಯಮಗಳ (ಉದಾ: ಟಿವಿ ಕಂಪನಿಗೆ ಪತ್ರಿಕೆಯ) ಒಡೆತನಕ್ಕೆ ನಿಷೇಧ, ಮಾಧ್ಯಮ ಕಂಪನಿಗಳಲ್ಲಿ ಒಡೆತನ/ಫಂಡಿಂಗ್ ಮೂಲಕ ರಾಜಕೀಯ ಪಕ್ಷಗಳ ನಿಯಂತ್ರಣದ ಕುರಿತು ನಿಬಂಧನೆಗಳು – ಇವೆಲ್ಲ ಬಹುತ್ವ ಇರುವ ಸ್ವತಂತ್ರ ಮಾಧ್ಯಮಕ್ಕೆ ಅಗತ್ಯ ಎಂದು ಪರಿಗಣಿಸಲಾಗುತ್ತದೆ. ಇವುಗಳ ಅಭಾವದಿಂದ



ಮಾಧ್ಯಮದ ಬಹುತ್ವ ಮತ್ತು ಸ್ವಾತಂತ್ರ್ಯಕ್ಕೆ ಧಕ್ಕೆ ಬಂದಿದೆ.

ಹೆಚ್ಚು ಕಡಿಮೆ ಎಲ್ಲಾ ಮಾಧ್ಯಮಗಳು ಆಳುವ ಪಕ್ಷಕ್ಕೆ ಮಾತ್ರವಲ್ಲ, ಸಂಘ ಪರಿವಾರಕ್ಕೆ ಬೋ ಪರಾಕು ಹೇಳುವುದರಲ್ಲಿ ಸ್ಪರ್ಧಿಸುವ, ಎಲ್ಲ ಭಿನ್ನಮತೀಯರ ವಿರೋಧ ಪಕ್ಷಗಳ ಬೇಟೆಯಾಡುವಲ್ಲಿ ಪೈಪೋಟಿ ನಡೆಸುವ ಬೇಟೆ ನಾಯಿಗಳಾಗಿ ಬಿಟ್ಟಿವೆ. ಸಿಎಎ–ಎನ್.ಆರ್.ಸಿ ಪ್ರತಿಭಟನೆಗಳು, ಚುನಾವಣೆಗಾಗಿ ಕೋಮು ಗಲಭೆಗಳು ಮತ್ತು ಧ್ರುವೀಕರಣ, ಕುಸಿಯುತ್ತಿರುವ ಆರ್ಥಿಕತೆ, ಅಗಾಧ ನಿರುದ್ಯೋಗ, ಕೊವಿದ್ ಮಹಾಸೋಂಕಿನಿಂದ ಆದ ಮಹಾವಲಸೆ, ಭಾರೀ ಸಾವು–ನೋವುಗಳನ್ನು ನಿಭಾಯಿಸುವುದರಲ್ಲಿ ಭೀಕರ ವೈಫಲ್ಯಗಳು, ಪರಿಹಾರ ಕ್ರಮಗಳಿಗೆ ನಿರಾಕರಣೆ, ಕಾರ್ಮಿಕ–ರೈತ ವಿರೋಧಿ ಕರಾಳ ಕಾನೂನುಗಳು, ದೇಶದ ಸಾರ್ವಜನಿಕ ಆಸ್ತಿಯನ್ನು ಮಾರಾಟಕ್ಕಿಟ್ಟಿರುವ ಮತ್ತಿತರ ಎಲ್ಲಾ ಜನ–ವಿರೋಧಿ ನೀತಿಗಳನ್ನು ಕುರುಡಾಗಿ ಬೆಂಬಲಿಸುತ್ತಿವೆ. ಟಿವಿ ಮಾಧ್ಯಮದಷ್ಟು ಪತ್ರಿಕೆಗಳು ಮಾರಿಕೊಳ್ಳದಿದ್ದರೂ ಸರಕಾರದ ಕ್ರಮಗಳ ನೀತಿಗಳನ್ನು ವಸ್ತುನಿಷ್ಟವಾಗಿ ವಿಮರ್ಶಾತ್ಮಕವಾಗಿ ನೋಡುವುದಕ್ಕೆ ಬರೆಯುವುದಕ್ಕೆ ಹೆದರುತ್ತಿವೆ. ತುರ್ತು ಪರಿಸ್ಥಿತಿ ಅವಧಿ ಸೇರಿದಂತೆ ಹಿಂದೆಂದೂ ಮಾಧ್ಯಮಗಳು ಇಷ್ಟು ಕೆಳಮಟ್ಟಕ್ಕೆ ಹೋಗಿರಲಿಲ್ಲ.

ಕನ್ನಡ ಟಿವಿ ಚಾನೆಲುಗಳು

ಕರ್ನಾಟಕದಲ್ಲೂ ಅಂಬಾನಿ, ಸನ್, ಝಿ, ಏಶ್ಯಾನೆಟ್ ಟಿವಿ ಮಾಧ್ಯಮದ ಬಹುಭಾಗದ ಮೇಲೆ ಹಿಡಿತ ಸಾಧಿಸಿವೆ. ಇಲ್ಲೂ ಬಿಜೆಪಿ ಸಂಘ ಪರಿವಾರಗಳ ತುತ್ತೂರಿಯಾಗಿವೆ ಚಾನೆಲುಗಳಲ್ಲೂ ಎಡ–ಪ್ರಜಾಸತ್ತಾತ್ಮಕ ನಿಲುವುಗಳಿಗೆ ಸ್ಥಳ ಕಿರಿದಾಗುತ್ತಾ ಇಲ್ಲವೇ ಇಲ್ಲ ಎನ್ನುವ ಪರಿಸ್ಥಿತಿಗೆ ಬಂದಿದೆ. ಕರ್ನಾಟಕದಲ್ಲಿ ಈಗ ಒಟ್ಟು ರಾಜ್ಯ ಮಟ್ಟದ 44 ಟಿವಿ ಚಾನೆಲುಗಳು ಮತ್ತು ದೊಡ್ಡ ಸಂಖ್ಯೆಯ (ಜಿಲ್ಲೆಗೆ ಸರಾಸರಿ 5–6 ರಂತೆ) ಸ್ಥಳೀಯ ಚಾನೆಲುಗಳು ಇವೆ. ಇವುಗಳಲ್ಲಿ ಒಟ್ಟು 9 ಸುದ್ದಿ ಚಾನೆಲುಗಳು ಇವೆ. 6 ಸುದ್ದಿ ಚಾನೆಲುಗಳು ದೈತ್ಯರಾಷ್ಟ್ರೀಯ ಜಾಲಗಳ ಮತ್ತು 3 ಪ್ರಬಲ ರಾಜಕಾರಣಿಗಳ/ಉದ್ಯಮಿಗಳ ಒಡೆತನದಲ್ಲಿ ಇದೆ. ಸುದ್ದಿ, ವಿಶ್ಲೇಷಣೆಗಳ ಮಟ್ಟ ದಿನೇ ಕೆಳಕ್ಕೆ ಹೋಗುತ್ತಿದ್ದು ಚರ್ಚೆಯ ಹೆಸರಲ್ಲಿ ಅರಚಾಟವೇ ಪ್ರಧಾನವಾಗಿ ಬಿಟ್ಟಿದೆ. "ಮನೋರಂಜನೆ" ಚಾನೆಲುಗಳ ಸಾಂಸ್ಕೃತಿಕ ಮಟ್ಟವೂ ಕುಸಿಯುತ್ತಿದ್ದು ರಿಯಾಲಿಟಿ ಶೋ, ಮೂಢನಂಬಿಕೆ ಪ್ರಧಾನ, ಜನಜೀವನಕ್ಕೆ ದೂರವಾದ ಅಸಹಜ ಕೃತ್ರಿಮ ಪ್ರತಿಗಾಮಿ ಧೋರಣೆ ಬಿತ್ತುವ ಸಾಮಾಜಿಕ ಧಾರಾವಾಹಿಗಳ ಭರಾಟೆ ಇನ್ನಷ್ಟು ಹೆಚ್ಚಾಗಿದೆ. ಕರ್ನಾಟಕದ ಮೂರರಲ್ಲಿ ಎರಡು ಮನೆಗಳಲ್ಲಿ ಟಿವಿ ಇದ್ದು ಇದು ಇನ್ನೂ ಪ್ರಬಲ ಮಾಧ್ಯಮವಾಗಿದೆ. ಟಿವಿ ಸುದ್ದಿಗಳ ವಿಶ್ವಾಸಾರ್ಹತೆ ಕಡಿಮೆಯಾಗುತ್ತಿದ್ದರೂ ಇನ್ನೂ ರಾಜಕೀಯ ಪ್ರಚಾರದ ಮುಖ್ಯ ಸಾಧನವಾಗಿ ಮುಂದುವರೆದಿದೆ.

ಕನ್ನಡ ಪ್ರಿಂಟ್ ಪತ್ರಿಕೆಗಳ ಪ್ರಸಾರ ಕುಸಿಯುತ್ತಿದೆ

ಎಬಿಸಿ (ಆಡಿಟ್ ಬ್ಯುರೊ ಆಫ್ ಸರ್ಕುಲೇಶನ್) ಜೂನ್–ಡಿಸೆಂಬರ್ 2019 ಸಮೀಕ್ಷೆ ಪ್ರಕಾರ ಕನ್ನಡ ದೈನಿಕ ಪತ್ರಿಕೆಗಳ ಒಟ್ಟು 44 ಆವೃತ್ತಿಗಳಿದ್ದು ಒಟ್ಟು ಪ್ರಸಾರ 24.13 ಲಕ್ಷಇದೆ. 2016 ರಲ್ಲಿದ್ದ 30 ಲಕ್ಷದಿಂದ ಇದು ಸಾಕಷ್ಟು ಕುಸಿದಿದೆ. ವಿಜಯ ಕರ್ನಾಟಕ, ವಿಜಯವಾಣಿ, ಪ್ರಜಾವಾಣಿ, ಉದಯವಾಣಿ, ಕನ್ನಡಪ್ರಭ ಅನುಕ್ರಮವಾಗಿ ಅತಿ ಹೆಚ್ಚು ಪ್ರಸಾರ ಇರುವ 5 ಪತ್ರಿಕೆಗಳು. 2020ರ ಎಬಿಸಿ ಪ್ರಸಾರದ ಮಾಹಿತಿ ಲಭ್ಯವಿಲ್ಲ (ಬಹುಶಃ ಕೊವಿದ್ ನಿಂದಾಗಿ ಸಮೀಕ್ಷೆ ಮಾಡಲಾಗಿಲ್ಲ). ಆದರೆ ಇ.ವೈ–ಫಿಕ್ಕಿ (EY-FICCI) ಸಮೀಕ್ಷೆ ಪ್ರಕಾರ ಭಾರತೀಯ ಭಾಷೆ ಪತ್ರಿಕೆಗಳ ಪ್ರಸಾರ 2020ರಲ್ಲಿ ಕೊವಿದ್ ಪರಿಣಾಮವಾಗಿ ಸರಾಸರಿಯಾಗಿ 20% ರಷ್ಟು ಪ್ರಸಾರ ಕುಸಿದಿತ್ತು, ಇಂಗ್ಲಿಷ್ ಪತ್ರಿಕೆಗಳ ಪ್ರಸಾರ 45%ರಷ್ಟು ಕುಸಿದಿತ್ತು. ಜಾಹೀರಾತು ಆದಾಯ ಶೇ.40 ರಷ್ಟು ಕುಸಿದಿತ್ತು. ಸಮೀಕ್ಷೆಯ ಪ್ರಕಾರ 2021 ಮತ್ತು 2022ರಲ್ಲಿ ಈ ಪ್ರಸಾರದ ನಷ್ಟ ತುಂಬಿ, 2023ರಲ್ಲಿ ಮಾತ್ರ 2019ರ ಮಟ್ಟಕ್ಕಿಂತ ಪ್ರಸಾರ ಹೆಚ್ಚಬಹುದು.

ದೊಡ್ಡ ಜಾಹೀರಾತಿಗೂ, ಸುದ್ದಿಯ ಪ್ರಧಾನ ವಿಶ್ವಾಸಾರ್ಹ ಮೂಲವಾಗಿ ಉಳಿಯಲು, ಜನಮನವನ್ನು ಪ್ರಭಾವಿಸುವ ಅವಕಾಶಕ್ಕೆ – ಟಿವಿ ಜತೆ ಪೈಪೋಟಿ ಮಾಡಬೇಕಾದ ಪತ್ರಿಕೆಗಳು ಪ್ರಧಾನ ಮಾಧ್ಯಮದ ಸ್ಥಾನ ಯಾವಾಗಲೋ ಕಳೆದುಕೊಂಡಿವೆ. ಟಿವಿ ಜತೆ ಪೈಪೋಟಿಗಿಳಿದು ಅಭಿಪ್ರಾಯಗಳಲ್ಲಿ ಬಹುತ್ವದ ಬದಲು ಆಳುವವರಿಗೆ ಪ್ರಿಯವಾಗುವ ಏಕಾಭಿಪ್ರಾಯಕ್ಕೆ, ಜನ–ಮರುಳು ರೋಚಕತೆಗೆ, ಉದ್ರೇಕಕ್ಕೆ ಪ್ರಾಮುಖ್ಯತೆ ಕೊಡುತ್ತಿವೆ. ಆದರೂ ಮೊದಲಿಗಿಂತ ದುರ್ಬಲವಾಗುತ್ತಿದ್ದರೂ, ಸ್ವಲ್ಪ ಮಟ್ಟಿಗಾದರೂ ಸುದ್ದಿ–ವಿಶ್ಲೇಷಣೆಗಳಲ್ಲಿ ವಿಶ್ವಾಸಾರ್ಹತೆ ಉಳಿಸಿಕೊಂಡಿವೆ, ಜನರನ್ನು ತಟ್ಟುವ ವಿಷಯಗಳ ಬಗ್ಗೆ ಸ್ಪಂದಿಸುತ್ತಿವೆ, ಸೆಕ್ಯುಲರ್ ಎಡ–ಪ್ರಜಾಸತ್ತಾತ್ಮಕ ಶಕ್ತಿಗಳಿಗೆ ಸ್ವಲ್ಪವಾದರೂ ಅವಕಾಶ ಕೊಡುತ್ತಿವೆ.

ಎಬಿಸಿ (ಆಡಿಟ್ ಬ್ಯುರೊಆಫ್ ಸರ್ಕುಲೇಶನ್) ಜೂನ್–ಡಿಸೆಂಬರ್ 2019 ಸಮೀಕ್ಷೆ ಪ್ರಕಾರ ಕನ್ನಡ ಮ್ಯಾಗಜೀನ್ (ವಾರಪತ್ರಿಕೆ, ಮಾಸಿಕ ಇತ್ಯಾದಿ) ಗಳ ಒಟ್ಟು ಪ್ರಸಾರ 1.81 ಲಕ್ಷಇದೆ. ಇದು 2016ರಲ್ಲಿ 2.8 ಲಕ್ಷದಿಂದ ಗಮನಾರ್ಹವಾಗಿ ಕುಸಿದಿದೆ. ಇ.ವೈ–ಫಿಕ್ಕಿ (EY-FICCI) ಸಮೀಕ್ಷೆ ಪ್ರಕಾರ ಭಾರತೀಯ ಭಾಷೆ ಮ್ಯಾಗಜೀನ್ ಗಳ ಪ್ರಸಾರ 2020ರಲ್ಲಿ ಕೊವಿದ್ ಪರಿಣಾಮವಾಗಿ ಸರಾಸರಿಯಾಗಿ 50%ರಷ್ಟು ಕುಸಿದಿತ್ತು, ಜಾಹೀರಾತು ಆದಾಯ ಶೇ.40ರಷ್ಟು ಕುಸಿದಿತ್ತು. ಸಮೀಕ್ಷೆಯ ಪ್ರಕಾರ 2021 ಮತ್ತು 2022ರಲ್ಲಿ ಈ ಪ್ರಸಾರದ ನಷ್ಟ ತುಂಬಿ, 2023ರಲ್ಲಿ ಮಾತ್ರ 2019ರ ಮಟ್ಟ ಮುಟ್ಟಬಹುದು. ಈಗ ವಿಕಿಪಿಡಿಯಾ ಪ್ರಕಾರ 19 ಮ್ಯಾಗಜೀನ್ ಗಳು ಪ್ರಕಟವಾಗುತ್ತಿವೆ. ಆ ಪಟ್ಟಿಯಲ್ಲಿ ಇಲ್ಲದ ಹೊಸತು, ಸಂವಾದ, ನ್ಯಾಯಪಥ, ಸಮಾಜಮುಖಿ, ಜನಶಕ್ತಿ, ಕೆಂಬಾವುಟ ಗಳನ್ನು ಸೇರಿಸಿದರೆ ಒಟ್ಟು 25 ಮ್ಯಾಗಜೀನ್ ಗಳು ಪ್ರಕಟವಾಗುತ್ತಿವೆ. ಮ್ಯಾಗಜೀನ್‌ಗಳು ದೊಡ್ಡ ಪತ್ರಿಕಾ ಸಮೂಹದ (ದೈನಿಕದ ಕ್ರಾಸ್ ಸಬ್ಸಿಡಿಯಿಲ್ಲದೆ) ಭಾಗವಲ್ಲದೆ ನಡೆಯಲಾರವು ಎಂಬ ಪರಿಸ್ಥಿತಿ ಇದೆ. ಪ್ರಸಾರದ ಜತೆಗೆ ಮ್ಯಾಗಜೀನ್ ಗಳ ಸಾಂಸ್ಕೃತಿಕ ಸಾಮಾಜಿಕ ರಾಜಕೀಯ ಪ್ರಭಾವವೂ ಕುಗ್ಗಿದೆ.

ಕನ್ನಡ ಸ್ವತಂತ್ರ ಮ್ಯಾಗಝೀನ್‌ಗಳು

ಕನ್ನಡದ ಸ್ವತಂತ್ರ ಮ್ಯಾಗಜಿನ್ ಗಳು, ಅದರಲ್ಲೂ ವಾರಪತ್ರಿಕೆಗಳು ಎದುರಿಸುತ್ತಿರುವ ಬಿಕ್ಕಟ್ಟು ನಮ್ಮಕಣ್ಣ ಮುಂದಿದೆ. ಗೌರಿ ಮೀಡಿಯಾ ಟ್ರಸ್ಟ್ ಅಡಿಯಲ್ಲಿ ಸಾಕಷ್ಟು ಸಂಪನ್ಮೂಲ ಸಂಗ್ರಹಿಸಿ, 'ಗೌರಿ ಲಂಕೇಶ್' ಪತ್ರಿಕೆಯ ಹೊಸ ಅವತಾರವಾಗಿ 'ನ್ಯಾಯಪಥ' ವಾರಪತ್ರಿಕೆ ಆರಂಭವಾಗಿದೆ. 'ಗೌರಿ ಲಂಕೇಶ್' ಪತ್ರಿಕೆಯ ಸಂಪಾದಕೀಯ (ಸೆನ್ಸೇಶನಲಿಸಂ ಕಡಿಮೆ ಮಾಡಿದೆ) ಮತ್ತು ಪ್ರಸಾರ (ಅಂಗಡಿಗಳಲ್ಲಿ ನೇರ ಮಾರಾಟದ ಬದಲು ವಾರ್ಷಿಕ ಚಂದಾ) ಎರಡೂ ನೀತಿಗಳಲ್ಲೂ ಕೆಲವು ಗಮನಾರ್ಹ ಬದಲಾವಣೆಗಳನ್ನು ಮಾಡಿಕೊಂಡು 'ನ್ಯಾಯಪಥ' ಮುನ್ನಡೆಯುತ್ತಿದೆ. 'ಸಮಾಜಮುಖಿ' ಈ ಅವಧಿಯ ಹೊಸ ಮಾಸಿಕವಾಗಿದ್ದು ಉತ್ತಮವಾಗಿ ಬರುತ್ತಿದೆ. ಈ ಅವಧಿಯಲ್ಲಿ ಆರಂಭವಾದ ಸಾಹಿತ್ಯಿಕ ಪತ್ರಿಕೆ 'ಸಂಗಾತ' ಸಹ ಉತ್ತಮವಾಗಿ ಬರುತ್ತಿದೆ. ಆದರೆ ಇವುಗಳ ಪ್ರಸಾರದ ಕುರಿತು ಮಾಹಿತಿಯಿಲ್ಲ.

ಸುದ್ದಿ ವೆಬ್/ಟಿವಿಗಳಲ್ಲಿ ಕ್ಷಣ ಕ್ಷಣಕ್ಕೂ ಸುದ್ದಿ, ದಿನಪತ್ರಿಕೆಗಳಲ್ಲಿ ವಿವರವಾದ ಸುದ್ದಿ ಮತ್ತು ಸಾಕಷ್ಟು ವಿಶ್ಲೇಷಣೆಯೂ ದೊರೆಯುತ್ತದೆ ಹಾಗೂ ದೊಡ್ಡ ಪತ್ರಿಕಾ ಸಮೂಹದ ಭಾಗವಾಗಿರುವ ವಾರಪತ್ರಿಕೆ/ಮ್ಯಾಗಜೀನುಗಳು ಕತೆ–ಕವನ ಲೇಖನಗಳನ್ನು ಕೊಡುತ್ತವೆ. ಹಾಗಾಗಿ ಸ್ವತಂತ್ರ ವಾರಪತ್ರಿಕೆಗಳು ಆಳವಾದ ವಿಶ್ಲೇಷಣೆಯನ್ನು ಮತ್ತು ಇತರ ಮ್ಯಾಗಜೀನುಗಳು ಕೊಡದ ಆದರೆ ತಮ್ಮ ನಿರ್ದಿಷ್ಟ ಓದುಗರಿಗೆ ಬೇಕಾದ್ದನ್ನು ಕೊಡಬೇಕಾಗುತ್ತದೆ. ರಾಜ್ಯ ಮಟ್ಟದ ಸ್ವತಂತ್ರ ವಾರಪತ್ರಿಕೆಗಳು ಹೀಗೆ ಅಸ್ತಿತ್ವದ ಬಿಕ್ಕಟ್ಟು ಎದುರಿಸುತ್ತಿದ್ದರೂ, ಜಿಲ್ಲಾ/ತಾಲೂಕು ಮಟ್ಟದ ಸ್ಥಳೀಯ (ದಿನಪತ್ರಿಕೆಗಳು ಸೇರಿದಂತೆ) ಪತ್ರಿಕೆಗಳು ಸಂಖ್ಯೆಯಲ್ಲೂ ಪ್ರಸಾರದಲ್ಲೂ ಹೆಚ್ಚುತ್ತಿರುವಂತೆ ಕಾಣುತ್ತದೆ. ಆದರೆ ಈ ಬಗ್ಗೆ ನಿಖರವಾದ ಮಾಹಿತಿ ಇಲ್ಲ. ಎಡಪಂಥೀಯ ಪತ್ರಿಕೆಗಳಾದ ಜನಶಕ್ತಿ, ಕೆಂಬಾವುಟ, ಹೊಸತು– ಇವು ಈ ಎಲ್ಲ ಕಷ್ಟಗಳನ್ನು ಎದುರಿಸುತ್ತಿದ್ದರೂ ಪ್ರಕಟಣೆ ಮುಂದುವರೆಸಿವೆ.

ವೆಬ್ ಸಂಪರ್ಕ ಇನ್ನಷ್ಟು ವಿಸ್ತಾರ

ಕಳೆದ 4 ವರ್ಷಗಳಲ್ಲಿ ವೆಬ್, (ಇಂಟರ್) ನೆಟ್ ಅಥವಾ ಡಿಜಿಟಲ್ ಹೊಸ ಮಾಧ್ಯಮವಾಗಿ ಹೊಮ್ಮಿದ್ದು ಹಿಂದಿನ ಎಲ್ಲಾ ಮಾಧ್ಯಮಗಳ ಲೆಕ್ಕಾಚಾರವನ್ನು ಬುಡಮೇಲು ಮಾಡಿ, ಅವುಗಳ ಪಾತ್ರವನ್ನು ಪುನರ್ವಿಮರ್ಶೆಗೆ ಒಡ್ಡುವಂತೆ ಮಾಡಿದೆ. ಸ್ಮಾರ್ಟ್ ಫೋನ್ ಅಗ್ಗ ಮತ್ತು ವ್ಯಾಪಕವಾಗಿರುವುದು, ಡಾಟಾ ಕನೆಕ್ಶನ್ ಬೆಲೆ ಕಡಿಮೆಯಾಗಿರುವುದು ಮತ್ತು ವ್ಯಾಪಕ ಲಭ್ಯತೆ ಗಣನೀಯವಾಗಿ ಹೆಚ್ಚಿರುವುದು ಹಾಗೂ ವಾಟ್ಸಪ್/ಫೇಸ್ ಬುಕ್, ಯೂಟ್ಯೂಬ್ ಮುಂತಾದ ಸಾಮಾಜಿಕ ಮಾಧ್ಯಮ ಆಪ್ ಗಳು ಜನಪ್ರಿಯವಾಗಿರುವುದು, ನೋಟು ನಿಷೇಧ ಮತ್ತು ಕೊವಿದ್ ಲಾಕ್‌ಡೌನ್ ಪರಿಸ್ಥಿತಿಯಿಂದಾಗಿ ಏರಿದ ಡಿಜಿಟಲ್ ಹಣ ಪಾವತಿ ವ್ಯವಸ್ಥೆಯ ವಿಸ್ತಾರ, ಲಾಕ್‌ಡೌನ್ ಅವಧಿಯಲ್ಲಿ ವೆಬ್ ಪ್ರಮುಖ ಸಂವಹನ (ಜೂಮ್, ಗೂಗಲ್ ಮೀಟ್‌ಇತ್ಯಾದಿ) ಮಾಧ್ಯಮವಾಗಿದ್ದು, ಲಾಕ್‌ಡೌನ್ ಪರಿಸ್ಥಿತಿಯಿಂದ ಫಿಲಂ ಪ್ರದರ್ಶನ ನಿಂತು ಹಾಗೂ ಈಗಾಗಲೇ ಆರಂಭವಾಗಿದ್ದ ಅಮೆಜಾನ್ ಪ್ರೈಂ ವಿಡಿಯೊ, ನೆಟ್ ಫ್ಲಿಕ್ಸ್ ಇತ್ಯಾದಿ ಚಂದಾ ಆಧಾರಿತ ಡಿಜಿಟಲ್ ವಿಡಿಯೊ ಸೇವೆಯಲ್ಲಿ ಪ್ರಾದೇಶಿಕ ಭಾಷೆ ಫಿಲಂಗಳಿಗೂ ಪ್ರದರ್ಶನದ ಅವಕಾಶ ತೆರೆದಿರುವುದು– ಇವೆಲ್ಲಾ ಕಾರಣಗಳಿಂದ ವೆಬ್ ಸಂಪರ್ಕ ಹೊಂದಿರುವವರ ➚

ಕೊರೊನಾ ನಂತರ....

ಪುಟ 13 ರಿಂದ

ಹೀಗಾಗಿ, ಜನರಿಗೆ ನೇರ ನಗದು ವರ್ಗಾವಣೆಗಳ ಮೂಲಕ ಮತ್ತು ಶಿಕ್ಷಣ, ಆರೋಗ್ಯ ಮುಂತಾದ ಸಾಮಾಜಿಕ ಸೇವೆಗಳಿಗೆ ಹೆಚ್ಚು ಹಣ ಖರ್ಚು ಮಾಡುವ ಮೂಲಕ ಸರ್ಕಾರದ ವೆಚ್ಚಗಳನ್ನು ಹೆಚ್ಚಿಸುವ ಅಗತ್ಯವಿರುವ ತುರ್ತಿನ ಈ ಸಮಯದಲ್ಲಿ, ಅವುಗಳನ್ನು ಪೂರೈಸುವುದು ಮೋದಿ ಸರ್ಕಾರಕ್ಕೆ ಸಾಧ್ಯವಿಲ್ಲ ಎಂದು ತೋರುತ್ತದೆ. ಚುನಾವಣಾ ಉದ್ದೇಶಗಳಿಂದ ಕೂಡಿದ ಕೆಲವು ಸಾಂಕೇತಿಕ ಕೊಡುಗೆ ನೀಡುವುದನ್ನು ಹೊರತುಪಡಿಸಿದರೆ, ಈ ಎರಡೂ ಮಾರ್ಗಗಳಲ್ಲಿ ಖಂಡಿತವಾಗಿಯೂ ಅದು ಖರ್ಚು ಮಾಡುವುದಿಲ್ಲ. ಹಾಗಾಗಿ, ಆರ್ಥಿಕ ಚೇತರಿಕೆಯು ಅಸಂಭವವಾಗುತ್ತದೆ.

ಸರ್ಕಾರವು ತಳೆದಿರುವ ನಿಲುವಿನ ತಳದಲ್ಲಿರುವ ತಪ್ಪು ತಿಳಿವಳಿಕೆ ಹೀಗಿದೆ: ಕಾರ್ಪೊರೇಟ್ ವಲಯಕ್ಕೆ ಸಬ್ಸಿಡಿಗಳು ಮತ್ತು ತೆರಿಗೆ-ರಿಯಾಯಿತಿಗಳನ್ನು ಒದಗಿಸಿದಾಗ, ಆ ವಲಯವು ಹೆಚ್ಚಿನ ಹೂಡಿಕೆ ಮಾಡುತ್ತದೆ. ಇದು ಅರ್ಥವ್ಯವಸ್ಥೆಯ ಚೇತರಿಕೆಯನ್ನು ಉತ್ತೇಜಿಸುತ್ತದೆ ಎಂದು ಅದು ನಂಬುತ್ತದೆ. ಆದರೆ ಯಾವುದೇ ಒಂದು ಕಾರ್ಪೊರೇಟ್ ಸಂಸ್ಥೆಯು ಬೇಡಿಕೆಯ ಬೆಳೆಯುತ್ತದೆ ಎಂಬ ನಿರೀಕ್ಷೆ ಇದ್ದಾಗ ಮಾತ್ರ ಒಂದು ದೊಡ್ಡ ಪ್ರಮಾಣದ ಹೂಡಿಕೆ ಮಾಡುತ್ತದೆ. ಬೇಡಿಕೆಯಲ್ಲಿ ಸೊನ್ನೆ ಬೆಳವಣಿಗೆಯ ನಿರೀಕ್ಷೆ ಇದ್ದರೆ, ಅದು ಮಾಡುವ ಹೂಡಿಕೆಯೂ ಸೊನ್ನೆಯೇ. ಅಂದರೆ, ಉತ್ಪಾದನಾ ಸಾಮರ್ಥ್ಯವು ಹೆಚ್ಚುವುದಿಲ್ಲ. ಹಾಗಾಗಿ, ಬೇಡಿಕೆಯು ವೃದ್ಧಿಸದಿದ್ದರೆ, ತಮಗೆ ಸರ್ಕಾರ ನೀಡಿದ ಸಬ್ಸಿಡಿ ಮತ್ತು ತೆರಿಗೆ-ರಿಯಾಯಿಯ ಹಣವನ್ನು ಕಾರ್ಪೊರೇಟ್‌ಗಳು ನೀಟಾಗಿ ತಮ್ಮ ಜೇಬಿಗೆ ಇಳಿಸುತ್ತವೆ ಮತ್ತು ಹೆಚ್ಚುವರಿಯಾಗಿ ಎಳ್ಳಷ್ಟು ಹೂಡಿಕೆಯನ್ನೂ ಕೈಗೊಳ್ಳುವುದಿಲ್ಲ. ಆದ್ದರಿಂದ, ಕಾರ್ಪೊರೇಟ್‌ಗಳಿಗೆ ಸಬ್ಸಿಡಿ ಮತ್ತು ತೆರಿಗೆ ರಿಯಾಯಿತಿ ಒದಗಿಸುವ ಬದಲು, ಸರ್ಕಾರವು ಖಾಸಗಿ ಬಳಕೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಗಮನ ಹರಿಸಬೇಕು. ಆದರೆ, ಈ ಸರಳ ಅಂಶವನ್ನೂ ಅರ್ಥಮಾಡಿಕೊಳ್ಳದಷ್ಟು ಅಸಮರ್ಥವಾಗಿದೆ ಮೋದಿ ಸರ್ಕಾರ!

➘ಸಂಖ್ಯೆಗಣನೀಯವಾಗಿ ಹೆಚ್ಚಿದೆ.

ದೇಶದಲ್ಲಿ 2020ರಲ್ಲಿ 79.5 ಕೋಟಿ ಜನ (60.6% ನಗರವಾಸಿ, 39.4% ಗ್ರಾಮವಾಸಿ) ನೆಟ್ ಸಂಪರ್ಕ ಮತ್ತು ಅವರಲ್ಲಿ 74.7 ಕೋಟಿ ಜನ ಬ್ರಾಡ್ ಬ್ಯಾಂಡ್ ಸಂಪರ್ಕ ಹೊಂದಿದ್ದಾರೆ. ಇದು 2018ಕ್ಕಿಂತ ಶೇ. 40 ರಷ್ಟು ಮತ್ತು 2019ಕ್ಕಿಂತ 13% ಹೆಚ್ಚು. ಸ್ಮಾರ್ಟ್ ಫೋನ್ ಹೊಂದಿರುವವರ ಸಂಖ್ಯೆ 2018ರಲ್ಲಿ ಇದ್ದಿದ್ದು 2020ರಲ್ಲಿ 44.8 ಕೋಟಿಗೆ ಏರಿದೆ. 15 ವರ್ಷಕ್ಕಿಂತ ಹೆಚ್ಚಿನ 45% ಜನರ ಬಳಿ ಸ್ಮಾರ್ಟ್ ಫೋನ್ ಇದೆ. ಮೊಬೈಲ್ ಡಾಟಾ ಬಳಕೆ ಶೇ. 15 ರಷ್ಟು ಹೆಚ್ಚಿತು.

ಕರ್ನಾಟಕದಲ್ಲಿ ಮಾರ್ಚ್ 2021 ಕೊನೆಯ ಹೊತ್ತಿಗೆ 5.0 ಕೋಟಿ ವೆಬ್ ಸಂಪರ್ಕ ಹೊಂದಿರುವವರು ಇದ್ದಾರೆ ಎಂದು ಟ್ರಾಯ್ (TRAI) ವರದಿ ಹೇಳುತ್ತದೆ. ರಾಜ್ಯದ ವಯಸ್ಕರಲ್ಲಿ ಸುಮಾರು ಶೇ. 75 ರಷ್ಟು ವೆಬ್ ಸಂಪರ್ಕ ಹೊಂದಿದ್ದಾರೆ ಎನ್ನಬಹುದು. ವೆಬ್ ಸಂಪರ್ಕ ಇರುವವರಲ್ಲಿ ಶೇ. 64 ನಗರ ವಾಸಿಗಳು. ಸುಮಾರು ಶೇ. 92 ಜನ ಬ್ರಾಡ್ ಬ್ಯಾಂಡ್ (ಅಂದರೆ 512 kbpsಗಿಂತ ಹೆಚ್ಚಿನ) ವೇಗದ ಸಂಪರ್ಕ ಹೊಂದಿದ್ದಾರೆ. ಶೇ. 95ರಷ್ಟು ಜನ ವೆಬ್ ಸಂಪರ್ಕವನ್ನು ಮೊಬೈಲ್ ಮೂಲಕವೇ ಹೊಂದಿದ್ದಾರೆ. ಆದರೂ ವೆಬ್ ಸಂಪರ್ಕದಲ್ಲಿ ನಗರ ಮತ್ತು ಗ್ರಾಮೀಣ ಪ್ರದೇಶಗಳ ನಡುವೆ, ಹಾಗೂ ಅವುಗಳ ಒಳಗೂ ವರ್ಗ, ಜಾತಿ, ಲಿಂಗ, ಪ್ರದೇಶಗಳ ಆಧಾರದ ಮೇಲೆ ಭಾರೀ ಅಸಮಾನತೆಗಳು ಇವೆ. ಉದಾಹರಣೆಗೆ, ರಾಷ್ಟ್ರೀಯ ಆರೋಗ್ಯ ಸಮೀಕ್ಷೆ 2019-20 ಪ್ರಕಾರ, ನಗರ ಪ್ರದೇಶಗಳ ಶೇ. 35 ಮಹಿಳೆಯರಿಗೆ ಮಾತ್ರ ವೆಬ್ ಸಂಪರ್ಕ ಇದೆ. ಗ್ರಾಮೀಣ ಪ್ರದೇಶಗಳಲ್ಲಿ ಶೇ. 24.8 ಮಹಿಳೆಯರಿಗೆ ಮಾತ್ರ ವೆಬ್ ಸಂಪರ್ಕ ಇದೆ ಎಂಬುದನ್ನು ಗಮನಿಸಬೇಕು.

ಬಾಲಕಾರ್ಮಿಕ ಪದ್ಧತಿ ತಡೆಯಲು ಎಲ್.ಡಿ.ಎಫ್. ಸರ್ಕಾರದ ನೂತನ ಯೋಜನೆ

ಬಾಲಕಾರ್ಮಿಕರ ಕುರಿತು ಮಾಹಿತಿ ಹಂಚಿಕೊಳ್ಳುವವರಿಗೆ ಕೇರಳದಲ್ಲಿ 2,500 ರೂ.ಗಳ ಪ್ರೋತ್ಸಾಹ ಧನ ನೀಡಲು ಕೇರಳ ಎಡರಂಗ ಸರ್ಕಾರ ಹೊಸ ಯೋಜನೆ ಪ್ರಾರಂಭ ಮಾಡಿದೆ.

ರಾಜ್ಯದಲ್ಲಿ ಬಾಲಕಾರ್ಮಿಕ ಪದ್ಧತಿಯನ್ನು ತಡೆಗಟ್ಟುವ ಪ್ರಯತ್ನದ ಭಾಗವಾಗಿ ಇಲಾಖೆಯು ಪ್ರೋತ್ಸಾಹ ನೀಡುವ ಬಗ್ಗೆ ಮಂಜೂರಾತಿ ನೀಡಿದೆ ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ರಾಜ್ಯ ಸಚಿವೆ ವೀಣಾ ಜಾರ್ಜ್ ತಿಳಿಸಿದ್ದಾರೆ.

ದೇಶದಲ್ಲಿ ಬಾಲಕಾರ್ಮಿಕ ಪದ್ಧತಿ ನಿಷೇಧಿಸಲಾಗಿದೆ ಮತ್ತು ಕ್ರಿಮಿನಲ್ ಅಪರಾಧವಾಗಿದೆ. ದಕ್ಷಿಣ ರಾಜ್ಯದಲ್ಲಿ ಬಾಲಕಾರ್ಮಿಕರ ಪ್ರಕರಣಗಳು ಕಡಿಮೆಯಾಗಿದ್ದರೂ, ವಲಸೆ ಕಾರ್ಮಿಕರು ಮತ್ತು ಅವರ ಕಾರ್ಮಿಕ ಗುತ್ತಿಗೆದಾರರ ಮೂಲಕ ಮಕ್ಕಳನ್ನು ಉದ್ಯೋಗಕ್ಕಾಗಿ ಕೇರಳಕ್ಕೆ ಕರೆತರಲಾಗುತ್ತದೆ. ಇಂತಹ ಸಂದರ್ಭದಲ್ಲಿ ಬಾಲ ಕಾರ್ಮಿಕ ಪದ್ಧತಿಯನ್ನು ನಿರ್ಮೂಲನೆ ಮಾಡುವುದು ಮಹತ್ವದ ಗುರಿಯಾಗಿದೆ ಎಂದು ವೀಣಾ ಜಾರ್ಜ್ ಹೇಳಿದರು.

ಜನರ ಬೆಂಬಲದಿಂದಲೇ ಇದನ್ನು ತಡೆಯಲು ಸಾಧ್ಯ. ಬಾಲ ಮತ್ತು ಹದಿಹರೆಯದ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ ಪ್ರಕಾರ 14 ವರ್ಷದೊಳಗಿನ ಮಕ್ಕಳನ್ನು ದುಡಿಮೆಯಲ್ಲಿ ತೊಡಗಿಸಬಾರದು ಎಂಬ ನಿಯಮವಿದೆ.

ಅಲ್ಲದೆ, 14 ವರ್ಷಕ್ಕಿಂತ ಮೇಲ್ಪಟ್ಟ ಮತ್ತು 18 ವರ್ಷದೊಳಗಿನ ಮಕ್ಕಳು ಯಾವುದೇ ಅಪಾಯಕಾರಿ ಕೆಲಸದಲ್ಲಿ ತೊಡಗಬಾರದು ಎಂದು ಕಾನೂನು ಷರತ್ತು ವಿಧಿಸಿದೆ. ಮಕ್ಕಳು ಅನೇಕ ಕಾರಣಗಳಿಗಾಗಿ ಕೆಲಸ ಮಾಡಬೇಕಾದಾಗ, ಅದು ಅವರ ಮಾನಸಿಕ ಮತ್ತು ದೈಹಿಕ ಬೆಳವಣಿಗೆಯ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ.

ಕೋವಿಡ್ -19 ಬಿಕ್ಕಟ್ಟಿನಿಂದಾಗಿ ಏಕಾಏಕಿ ಅನೇಕ ಸ್ಥಳಗಳಲ್ಲಿ ಬಾಲಕಾರ್ಮಿಕರು ದುಡಿಮೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಅದಕ್ಕಾಗಿಯೇ ಬಾಲಕಾರ್ಮಿಕ ಪದ್ಧತಿಯನ್ನು ತಡೆಗಟ್ಟುವಲ್ಲಿ ಸಾರ್ವಜನಿಕರ ಸಹಭಾಗಿತ್ವವನ್ನು ಖಚಿತಪಡಿಸಿಕೊಳ್ಳಲು ಪ್ರೋತ್ಸಾಹಕ ಯೋಜನೆಯನ್ನು ಪ್ರಾರಂಭಿಸಲಾಗುತ್ತಿದೆ ಎಂದು ಸಚಿವೆ ವೀಣಾ ಜಾರ್ಜ್ ಹೇಳಿದರು.

ಜಿಲ್ಲಾ ಮಕ್ಕಳ ರಕ್ಷಣಾ ಅಧಿಕಾರಿಗೆ ಗೌಪ್ಯ ಮಾಹಿತಿಯನ್ನು ತಿಳಿಸಬಹುದಾಗಿದೆ. ವ್ಯಕ್ತಿಗಳು ನೀಡಿದ ಮಾಹಿತಿಯ ಆಧಾರದ ಮೇಲೆ ಪೊಲೀಸ್, ಕಾರ್ಮಿಕ ಮತ್ತು ಇತರ ಸಂಬಂಧಿತ ಇಲಾಖೆಗಳ ಬೆಂಬಲದೊಂದಿಗೆ ಬಾಲದುಡಿಮೆಯನ್ನು ನಿಗ್ರಹಿಸಲು ಕ್ರಮಗಳನ್ನು ತೆಗೆದುಕೊಳ್ಳಲಾಗುವುದು ಎಂದು ಸಚಿವೆ ವೀಣಾ ಜಾರ್ಜ್ ವಿವರಣೆ ನೀಡಿದರು.



ಕಾಂ. ಎನ್. ರಾಮಕೃಷ್ಣನ್ ನಿಧನ

ಭಾರತದ ಮತ್ತು ತಮಿಳುನಾಡಿನ ದುಡಿಯುವ ಜನರ ಆಂದೋಲನದ ಮತ್ತು ಕಮುನಿಸ್ಟ್ ಆಂದೋಲನದ ಘಟನಾವಳಿಗಳ ದಾಖಲೆಗಳನ್ನು ಸಂಗ್ರಹಿಸಿ ಕೊಡುವುದಕ್ಕೆ ತಮ್ಮನ್ನು ಸಮರ್ಪಿಸಿಕೊಂಡಿದ್ದ ಎನ್.ರಾಮಕೃಷ್ಣನ್ ಅವರು ಡಿಸೆಂಬರ್ 12 ರಂದು ನಿಧನರಾಗಿದ್ದಾರೆ. ಅವರಿಗೆ 79 ವರ್ಷವಾಗಿತ್ತು.

ದುಡಿಯುವ ಜನಗಳ ಆಂದೋಲನದ ಇತಿಹಾಸದ ಬಗ್ಗೆ ಯಾವುದೇ ಮಾಹಿತಿ ಬೇಕಿದ್ದರೂ ತಮಿಳುನಾಡಿನ ಸಂಗಾತಿಗಳಿಗೆ ಮೊದಲು ನೆನಪಾಗುತ್ತಿದುದು ಎನ್. ಆರ್. ಎಂದೇ ಜನಪ್ರಿಯರಾಗಿದ್ದ ಇವರೇ ಎಂದು ಅವರಿಗೆ ಶ್ರದ್ಧಾಂಜಲಿ ಅರ್ಪಿಸುತ್ತ ಪಕ್ಷದ ಹಿರಿಯ ಮುಖಂಡರೂ ಪೊಲಿಟ್‌ಬ್ಯುರೊ ಸದಸ್ಯರೂ ಆಗಿರುವ ಜಿ.ರಾಮಕೃಷ್ಣನ್ ಹೇಳಿದ್ದಾರೆ.

ವಿದ್ಯಾರ್ಥಿ ದೆಸೆಯಿಂದಲೇ ಕಮ್ಯುನಿಸ್ಟ್ ಆಂದೋಲನದತ್ತ ಆಕರ್ಷಿತರಾದ ಎನ್ ಆರ್ ನಂತರ ಅವಿಭಜಿತ ಪಕ್ಷದ ತಮಿಳು ಪತ್ರಿಕೆ 'ಜನಶಕ್ತಿ'ಯನ್ನು ಒಬ್ಬ ವರದಿಗಾರರಾಗಿ ಸೇರಿದರು. ಮುಂದೆ ಪಕ್ಷದ ವಿಭಜನೆಯ ನಂತರ 'ತೀಕಥಿರ್' ವಾರಪತ್ರಿಕೆಯನ್ನು ಆರಂಭಿಸುವಲ್ಲಿ ಇವರು ಕೊಡುಗೆ ನೀಡಿದರು.



1969ರಲ್ಲಿ ಇವರು ಪಕ್ಷದ ಕರೆಯ ಮೇರೆಗೆ ದಿಲ್ಲಿಗೆ ಹೋಗಿ ಅಲ್ಲಿ ಪಕ್ಷದ ಸಂಸದೀಯ ಕಚೇರಿಯಲ್ಲಿ ಕೆಲಸ ಮಾಡಲಾರಂಭಿಸಿದರು. ಅಲ್ಲಿ ಕಾರ್ಯದರ್ಶಿಯಾಗಿ ಪಕ್ಷದ ಸಂಸದೀಯ ಮತ್ತು ಕೇಂದ್ರಸಮಿತಿಯ ಕೆಲಸಗಳಲ್ಲಿಯೂ ನೆರವು ನೀಡಿದರು.

ಕೇಂದ್ರ ಸಮಿತಿಯ ಕೆಲಸದಲ್ಲಿ ಎಕೆಜಿಯವರಿಂದ ಹಿಡಿದು ಹಲವು ಹಿರಿಯ ಮುಖಂಡರೊಂದಿಗೆ ನಿಕಟವಾಗಿ ಕೆಲಸ ಮಾಡಿದ ಅನುಭವ ಹೊಂದಿದ್ದ ಎನ್.ಆರ್. 1984ರಲ್ಲಿ ಮಧುರೈಗೆ ಮರಳಿದ ಮೇಲೆ ಪುಸ್ತಕ ರಚನೆಯಲ್ಲಿ ತೊಡಗಿದರು. ಅವರ ಮೊದಲ ಪುಸ್ತಕ ಮುಝಫ್ಫರ್ ಅಹ್ಮದ್ ಅವರ ಜೀವನ ಚರಿತ್ರೆ.

ಇವರು ಸುಮಾರು 100 ಪುಸ್ತಕಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಅರ್ಧದಷ್ಟು ತಮಿಳುನಾಡು ಮತ್ತು ಭಾರತದ ಮತ್ತು ಜಗತ್ತಿನ ಕಮ್ಯುನಿಸ್ ಮುಖಂಡರ ಮತ್ತು ಸಾಮಾಜಿಕ ಸುಧಾರಕರ ಜೀವನ ಚರಿತ್ರೆಗಳು, ಇಎಂಎಸ್, ಬಿಟಿಆರ್, ಬಸವಪುನ್ನಯ್ಯ, ಪಿ.ರಾಮಮೂರ್ತಿ, ಸಮರ್ ಮುಖರ್ಜಿಯವರ ಜೀವನ ಚರಿತ್ರೆಗಳನ್ನಲ್ಲದೆ, 'ಸಿಪಿಐ(ಎಂ)ನ ನವರತ್ನಗಳು' ಎಂಬ ಪುಸ್ತಕವನ್ನೂ ಅವರು ರಚಿಸಿದ್ದಾರೆ. ಅಲ್ಲದೆ ತಮಿಳುನಾಡಿನಲ್ಲಿ ಕಮ್ಯುನಿಸ್ಟ್ ಆಂದೋಲನದ ಇತಿಹಾಸ (1917-1964) ಮತ್ತು ತಮಿಳುನಾಡಿನಲ್ಲಿ ಸಿಪಿಐ(ಎಂ)ನ ಇತಿಹಾಸ (1964-2014) ಮತ್ತು ವಿಶ್ವ ಕಮ್ಯುನಿಸ್ಟ್ ಇತಿಹಾಸದ ರೂಪುರೇಷೆ(1844-1917) ಅವರ ಇತರ ಗಮನಾರ್ಹ ರಚನೆಗಳು. ಅವರ ಇತ್ತೀಚಿನ ರಚನೆ ಮಾರ್ಕ್ಸ್, ಪೆರಿಯಾರ್ ಮತ್ತು ಅಂಬೇಡ್ಕರ್ ರವರ ವಿಚಾರಗಳ ತುಲನಾತ್ಮಕ ವಿಶ್ಲೇಷಣೆಯಾಗಿತ್ತು.

ರಾಜಸ್ತಾನ- ದಾಸ್ತಾನು ಮಳಿಗೆ ಉಳಿಸಿಕೊಳ್ಳಲು ರೈತ-ಕಾರ್ಮಿಕರ ಹೋರಾಟ

ದಿಲ್ಲಿ ಗಡಿಗಳಲ್ಲಿ ಮತ್ತು ಇತರೆಡೆಗಳಲ್ಲಿ ರೈತರ ಐಕ್ಯ ಹೋರಾಟದ ಐತಿಹಾಸಿಕ ವಿಜಯ ರಾಜಸ್ತಾನದಲ್ಲಿ ಹೊಸ ಹುರುಪನ್ನು ಉಂಟುಮಾಡಿದೆ. ಡಿಸೆಂಬರ್ 15 ರಂದು ಹನುಮಾನಗಡ ದಲ್ಲಿ ದಾಸ್ತಾನು ಮಳಿಗೆಯನ್ನು ಉಳಿಸಿಕೊಳ್ಳಲು ಸಾವಿರಾರು ರೈತರು ಮತ್ತು ಕಾರ್ಮಿಕರು ಕಲೆಕ್ಟರ್ ಕಚೇರಿಯೆದುರು ಬೃಹತ್ ರ್‍ಯಾಲಿಯನ್ನು ನಡೆಸಿದರು. ಹೋರಾಟವನ್ನು ಇನ್ನಷ್ಟು ತೀವ್ರಗೊಳಿಸುವ ದೃಢನಿರ್ಧಾರವನ್ನು ವ್ಯಕ್ತಪಡಿಸಿದರು.

ರ್‍ಯಾಲಿಯನ್ನುದ್ದೇಶಿಸಿ ಹಿರಿಯ ರೈತ ಮುಖಂಡ ಮತ್ತು ಸಿಪಿಐ(ಎಂ) ಮುಖಂಡರಾಗಿರುವ ಅಮ್ರಾರಾಮ್, ಪೇಮಾರಾಮ್ ಮತ್ತು ಸಿಪಿಐ(ಎಂ) ಕಾರ್ಯದರ್ಶಿ ಮಂಡಳಿ ಸದಸ್ಯರಾದ ರಾಮೇಶ್ವರ್ ವರ್ಮಾ ಮಾತಾಡಿದರು.



JANASHAKTHI KANNADA VARA PATRIKE DECEMBER 20-26, 2021 Price: Rs. 10/- Date of Publication: 17 DECEMBER 2021 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21

ರಾಜ್ಯ ಸರಕಾರದ ರೈತ ವಿರೋಧಿ ಕಾಯ್ದೆಗಳನ್ನು ರದ್ದು ಮಾಡದೆ ಇದ್ದಲ್ಲಿ, ದೆಹಲಿ ಮಾದರಿ ಹೋರಾಟಕ್ಕೆ ಸಜ್ಜಾಗಲಿರುವ ರೈತರು

ಭೂ ಸುಧಾರಣೆ, ಎಪಿಎಂಸಿ ಮತ್ತು ಜಾನುವಾರು ಕಾಯ್ದೆಗಳಿಗೆ ರಾಜ್ಯ ಸರ್ಕಾರವು 2020ರಲ್ಲಿ ತಂದಿರುವ ರೈತ ವಿರೋಧಿ ತಿದ್ದುಪಡಿಗಳನ್ನು ಕೂಡಲೇ ರದ್ದುಗೊಳಿಸಬೇಕು. ಇಲ್ಲದೆ ಹೋದರೆ ರಾಜ್ಯದಲ್ಲಿ ದೆಹಲಿ ಮಾದರಿ ಹೋರಾಟ ನಡೆಯಲಿದೆ ಎಂದು ಸಂಯುಕ್ತ ಕಿಸಾನ್ ಮೋರ್ಚಾದ ರಾಷ್ಟ್ರ ನಾಯಕ ಅಶೋಕ್ ಧವಳೆ ಬೆಳಗಾವಿ ರೈತ ಅಧಿವೇಶನದಲ್ಲಿ ಎಚ್ಚರಿಸಿದ್ದಾರೆ.



ಸಂಯುಕ್ತ ಹೋರಾಟ–ಕರ್ನಾಟಕ ವತಿಯಿಂದ ಇಲ್ಲಿನ ಗೋಕಾಕ ರಸ್ತೆಯ ಸಂಕಲ್ಪ ಗಾರ್ಡನ್‌ನಲ್ಲಿ ಆಯೋಜಿಸಿದ್ದ 'ರೈತ ಅಧಿವೇಶನ' ಉದ್ಘಾಟಿಸಿ ಮಾತನಾಡುತ್ತಾ, ರಾಜ್ಯದಲ್ಲಿ ಜಾರಿಗೊಳಿಸಿರುವ ಭೂಸುಧಾರಣೆ ಕಾಯ್ದೆ, ಎಪಿಎಂಸಿ ಕಾಯ್ದೆ, ಜಾನುವಾರು ಹತ್ಯೆ ಕಾಯ್ದೆಗಳ ತಿದ್ದುಪಡಿಗಳನ್ನು ಕೂಡಲೇ ರದ್ದುಪಡಿಸಿ ಹಿಂಪಡೆಯಬೇಕು. ರೈತರ ಹಿತವನ್ನು ಕಾಪಾಡಬೇಕು, ಇಲ್ಲದೆ ಹೋದರೆ ಕರ್ನಾಟಕದಲ್ಲಿ ದೆಹಲಿ ಮಾದರಿ ಹೋರಾಟಕ್ಕೆ ರೈತರು ಸಜ್ಜಾಗಿದ್ದಾರೆ ಎಂದರು. ವಿಪರೀತ ಮಳೆಯಿಂದ ಲಕ್ಷಾಂತರ ಹೆಕ್ಟೇರ್‌ಗಳಲ್ಲಿ ಸಾವಿವಾರು ಕೋಟಿ ರೂ. ಬೆಳೆ ನಷ್ಟವಾಗಿದ್ದು, ಆಹಾರ ಧಾನ್ಯ ಬೆಳೆಗಳಿಗೆ ಎಕರೆಗೆ ಕನಿಷ್ಠ 25 ಸಾವಿರ ರೂ., ತರಕಾರಿ, ತೋಟಗಾರಿಕೆ ಬೆಳೆಗಳಿಗೆ ಎಕರೆಗೆ ಕನಿಷ್ಠ 1 ಲಕ್ಷ ರೂ. ಬೆಳೆ ನಷ್ಟ ಪರಿಹಾರ ನೀಡಬೇಕು ಎಂದು ಅಶೋಕ ಧವಳೆ ಆಗ್ರಹಿಸಿದರು.

ಸಾಹಿತಿ ಅಲ್ಲಮಪ್ರಭು ಬೆಟ್ಟದೂರು ಮಾತನಾಡಿ, 'ಕೇಂದ್ರದ ಬಿಜೆಪಿ ಸರಕಾರವು ರೈತ ಸಮುದಾಯದ ನಂಬಿಕೆಯನ್ನು ಕಳೆದುಕೊಂಡಿದೆ. ಪ್ರಧಾನಿ ಮೋದಿ ಸರ್ವಾಧಿಕಾರಿ ಧೋರಣೆ ಅನುಸರಿಸುತ್ತಿದ್ದಾರೆ. ಮೂರು ಕೃಷಿ ಕಾಯ್ದೆಗಳನ್ನು ವಾಪಸ್ ಪಡೆಯಬೇಕು ಎಂಬ ನಿಟ್ಟಿನಲ್ಲಿ ದಿಲ್ಲಿ ಗಡಿಗಳಲ್ಲಿ ಸೇರಿದಂತೆ ಹಲವೆಡೆ ನಡೆದ ಹೋರಾಟಕ್ಕೆ ಮಾಧ್ಯಮಗಳು ನಿರೀಕ್ಷಿತ ಬೆಂಬಲ ನೀಡಲಿಲ್ಲ. ಆದರೂ, ರೈತರು ಹೋರಾಡಿ ಗೆದ್ದಿದ್ದಾರೆ' ಎಂದು ಸಾಹಿತಿ ಅಲ್ಲಮಪ್ರಭು ಬೆಟ್ಟದೂರು ಮೆಚ್ಚುಗೆ ವ್ಯಕ್ತಪಡಿಸಿದರು.

ನಾವು ಬದುಕಿನ ಬಗ್ಗೆ ಮಾತನಾಡಿದರೆ, ಸರಕಾರಕ್ಕೆ ಅದು ಆದ್ಯತೆಯ ವಿಷಯವಲ್ಲ. ಅಧಿವೇಶನದಲ್ಲಿ 'ಮತಾಂತರ ನಿಷೇಧ ಕಾಯ್ದೆ' ಮಂಡಿಸಲು ಮುಂದಾಗಿದೆ. ಭಾವನಾವಾದಿಗಳನ್ನು ಮೆಚ್ಚಿಸಿ ಮತ ಬ್ಯಾಂಕ್ ಗಟ್ಟಿ ಮಾಡಿಕೊಳ್ಳಲು ಅವರು ಆದ್ಯತೆ ನೀಡಿದ್ದಾರೆ. ರೈತ ವಿರೋಧಿ ಹಾಗೂ ಕರಾಳ ಕೃಷಿ ಕಾನೂನುಗಳನ್ನು ಈ ಅಧಿವೇಶನದಲ್ಲೇ ವಾಪಸ್ ಪಡೆಯಬೇಕು' ಎಂದು ಅಲ್ಲಮ ಪ್ರಭು ಬೆಟ್ಟದೂರು ಒತ್ತಾಯಿಸಿದರು.

ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ಮಾತನಾಡಿ, 'ಸಂಘರ್ಷ ಮಾಡುವುದರಲ್ಲಿ ನಾವು ಪ್ರವೀಣರು. ಇಡೀ ಸಮಾಜದ ಒಳಿತಿಗಾಗಿ ಬೆಂಕಿ ಹಚ್ಚಿಕೊಳ್ಳುವುದಕ್ಕೂ ಸಿದ್ಧವಿದ್ದೇವೆ. ಮುತ್ತಿಗೆಯನ್ನೂ ಹಾಕುತ್ತೇವೆ. ಇನ್ನೊಂದು ಆಯಾಮದ ಹೋರಾಟವೇ ಈ ರೈತ ಅಧಿವೇಶನ. ಸರ್ವಾಧಿಕಾರ ವರ್ಸಸ್ ಪ್ರಜಾಪ್ರಭುತ್ವ ಹೋರಾಟ ನಡೆಯುತ್ತಿದೆ. ಸರ್ವಾಧಿಕಾರಿಯ ನಡೆಯ ವಿರುದ್ಧ ದಿಟ್ಟ ಹೆಜ್ಜೆಗಳನ್ನು ಇಟ್ಟಿರುವುದು ಪ್ರಜಾಪ್ರಭುತ್ವ ಉಳಿದಿದೆ, ಉಳಿಸಿಕೊಳ್ಳುತ್ತೇವೆ ಎಂಬ ಸಂದೇಶವನ್ನು ನೀಡಿದೆ' ಎಂದು ಹೇಳಿದರು.

ರೈತ ಅಧಿವೇಶನದಲ್ಲಿ ಸಾಮಾಜಿಕ ಕಾರ್ಯಕರ್ತ ಎಸ್.ಆರ್. ಹಿರೇಮಠ, ರೈತ ಮುಖಂಡ ಕೋಡಿಹಳ್ಳಿ ಚಂದ್ರಶೇಖರ್, ಮಾಜಿ ಶಾಸಕ ಬಿ.ಆರ್.ಪಾಟೀಲ್, ಮುಖಂಡರಾದ ಸಿದ್ದಗೌಡ ಮೋದಗಿ, ಚಾಮರಸ ಮಾಲಿಪಾಟೀಲ್, ಶಾರದಾ ಗೋಪಾಲ್, ದೇವಿ, ಪ್ರಕಾಶ ಕಮ್ಮರಡಿ, ಬಿ.ಎ.ಸೊಪ್ಪಿನ, ನೂರ್ ಶ್ರೀಧರ್, ಸಿರಿಮನೆ ನಾಗರಾಜ್, ಮಾವಳ್ಳಿ ಶಂಕರ್, ಸೇರಿದಂತೆ ವಿವಿಧ ಜಿಲ್ಲೆಗಳಿಂದ ರೈತ ಪ್ರತಿನಿಧಿಗಳು ಪಾಲ್ಗೊಂಡಿದ್ದರು.

ಈ ವಿಧಾನಮಂಡಲ ಅಧಿವೇಶದಲ್ಲೇ ಕಾಯ್ದೆಗಳನ್ನು ವಾಪಸ್ ಪಡೆಯಬೇಕು ಎಂದು ಒಕ್ಕೊರಲ ದನಿಯಲ್ಲಿ ಮಂಡಿಸಲಾಯಿತು.

* ರಾಜ್ಯ ಸರ್ಕಾರ ಜಾರಿಗೊಳಿಸಿರುವ ರೈತ ವಿರೋಧಿಯಾದ ಭೂ ಸುಧಾರಣಾ ಕಾಯ್ದೆ ತಿದ್ದುಪಡಿಗಳು ರದ್ದಾಗಬೇಕು. ರೈತರ ಭೂಮಿಯನ್ನು ಕಿತ್ತು ಕಾರ್ಪೊರೇಟ್ ಕಂಪನಿಗಳ ಪಾಲಾಗಿಸುವುದನ್ನು ಕೈಬಿಟ್ಟು, ರೈತರಿಗೆ ಕೃಷಿಯು ಲಾಭದಾಯಕ ಆಗುವಂತೆ ಸಹಕಾರಿ ಬೇಸಾಯಕ್ಕೆ ಅಗತ್ಯ ಪ್ರೋತ್ಸಾಹ ನೀಡಬೇಕು.
* ರಾಜ್ಯದ ಎಪಿಎಂಸಿ ಕಾಯ್ದೆಯ ತಿದ್ದುಪಡಿಗಳು ರದ್ದಾಗಬೇಕು. ಎಪಿಎಂಸಿಗಳನ್ನು ರೈತ ಸ್ನೇಹಿಯಾಗಿ ಮಾರ್ಪಡಿಸಲು ಅಗತ್ಯವಿರುವ ಕ್ರಮಗಳನ್ನು ಕೈಗೊಳ್ಳಬೇಕು.
* ರಾಜ್ಯದ ಹೈನುಗಾರಿಕೆಗೆ, ಆ ಮೂಲಕ ಸಣ್ಣ ರೈತರ ಪ್ರಮುಖ ಉಪ ಆದಾಯಕ್ಕೆ ಕೊಡಲಿ ಪೆಟ್ಟು ನೀಡಿರುವ ಜಾನುವಾರು ಹತ್ಯೆ ನಿಷೇಧ ಕಾಯ್ದೆ ತಿದ್ದುಪಡಿಗಳನ್ನು ರದ್ದುಪಡಿಸಬೇಕು. ಕೋಳಿ– ಕುರಿ ಸಾಕಣೆ, ರೇಷ್ಮೆ ಕೃಷಿ ಹಾಗೂ ಹೈನುಗಾರಿಕೆಯಲ್ಲಿ ತೊಡಗಿರುವ ರೈತರ ಬೇಡಿಕೆಗಳನ್ನು ಈಡೇರಿಸಬೇಕು.
* ವಿದ್ಯುತ್ ಮಸೂದೆ 2020/2021 ವಾಪಸ್ ಪಡೆಯಬೇಕು. ವಿದ್ಯುತ್ ಖಾಸಗೀಕರಣ ನೀತಿ ಕೈಬಿಡಬೇಕು. ರೈತರ ಪಂಪ್‌ಸೆಟ್‌ಗಳಿಗೆ ಹಾಗೂ ಸಾರ್ವಜನಿಕರ ಗೃಹ ಬಳಕೆಗೆ ಸ್ಮಾರ್ಟ್ ಮೀಟರ್ ಜೋಡಿಸುವ ದುಸ್ಸಾಹಸವನ್ನು ನಿಲ್ಲಿಸಬೇಕು. ವಿದ್ಯುತ್ ಬಿಲ್ಲಿನ ಎಲ್ಲ ವಿನಾಯಿತಿ ಹಾಗೂ ರಿಯಾಯಿತಿಗಳನ್ನು ಹಿಂದಿನಂತೆಯೇ ಮುಂದುವರಿಸಬೇಕು.
* ರಾಜ್ಯದ ಎಲ್ಲ ಪ್ರಮುಖ ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆಯನ್ನು ಶಾಸನಬದ್ಧಗೊಳಿಸಬೇಕು. ರೈತರಿಗೆ ಆದಾಯ ಖಾತರಿಗೊಳಿಸುವ ಕಾಯ್ದೆ ಜಾರಿಗೆ ತರಬೇಕು.
* ರಾಜ್ಯದಾದ್ಯಂತ ಭೂಮಿ–ವಸತಿ ವಂಚಿತ ಬಡವರಿಗೆ ಜಮೀನು, ಮನೆ, ನಿವೇಶನ ಒದಗಿಸಬೇಕು. ಎಲ್ಲ ಅನಧಿಕೃತ (ಬಗರ್‌ಹುಕುಂ) ಭೂಮಿ ಹಾಗೂ ಮನೆಗಳನ್ನು ಸಕ್ರಮಗೊಳಿಸಿ, ಕೂಡಲೇ ಹಕ್ಕುಪತ್ರಗಳನ್ನು ನೀಡಬೇಕು. ಯಾವುದೇ ಕಾರಣಕ್ಕೂ ಬಡ ಜನರನ್ನು ಪರ್ಯಾಯ ವ್ಯವಸ್ಥೆ ಕಲ್ಪಿಸದೆ ಒಕ್ಕಲೆಬ್ಬಿಸಬಾರದು.
* ಅರಣ್ಯ ಹಕ್ಕು ಕಾಯ್ದೆ –2006ನ್ನು ಸಮರ್ಪಕವಾಗಿ ಜಾರಿಗೊಳಿಸಬೇಕು. ಕಾಯ್ದೆಯಲ್ಲಿನ ಲೋಪ ದೋಷಗಳನ್ನು ಸರಿಪಡಿಸಿ, ಇತರ ಪಾರಂಪರಿಕ ಅರಣ್ಯವಾಸಿಗಳ ಕೃಷಿ ಭೂಮಿ ಹಾಗೂ ಮನೆ ಜಾಗಗಳನ್ನು ಸಕ್ರಮಗೊಳಿಸಲು ಅನುಕೂಲವಾಗುವಂತೆ ಮಾಡಬೇಕು.
* ಕಬ್ಬು ಬೆಳೆಗಾರರ ಸಮಸ್ಯೆಗಳ ನಿವಾರಣೆಗಾಗಿ ಸಕ್ಕರೆ ಲಾಬಿಯನ್ನು ನಿಯಂತ್ರಿಸಬೇಕು. ಕಾರ್ಖಾನೆಗಳ ಅಕ್ರಮ– ಅವ್ಯವಹಾರಗಳನ್ನು ಹೈಕೋರ್ಟ್ ನ್ಯಾಯಾಧೀಶರಿಂದ ತನಿಖೆಗೆ ಒಳಪಡಿಸಬೇಕು.
* ವಿವಿಧ ಇಲಾಖೆಗಳೊಂದಿಗಿನ ರೈತರ ವಿವಾದಗಳ ಪರಿಹಾರಕ್ಕಾಗಿ ಪ್ರತ್ಯೇಕ ಕಂದಾಯ ನ್ಯಾಯಾಲಯಗಳು ಹಾಗೂ ಸಹಕಾರ ವ್ಯಾಜ್ಯಗಳ ಪರಿಹಾರಕ್ಕಾಗಿ ಸಹಕಾರ ನ್ಯಾಯಾಲಯಗಳನ್ನು ಸ್ಥಾಪಿಸಬೇಕು.
* ಮಹದಾಯಿ–ಕಳಸಾ–ಬಂಡೂರಿ ವಿವಾದವನ್ನು ಶೀಘ್ರವಾಗಿ ಪರಿಹರಿಸಿ ಯೋಜನೆಗಳನ್ನು ತ್ವರಿತವಾಗಿ ಅನುಷ್ಠಾನಕ್ಕೆ ತರಬೇಕು.
* ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ರೈತರು, ಕೃಷಿ ಕೂಲಿಕಾರರು ಹಾಗೂ ಗ್ರಾಮೀಣ ಕಸುಬುದಾರರ ಎಲ್ಲ ಸಾಲಗಳನ್ನು ಒಂದು ಸಲದ ಕ್ರಮವಾಗಿ ಸಂಪೂರ್ಣವಾಗಿ ಸಾಲ ಮನ್ನಾ ಮಾಡಬೇಕು. ಸಾಲ ನೀಡುವಾಗ ಆದ್ಯತಾ ವಲಯ ಎಂದು ಪರಿಗಣಿಸಬೇಕು.
* ವಿಶೇಷ ಸಂದರ್ಭಗಳಲ್ಲಿ ಸಾಲಮನ್ನಾ ಮಾಡುವಂತಹ ಋಣಮುಕ್ತ ಕಾಯ್ದೆಯನ್ನು ಸರ್ಕಾರ ಜಾರಿಗೆ ತರಬೇಕು.
* ಅತಿವೃಷ್ಟಿಯಿಂದ ಹಾಳಾದ ಆಹಾರ ಧಾನ್ಯದ ಬೆಳೆಗಳಿಗೆ ಎಕರೆಗೆ ರೂ. 25 ಸಾವಿರ ಹಾಗೂ ತೋಟಗಾರಿಕೆಗೆ ಎಕರೆಗೆ ರೂ. 1 ಲಕ್ಷ ಪರಿಹಾರ ಒದಗಿಸಬೇಕು. ಮನೆ ಕಳೆದುಕೊಂಡವರಿಗೆ ಸಮರ್ಪಕ ಪರಿಹಾರ ಕೊಡಬೇಕು. ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿಯ ಅವೈಜ್ಞಾನಿಕ ಮಾನದಂಡಗಳನ್ನು ಪರಿಷ್ಕರಿಸಬೇಕು.
* ಅಡಿಕೆಯ ಕನಿಷ್ಠ ಆಮದು ಬೆಲೆಯನ್ನು ರೂ. 250 ರಿಂದ ರೂ. 350ಕ್ಕೆ ಹೆಚ್ಚಿಸಬೇಕು. ಅಡಿಕೆ ಆರೋಗ್ಯಕ್ಕೆ ಹಾನಿಕರವಲ್ಲ ಎಂಬ ವರದಿಗಳನ್ನು ಪ್ರಮಾಣ ಪತ್ರದ ಮೂಲಕ ಕೇಂದ್ರ ಸರ್ಕಾರವು ಸುಪ್ರೀಂ ಕೋರ್ಟ್ ಮುಂದೆ ತರಬೇಕು. ಅಡಿಕೆ ಬೆಳೆಗಳಿಗೆ ಬಾಧಿಸುವ ಹಳದಿ ಎಲೆ ರೋಗ ಮತ್ತು ತೊಂಡೆ ರೋಗಕ್ಕೆ ಶೀಘ್ರವೇ ಪರಿಹಾರ ಕಲ್ಪಿಸಬೇಕು. ಸಮಸ್ಯೆಗಳ ನಿವಾರಣೆಗಾಗಿ ಅಡಿಕೆ ಅಭಿವೃದ್ಧಿ ಮಂಡಳಿ ರಚಿಸಬೇಕು.
* ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ ಸಿಲಿಂಡರ್ ಸೇರಿದಂತೆ ಅಗತ್ಯ ವಸ್ತುಗಳ ಬೆಲೆ ಏರಿಕೆ ತಡೆಗಟ್ಟಬೇಕು.
* ಪಡಿತರ ವಿತರಣೆ ಪದ್ಧತಿಯನ್ನು ಕೇರಳ ಮಾದರಿಯಲ್ಲಿ ರೂಪಿಸಿ, ಎಲ್ಲ ಆಹಾರ ಸಾಮಗ್ರಿಗಳಿಗೂ ವಿಸ್ತರಿಸಬೇಕು. ಅಗತ್ಯ ವಸ್ತುಗಳ ಕಾಯ್ದೆಯನ್ನು ಮತ್ತಷ್ಟು ಗ್ರಾಹಕ ಸ್ನೇಹಿಯನ್ನಾಗಿ ರೂಪಿಸಿ ಪುನರ್ ಜಾರಿಗೊಳಿಸಬೇಕು.
* ಕಾರ್ಮಿಕ ಕಾಯ್ದೆಗಳ ತಿದ್ದುಪಡಿಗಳನ್ನು ರದ್ದುಗೊಳಿಸಬೇಕು. ಸಾರ್ವಜನಿಕ ಉದ್ದಿಮೆಗಳ ಖಾಸಗೀಕರಣ ಕೈಬಿಡಬೇಕು. ಕನಿಷ್ಠ ವೇತನ ಜಾರಿಗೊಳಿಸಬೇಕು. ಎಲ್ಲ ರೀತಿಯ ಗುತ್ತಿಗೆ ಅಥವಾ ಹೊರಗುತ್ತಿಗೆ ಉದ್ಯೋಗ ಪದ್ಧತಿಯನ್ನು ಕೊನೆಗೊಳಿಸಬೇಕು. ಸರ್ಕಾರಿ, ಅರೆ ಸರ್ಕಾರಿ ಇಲಾಖೆ/ ಸಂಸ್ಥೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಬೇಕು.
* ಶೋಷಿತ– ಹಿಂದುಳಿದ ಹಾಗೂ ಬಡ ವರ್ಗಗಳ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಮಾರಕವಾದ ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ವಾಪಸ್ ಪಡೆಯಬೇಕು. ಪ್ರಗತಿಪರ ವೈಜ್ಞಾನಿಕ ಶಿಕ್ಷಣ ಕ್ರಮಕ್ಕೆ ಒತ್ತು ಕೊಡಬೇಕು.





ದೆಹಲಿ ರೈತ ಚಳುವಳಿಯ ಗೆಲುವನ್ನು ಬೆಂಗಳೂರಿನ ಇಎಂಎಸ್ ಭವನದ ಎದುರು CITU ಮತ್ತು KPRS ಸಂಘಟನೆಗಳ ನೇತೃತ್ವದಲ್ಲಿ ಸಂಭ್ರಮಿಸಲಾಯಿತು. ಈ ಸಂದರ್ಭದಲ್ಲಿ AIKS ನ ಅಖಿಲ ಭಾರತ ಜಂಟಿ ಕಾರ್ಯದರ್ಶಿ ವಿಜೂ ಕೃಷ್ಣನ್ ಉಪಸ್ಥಿತರಿದ್ದರು.

JANASHAKTHI KANNADA VARA PATRIKE: Printed, Published by **U. BASAVARAJ**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and
Printed at : Kriya Prakashana, No. 12, 18th Cross, Sampangirama Nagar, Bangalore 560027
Editor : **NITYANANDASWAMI**